UNIVERSAL LIBRARY
OU_198235
UNIVERSAL LIBRARY

**ಮೈಸೂರು ವಿಶ್ವವಿದ್ಯಾನಿಲಯ**

ಪ್ರಚಾರಪುಸ್ತಕಮಾಲೆ—೨೭

# ಭಾಸ

ಎಚ್. ಎಲ್. ಹರಿಯಪ್ಪ, ಎಂ.ಎ.

84
196—
No.27

ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು
೧೯೪೧

ಬೆಲೆ: ೩ ಆಣೆ

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ - ೨೭

# ಭಾಸ

ಎಚ್. ಎಲ್. ಹರಿಯಪ್ಪ, ಎಂ.ಎ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೧

ಪ್ರಥಮ ಮುದ್ರಣ—೧೫೦೫ ಪ್ರತಿಗಳು
೧೧-೬-೧೯೪೧

# ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಚಾನ್ಸಲರವರಾದ ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಅವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಅಪ್ಪಣೆಮಾಡಿದರು. ಅವುಗಳಲ್ಲಿ ವಿಶೇಷವಾದವು ಇವೆರಡು: ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ. ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣ ಶಿಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು; ಅಲ್ಲದೆ ಮೈಸೂರು, ಬೆಂಗಳೂರು ಈ ಎರಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯಗಳನ್ನು ಪಡೆದಿಲ್ಲದ, ಸಂಸ್ಥಾನದ ದೂರ ಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಉಚ್ಚ ವರ್ಗದ ಸಂಸ್ಕೃತಿಯನ್ನು ಹರಡುವುದು.

ವಿಶ್ವವಿದ್ಯಾನಿಲಯವು ಸ್ಥಾಪಿತವಾದಂದಿನಿಂದಲೂ ಈ ಎರಡು ಮುಖ್ಯ ಧ್ಯೇಯಗಳನ್ನು ತನ್ನ ಮುಂದೆ ತಪ್ಪದೆ ನಿಲ್ಲಿಸಿಕೊಂಡಿದೆ. ಅದರ ಕನ್ನಡ ಪ್ರಕಟನ ಶಾಖೆಯು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಅಚ್ಚುಹಾಕಿಸಿದೆ: ಅಲ್ಲದೆ, ಸಾಹಿತ್ಯ ವಿಜ್ಞಾನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನೂ ಹೊರತಂದಿದೆ. ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಎಲ್ಲ ಭಾಗಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದು ಬರುತ್ತಿದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸ

ವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು ಈಗಾಗಲೇ ಕರೆಯಲ್ಪಡುತ್ತಿರುವ ಉಪನ್ಯಾಸಮಾಲೆಗಳನ್ನು ಇಡಿಸಲಾಗುತ್ತಿದೆ. ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ ಸಂಗೀತಾದಿಗಳು ಜರುಗುತ್ತವೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಮಾಜವೆಲ್ಲಕ್ಕೂ ಸಂಬಂಧಿಸಿರುತ್ತವೆ. ಈ ಸಪ್ತಾಹಗಳು ನೆರವೇರಿದ ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎಲ್ಲ ಕಡೆಗಳಿಂದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ.

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ: ಒಂದೆರಡು ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತು ನಾಲ್ಕಾರು ಉಪನ್ಯಾಸಗಳನ್ನು ಹೇಳುವ ಯೋಜನೆ. ಆದರಿಂದ ಆ ಊರುಗಳ ಜನರಿಗೆ ಅನಲ್ಪಕಾಲ ಎಡೆಬಿಡದೆ ಜ್ಞಾನಬೋಧೆ ಸಿಕ್ಕುವುದು. ಪ್ರತ್ಯಕ್ಷ ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗೂ ಕೂಡ ಈ ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉದ್ದೇಶದಿಂದ ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ.

ಆಳಿದ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಎರಡು ಪವಿತ್ರ ಕರ್ತವ್ಯಗಳನ್ನು ನೇಮಿಸಿದರಷ್ಟೆ: ಸುಲಭ ಸಮಂಜಸ ಕನ್ನಡದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ; ಜನತೆಯಲ್ಲಿ ಉತ್ತಮ ಬಗೆಯ ಸಂಸ್ಕೃತಿಯ ಪ್ರಸಾರ. ಆ ಎರಡುಕರ್ತವ್ಯಗಳನ್ನೂ ಈ ಮಾರ್ಗವಾಗಿ ಒಂದೇಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸಗಳನ್ನು ಕೊಟ್ಟು ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು ಹೆಬ್ಬಯಕೆ.

ವಿಶ್ವವಿದ್ಯಾನಿಲಯ, ಮೈಸೂರು,
೧೫—೮—೧೯೪೦. **ಎನ್. ಎಸ್. ಸುಬ್ಬರಾವ್**

# ಬಿನ್ನಹ

ಈ ಪುಟ್ಟ ಪುಸ್ತಕವನ್ನು ಬರೆಯಲು ಮೊದಲು ಪ್ರೇರಿಸಿದವನು ಭಾಸಕವಿ. ನನ್ನಂಥವನು ಕೂಡ ಲೇಖನಿ ಹಿಡಿಯುವಂತೆ ಹುಚ್ಚು ಹಿಡಿಸಿದ ಅವನ ನಾಟಕಗಳ ಸ್ವಾರಸ್ಯವು ಅಮೋಘವಾದುದೇ ಸರಿ.

ಅತಿಶಯವಾದ ಸಹನೆಯಿಂದ ನನ್ನ ತೊದಲು ಮಾತುಗಳಿಗೆ ತಕ್ಕ ಸಂಸ್ಕಾರ ಮಾಡಿ ಈ ಪ್ರಬಂಧರೂಪವನ್ನು ಕೊಟ್ಟ ಸಂಪಾದಕ ಮಂಡಲಿಗೆ ಕೃತಜ್ಞನಾಗಿದ್ದೇನೆ. ಅಲ್ಲದೆ ನನ್ನ ಪ್ರಯತ್ನಕ್ಕೆ ವಿಶೇಷವಾದ ಮಮತೆಯಿಂದ ಉತ್ತೇಜನ ಕೊಟ್ಟ ಶ್ರೀಮಾನ್ ಎಸ್. ವಿ. ರಂಗಣ್ಣನವರಿಗೂ ಶ್ರೀಮಾನ್ ಜಿ. ಹನುಮಂತರಾಯರಿಗೂ ನನ್ನ ಮನಃಪೂರ್ವಕವಾದ ವಂದನೆಗಳು.

ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಈ ಗ್ರಂಥಮಾಲೆಗೆ ಜೀವಕಳೆಯನ್ನು ಕೊಟ್ಟಿರುವ ನಮ್ಮ ವೈಸ್-ಛಾನ್ಸೆಲರವರ ಮಹಿಮೆಯು ನಮ್ಮ ಹೃದಯವನ್ನಾವರಿಸಿ ಗ್ರಂಥಗಳನ್ನು ರಚಿಸುವಂತೆ ಪ್ರೋತ್ಸಾಹಿಸಿದೆಯೆನ್ನುವುದು ಉತ್ಪ್ರೇಕ್ಷೆಯಲ್ಲ. ಸುಗೃಹೀತನಾಮಧೇಯರಾದ ಆ ಪುರುಷಶ್ರೇಷ್ಠರನ್ನು ಈ ಸುಸಮಯದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಮೈಸೂರು,
೪-೬-೧೯೪೧

**ಎಚ್. ಎಲ್. ಹರಿಯಪ್ಪ**

# ಸೂಚನೆ

ಭಾಸಕವಿಯ ವಿಚಾರವು ಮುಂದೆ ಹೇಳಿರುವ ಮೂರು ಗ್ರಂಥಗಳಲ್ಲಿ ಸಮಗ್ರವಾಗಿ ಪರಿಶೀಲಿಸಲ್ಪಟ್ಟಿದೆ.

೧. **ಭಾಸಕವಿ**—ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರಿಂದ ರಚಿತವಾದುದು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಲ್ಲಿ ದೊರೆಯುತ್ತದೆ.

೨. **ಭಾಸಮಹಾಕವಿ**—ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್ಎಲ್.ಬಿ. ಅವರಿಂದ ರಚಿತವಾದುದು. ಗ್ರಂಥಕರ್ತರಿಂದ ಪಡೆಯಬಹುದು. (ಮೈಸೂರು ಸರ್ಕಾರದ ಕನ್ನಡ ಟ್ರಾನ್ಸ್ಲೇಟರು, ಅಠಾರ ಕಚೇರಿ, ಬೆಂಗಳೂರು).

೩. **'ಭಾಸ-ಎ ಸ್ಟಡಿ'**—ಶ್ರೀಮಾನ್ ಎ. ಡಿ. ಪುಸಲ್‌ಕರ್, ಎಂ.ಎ. ಅವರಿಂದ ಇಂಗ್ಲಿಷಿನಲ್ಲಿ ರಚಿತವಾದುದು—ಬೆಲೆ ಹದಿನೈದು ರೂಪಾಯಿ. ಲಾಹೋರಿನ ಪುಸ್ತಕ ವ್ಯಾಪಾರಿ ಮೆಹರ್‌ಚಂದ್ ಲಕ್ಷ್ಮಣದಾಸರಲ್ಲಿ ದೊರೆಯುತ್ತದೆ.

---

ಮುಂದಿನ ಪುಟಗಳಲ್ಲಿ ಅಲ್ಲಲ್ಲಿ ನಾಟಕಗಳ ಹೆಸರನ್ನು ಸಂಕೋಚ ಮಾಡಿ ಕೆಲವು ಅಂಕಿಗಳನ್ನು ಕೊಟ್ಟಿದೆ. ಈ ಅಂಕಿಗಳು ಪ್ರೊಫೆಸರ್ ಸಿ. ಆರ್. ದೇವಧರ್ (ಪೂನಾ) ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ "**ಭಾಸನಾಟಕಚಕ್ರ**"ದ ಪುಟಗಳಿಗೆ ಅನ್ವಯಿಸುತ್ತವೆ.

# ವಿಷಯಾನುಕ್ರಮಣಿಕೆ


೧. ಪೀಠಿಕೆ ...... ೧

೨. ಹದಿಮೂರು ನಾಟಕಗಳು ....... ೩

೩. ಭಾಸನ ವ್ಯಕ್ತಿತ್ವ ....... ೧೩

೪. ಕಥಾಸಂವಿಧಾನ ....... ೧೭

೫. ಪಾತ್ರರಚನೆ ....... ೩೬

೬. ಹಾಸ್ಯ ...... ೪೬

೭. ಭಾಸನ ಪ್ರಪಂಚ ....... ೫೪

ಕಿಂ ವಾ ಕಾವ್ಯರಸಃ ಸ್ವಾದುಃ
ಕಿಂ ವಾ ಸ್ವಾದೀಯಸೀ ಸುಧಾ ।

ಕಾವ್ಯದಲ್ಲಿ ನಾವು ಸವಿಯುವ ಅಮೃತ ರುಚಿಯೋ, ಸ್ವರ್ಗದಲ್ಲಿ ದೇವತೆಗಳು ಸವಿಯುವ ಅಮೃತವು ರುಚಿಯೋ ?

ವ್ಯಾಸಾದಿಭಿಃ ಕವಿವರೈರವಸಾದಿತೋಽಪಿ
ಶೂನ್ಯತ್ವಮಾಪ ಕಲಯಾಪಿ ನ ವಾಕ್ಪ್ರಪಂಚಃ ।
ಆನನ್ದನಿರ್ಭರಚಕೋರಸಹಸ್ರಪೀತಂ
ಚಾನ್ದ್ರಂ ಮಹಃ ಕ್ಷಯಮುಪೈತಿ ನ ಮಾತ್ರಯಾಪಿ ॥

— ಸೂಕ್ತಿಮುಕ್ತಾವಳಿ

ವ್ಯಾಸರೇ ಮುಂತಾದ ಕವಿಶ್ರೇಷ್ಠರು ಅಷ್ಟು ಸೂರೆಮಾಡಿದರೂ ಸಾಹಿತ್ಯಲೋಕವು ಎಳ್ಳಷ್ಟೂ ಮುಕ್ಕಾಗಲಿಲ್ಲ; ಸಾವಿರಾರು ಚಕೋರ ಪಕ್ಷಿಗಳು ಆನಂದದಿಂದ ಯಥೇಷ್ಟವಾಗಿ ಪಾನಮಾಡಿದರೂ ಚಂದ್ರನ ಕಾಂತಿ ಲೇಶವಾದರೂ ಕುಂದುವುದಿಲ್ಲ.

# ಭಾಸ

## ೧. ಪೀಠಿಕೆ

ಮಹಾಮಹೋಪಾಧ್ಯಾಯ ಪ್ರಾಕ್ತನವಿಮರ್ಶವಿಚಕ್ಷಣ ರಾವ್‌ಬಹದ್ದೂರ್ ರಾ. ನರಸಿಂಹಾಚಾರ್ಯರು ೧೯೦೯-೧೦ ನೆಯ ಸಾಲಿನ ಮೈಸೂರು ಆರ್ಕಿಯಲಾಜಿಕಲ್ ವರದಿಯಲ್ಲಿ ಸ್ವಪ್ನವಾಸವದತ್ತವೆಂಬ ಅಪೂರ್ವನಾಟಕ ಸಿಕ್ಕಿತೆಂಬ ಸಂತೋಷದ ಸಂಗತಿಯನ್ನು ತಿಳಿಸಿದರು. ಸುಮಾರು ಅದೇ ಸಮಯದಲ್ಲಿ ಅನಂತಶಯನದ ಮಹಾಮಹೋಪಾಧ್ಯಾಯ ಶ್ರೀಮಾನ್ ಟಿ. ಗಣಪತಿಶಾಸ್ತ್ರಿಗಳು ಪ್ರಾಚೀನ ತಾಳಪತ್ರಗಳನ್ನು ಶೇಖರಿಸಲು ದೇಶಸಂಚಾರ ಮಾಡುತ್ತಿದ್ದಾಗ ಹದಿಮೂರು ನಾಟಕಗಳನ್ನೊಳಕೊಂಡ ತಾಳಪತ್ರಗಳನ್ನು ದೈವವಶಾತ್ ಪಡೆದರು. ನಾಟಕಗಳು ಚೆನ್ನಾಗಿದ್ದುವು; ಆದರೆ ಒಂದರಲ್ಲಿಯೂ ಕವಿಯ ಹೆಸರು ಹೇಳಿರಲಿಲ್ಲ. ಕವಿ ಯಾರಿರಬಹುದೆಂದು ಶಾಸ್ತ್ರಿಗಳು ಊಹಿಸಲಾರಂಭಿಸಿದರು. ಆ ನಾಟಕಗಳಲ್ಲಿ ಒಂದಾಗಿದ್ದ ಸ್ವಪ್ನನಾಟಕವೆಂಬುದು ಅವರ ಊಹೆಗೆ ಮುಖ್ಯಾಧಾರವಾಯಿತು. ಸ್ವಪ್ನವಾಸವದತ್ತವೆಂಬ ಭಾಸರಚಿತವಾದ ನಾಟಕದಿಂದ ಆಲಂಕಾರಿಕರು ಕೆಲವು ಸಂದರ್ಭಗಳನ್ನು 'ಯಥಾ ಸ್ವಪ್ನವಾಸವದತ್ತಾಯಾಂ' 'ಯಥಾ ಸ್ವಪ್ನವಾಸವದತ್ತೇ ನಾಟಕೇ' 'ಯಥಾ ಭಾಸಕೃತೇ ಸ್ವಪ್ನವಾಸವದತ್ತೇ' ಎಂಬಂತಹ ವಾಕ್ಯಗಳಿಂದ ಉದಾಹರಿಸಿದ್ದಾರೆ. ಅಲ್ಲದೆ "ಭಾಸನು ಬರೆದ ನಾಟಕಗಳನ್ನು ವಿಮರ್ಶಕರು ಬೆಂಕಿಗೆ ಎಸೆಯಲಾಗಿ, ಅದು ಸ್ವಪ್ನವಾಸವದತ್ತ

ವನ್ನು ಮಾತ್ರ ದಹಿಸಲಿಲ್ಲ"[1] ಎಂಬ ರಾಜಶೇಖರನ ಉಕ್ತಿಯಿಂದ ಸ್ವಪ್ನವಾಸವದತ್ತ ನಾಟಕವನ್ನು ಬರೆದ ಕವಿ ಭಾಸನೇ ಎಂಬ ವಿಷಯವು ಸ್ಪಷ್ಟಪಡುತ್ತದೆ. ಪ್ರಕೃತ ತಮಗೆ ಸಿಕ್ಕಿದ ಸ್ವಪ್ನನಾಟಕವು ಭಾಸರಚಿತವಾದ ಸ್ವಪ್ನವಾಸವದತ್ತವೇ ಎಂದು ಶಾಸ್ತ್ರಿಗಳಿಗೆ ಹೊಳೆಯಿತು. ಹೆಚ್ಚು ಹೆಚ್ಚಾಗಿ ವಿಚಾರ ಮಾಡಿದಂತೆಲ್ಲಾ ಈ ಅಭಿಪ್ರಾಯವೇ ಧೃಢವಾಗುವಂತಾಯಿತು. ಅಷ್ಟೇ ಅಲ್ಲ. ಮೇಲ್ಕಂಡ ಸ್ವಪ್ನ ನಾಟಕಕ್ಕೂ ಅದರ ಜೊತೆಯಲ್ಲಿ ಸಿಕ್ಕಿದ ಇನ್ನು ಹನ್ನೆರಡು ನಾಟಕಗಳಿಗೂ ಶೈಲಿ ಸಂವಿಧಾನ ಪಾತ್ರರಚನೆಗಳಲ್ಲಿ, ಮುಖ್ಯವಾಗಿ ಕಾವ್ಯಪಾಕದಲ್ಲಿ, ಸಾಮ್ಯ ಕಂಡುಬಂದುದರಿಂದ ಒಟ್ಟು ಹದಿಮೂರು ನಾಟಕಗಳೂ ಭಾಸನಿಂದಲೇ ಬರೆಯಲ್ಪಟ್ಟುವೆಂದು ನಿರ್ಧರಿಸಿ ಶಾಸ್ತ್ರಿಗಳು ಅವುಗಳನ್ನು ಪ್ರಕಾಶಪಡಿಸಿದರು. ಆದರೆ ಈ ಸಿದ್ಧಾಂತದ ವಿಚಾರವಾಗಿ ಮೊನ್ನೆಮೊನ್ನೆಯವರೆಗೂ ವಾದ ವಿವಾದಗಳು ನಡೆದವು. ಕೊನೆಗೆ ಆ ಹದಿಮೂರು ನಾಟಕಗಳಲ್ಲಿ ಅಂತರ್ಗತವಾದ ಮಹಿಮೆಯಿಂದ ವಿವಾದಗಳು ಬಹುಮಟ್ಟಿಗೆ ಶಾಂತವಾಗಿ ಅವೆಲ್ಲವನ್ನೂ ಬರೆದವನು ಭಾಸನೇ ಎಂದೂ, ಬಹುಶಃ ಕ್ರಿ. ಶ. ಮೂರನೆಯ ಶತಮಾನದಲ್ಲಿ ಅವನು ಭೂಮಿಯನ್ನಲಂಕರಿಸಿದ್ದನೆಂದೂ ಅನೇಕರು ನಂಬುತ್ತಾರೆ.

ಭಾಸಕವಿಯ ಕೀರ್ತಿಯನ್ನೂ ಕೌಶಲವನ್ನೂ ಕಾಳಿದಾಸ, ಬಾಣಭಟ್ಟ, ವಾಕ್ಪತಿರಾಜ, ರಾಜಶೇಖರ, ಭೋಜದೇವ,

---

[1] ಭಾಸನಾಟಕಚಕ್ರೇಽಪಿ ಛೇಕೈಃ ಕ್ಷಿಪ್ತೇ ಪರೀಕ್ಷಿತುಮ್ ।
ಸ್ವಪ್ನವಾಸವದತ್ತಸ್ಯ ದಾಹಕೋಽಭೂನ್ನ ಪಾವಕಃ ॥
(ಜಲ್ಹಣನ ಸೂಕ್ತಿಮುಕ್ತಾವಳಿ (ಗಾಯಕವಾಡ ಗ್ರಂಥಮಾಲಾ) IV.48)

ಜಯದೇವ ಮುಂತಾದ ಕವಿಗಳು ಹೊಗಳಿದ್ದಾರೆ. ಇವನ ನಾಟಕಗಳು ವಾಮನ, ಅಭಿನವಗುಪ್ತ, ಮುಂತಾದ ಆಲಂಕಾರಿಕರ ಗಮನಕ್ಕೂ ಬಂದಿವೆ. ಈಗ ನಮ್ಮ ಮುಂದಿರುವ ನಾಟಕ ಚಕ್ರವೂ ಕೂಡ ಅಂಥವರ ಹೊಗಳಿಕೆಗೆ ಅರ್ಹನಾದ ಕವಿಯಿಂದಲೇ ರಚಿತವಾದುದೆಂದು ಹೇಳಲು ಸಾಕಾದಷ್ಟು ಆಧಾರಗಳಿವೆಯೆಂಬುದನ್ನು ಈ ಲಘುವಿಮರ್ಶೆಯಲ್ಲಿ ವಿಶದಪಡಿಸಲು ಯತ್ನಿಸಿದೆ. ಆ ಉದ್ದಾಮಕವಿ ಭಾಸನೇ ಎಂದು ನಮ್ಮ ಅಭಿಮತ.

## ೨. ಹದಿಮೂರು ನಾಟಕಗಳು

ಈಗ ದೊರೆತಿರುವ ಹದಿಮೂರು ನಾಟಕಗಳನ್ನು[1] ನಾಲ್ಕು ಗುಂಪಾಗಿ ವಿಂಗಡಿಸಬಹುದು :

೧. ಪ್ರತಿಜ್ಞಾಯೌಗಂಧರಾಯಣ, ಸ್ವಪ್ನವಾಸವದತ್ತ, ಅವಿಮಾರಕ ಮತ್ತು ಚಾರುದತ್ತ—ಈ ನಾಲ್ಕು ಬೃಹತ್ಕಥೆಯ ಆಧಾರದಮೇಲೆ ಬರೆದವು.

೨. ಪ್ರತಿಮಾ ಮತ್ತು ಅಭಿಷೇಕಗಳು ರಾಮಾಯಣ ಕಥೆಯನ್ನವಲಂಬಿಸಿವೆ.

೩. ಬಾಲಚರಿತವು ಶ್ರೀಕೃಷ್ಣನ ಬಾಲಲೀಲೆಗಳನ್ನು ವರ್ಣಿಸುತ್ತದೆ.

[1] ಭಾಸನು 23 ಅಥವಾ 30 ನಾಟಕಗಳನ್ನು ಬರೆದನೆಂದು ಪ್ರತೀತಿ.

೪. ಪಂಚರಾತ್ರ, ಮಧ್ಯಮವ್ಯಾಯೋಗ, ದೂತವಾಕ್ಯ, ದೂತಘಟೋತ್ಕಚ, ಕರ್ಣಭಾರ ಮತ್ತು ಊರುಭಂಗ—ಈ ಆರು ಮಹಾಭಾರತದ ಸಂದರ್ಭಗಳನ್ನು ಚಿತ್ರಿಸುವುವು.

ಕಾವ್ಯವನ್ನು ಮುಖ್ಯವಾಗಿ ನೋಡುವ ಕಾವ್ಯ (ದೃಶ್ಯ), ಕೇಳುವ ಕಾವ್ಯ (ಶ್ರವ್ಯ) ಎಂದು ಶಾಸ್ತ್ರಕಾರರು ವಿಭಜನೆ ಮಾಡುತ್ತಾರೆ. ಅದರಲ್ಲಿ ನೋಡುವ ಕಾವ್ಯ ಅಂದರೆ ನಾಟಕವು ಕಾವ್ಯಗಳಲ್ಲೆಲ್ಲಾ ಅತಿರಮ್ಯವಾದದ್ದು; ಭಿನ್ನಾಭಿರುಚಿಯುಳ್ಳ ಲೋಕವನ್ನು ಸಂತೋಷಪಡಿಸತಕ್ಕ ಏಕಮಾತ್ರ ಸಾಧನ.

ನಾಟಕವನ್ನು[1] ಲಾಕ್ಷಣಿಕರು ಹತ್ತುವಿಧವೆಂದು ಹೇಳಿದ್ದಾರೆ—ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ ಎಂಬುದಾಗಿ. ಇವು ದಶರೂಪಕವೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಇವಲ್ಲದೆ ಹದಿನೆಂಟು ಉಪರೂಪಕಗಳೂ ಉಂಟು. ಭಾಸಕವಿ ರಚಿಸಿದ ಕಾಲದಲ್ಲಿ ಈ ಭೇದಪ್ರಭೇದಗಳು ಪರಿಚಿತವಾಗಿದ್ದವೋ ಇಲ್ಲವೋ ತಿಳಿಯದು. ನೋಡಿದರೆ ಕವಿಯು ನಮಗೆ ತಿಳಿದ ಯಾವ ಲಕ್ಷಣಗ್ರಂಥವನ್ನೂ ಅಷ್ಟು ನಿಯಮವಾಗಿ

---

[1] ನಾಟಕ, ಪ್ರಕರಣ ಮುಂತಾದ ಪ್ರಬಂಧಜಾತಿಗೆ ರೂಪಕವೆಂಬುದು ಶಾಸ್ತ್ರಸಮ್ಮತವಾದ ಹೆಸರು. ಆದರೆ ಕಾಲಚಕ್ರವು ಉರುಳುತ್ತಾ ಹತ್ತು ವಿಧವಾದ ರೂಪಕಗಳಲ್ಲಿ ನಾಟಕವೆಂಬುದು ಮಾತ್ರ ಜನರಿಗೆ ಪ್ರಿಯವಾಯಿತು. ಮಿಕ್ಕವು ಬಳಕೆಯಲ್ಲಿ ನಿಲ್ಲಲಿಲ್ಲ. ಆದುದರಿಂದ ವೇಷಭೂಷಣಗಳನ್ನು ಬದಲಾಯಿಸಿಕೊಂಡು ರಂಗಸ್ಥಳದಲ್ಲಿ ಯಾವ ಪ್ರಬಂಧವನ್ನು ಅಭಿನಯಿಸಿದರೂ ಅದಕ್ಕೆ ನಾಟಕವೆಂಬ ಹೆಸರೇ ರೂಢಿಗೆ ಬಂತು. ಆದುದರಿಂದ ಇಲ್ಲಿ ನಾಟಕರೂಪಕ ಶಬ್ದಗಳ ವ್ಯತ್ಯಾಸವನ್ನು ಗಮನಿಸಬೇಕಾಗಿಲ್ಲ.

ಅನುಸರಿಸಿದಂತೆ ತೋರುವುದಿಲ್ಲ. ಲಕ್ಷಣಗ್ರಂಥಗಳಿಗೆ ಬಹುಶಃ ಇವನೇ ಸಾಮಗ್ರಿಯನ್ನೊದಗಿಸಿದನೆಂದರೆ ತಪ್ಪಲ್ಲ.

ಈ ನಾಟಕಗಳಲ್ಲಿ ಕಾಣುವ ಕವಿಯ ಕೈಚಳಕವನ್ನು ವಿಮರ್ಶಿಸುವುದಕ್ಕೆ ಮುಂಚೆ ಅವುಗಳಲ್ಲಿ ಪ್ರತಿಪಾದ್ಯವಾದ ಕಥಾವಸ್ತುವನ್ನು ಸಂಕ್ಷೇಪವಾಗಿ ತಿಳಿಯುವುದು ಆವಶ್ಯಕ.

**ಪ್ರತಿಜ್ಞಾಯೌಗಂಧರಾಯಣ** ಮತ್ತು **ಸ್ವಪ್ನವಾಸವದತ್ತ**—ಇವೆರಡೂ ಪೂರ್ವದಲ್ಲಿ ವತ್ಸದೇಶವನ್ನಾಳುತ್ತಿದ್ದ ಉದಯನ ಮಹಾರಾಜನ ಚರಿತ್ರೆಯನ್ನವಲಂಬಿಸಿವೆ. ವತ್ಸರಾಜನದು ತುಂಬಿದ ರಾಣಿವಾಸವೆಂದು ಕಾವ್ಯನಾಟಕಗಳಲ್ಲಿ ಪ್ರಖ್ಯಾತವಾಗಿದೆ. ಅಗ್ರಮಹಿಷಿಯಾದ ವಾಸವದತ್ತೆಯನ್ನು ಮದುವೆಯಾದುದು ಪ್ರತಿಜ್ಞಾಯೌಗಂಧರಾಯಣದಲ್ಲಿಯೂ, ಎರಡನೆಯ ಹೆಂಡತಿ ಪದ್ಮಾವತಿಯ ಪಾಣಿಗ್ರಹಣವು ಸ್ವಪ್ನವಾಸವದತ್ತದಲ್ಲಿಯೂ ಹೇಳಲ್ಪಟ್ಟಿವೆ.

ಸಾಕ್ಷಾತ್ ಭರತಚಕ್ರವರ್ತಿಯ ವಂಶಕ್ಕೆ ಸೇರಿದ ಉದಯನ ಮಹಾರಾಜನು ಸಕಲವಿದ್ಯಾನಿಪುಣ; ರೂಪದಲ್ಲಿ ಮನ್ಮಥ; ಶೂರ; ಸಂಗೀತದಲ್ಲಿ ಪಾರಂಗತ ಮತ್ತು ಆನೆಗಳನ್ನು ಅಡಗಿಸುವುದರಲ್ಲಿ ಚತುರ. ಅವನ ಹತ್ತಿರವಿದ್ದ ಘೋಷವತಿ ಎಂಬ ದಿವ್ಯವಾದ ವೀಣೆಯ ನಾದವು ಎಂಥ ಮದ್ದಾನೆಯನ್ನಾದರೂ ಬಗ್ಗಿಸುತ್ತಿತ್ತು. ಇಂಥ ಅಸಾಧಾರಣ ಗುಣಗಳುಳ್ಳ ರಾಜಕುಮಾರನಿಗೆ ಯಾರು ತಾನೆ ಲಕ್ಷ್ಯ? ಪಕ್ಕದ ರಾಜ್ಯದಲ್ಲಿ ಆಳುತ್ತಿದ್ದ ವೀರನೃಪತಿ ಮಹಾಸೇನನೆಂಬ ಬಿರುದುಳ್ಳ ಪ್ರದ್ಯೋತಮಹಾರಾಜನೂ ಇವನಿಗೆ ಲೆಕ್ಕಕ್ಕಿಲ್ಲ! ಪ್ರದ್ಯೋತನಾದರೋ ರೂಪಲಾವಣ್ಯದಲ್ಲಿ ರತಿದೇವಿಯಂತಿದ್ದ ತನ್ನ ಮಗಳಾದ ವಾಸವದತ್ತೆಯನ್ನು ಉದಯನನಿಗೇ ಕೊಡಬೇಕೆಂದು ಬಲವಾದ ಆಕಾಂಕ್ಷೆ

ಯುಳ್ಳವನಾಗಿದ್ದನು. ನೇರವಾಗಿ ಮದುವೆಯ ಪ್ರಸ್ತಾಪ ಮಾಡದೆ, ತನ್ನ ಮಗಳಿಗೆ ವೀಣೆಯನ್ನು ಕಲಿಸಬೇಕೆಂದು ಆಹ್ವಾನಿಸಿದನು. ಇದನ್ನು ಸ್ವಾಭಿಮಾನದಿಂದ ಉಬ್ಬಿದ ವತ್ಸ ರಾಜನು ನಿರಾಕರಿಸಿದನು. ಆಗ ಪ್ರದ್ಯೋತನು ತಂತ್ರದಿಂದ ವತ್ಸರಾಜನನ್ನು ಸೆರೆಹಿಡಿದು ತನ್ನ ಮಗಳಿಗೆ ವೀಣೆಯ ಪಾಠ ಹೇಳುವಂತೆ ನಿಯಮಿಸಿದನು. ಗುರುಶಿಷ್ಯರು ಕ್ರಮೇಣ ಪ್ರಣಯ ಪಾಶಕ್ಕೆ ಸಿಕ್ಕಿಬಿದ್ದರು! ಈ ಮಧ್ಯೆ ವತ್ಸರಾಜನ ಬಿಡುಗಡೆಗಾಗಿ ಟೊಂಕಕಟ್ಟಿ ಹಗಲಿರುಳೂ ದುಡಿಯುತ್ತಿದ್ದ ಮಂತ್ರಿಶ್ರೇಷ್ಠನಾದ ಯೌಗಂಧರಾಯಣನ ಸಹಾಯದಿಂದ ಬಂಧನವನ್ನು ಭೇದಿಸಿ ವಾಸವದತ್ತೆಯನ್ನು ತನ್ನ ರಾಜಧಾನಿಯಾದ ಕೌಶಾಂಬಿ ಗೊಯ್ದು ಮದುವೆಯಾದನು. ಇಷ್ಟು ಪ್ರತಿಜ್ಞಾಯೌಗಂಧರಾಯಣದ ಕಥಾವಸ್ತು.

ವೀರರಸಪ್ರಧಾನವಾದ ಈ ನಾಟಕದಲ್ಲಿ ಮಂತ್ರಿಯಾದ ಯೌಗಂಧರಾಯಣನ ಪ್ರತಿಜ್ಞೆ ಮತ್ತು ಸಾಹಸ ಇವು ಮುಖ್ಯ ವಿಷಯ. ಉದಯನ-ವಾಸವದತ್ತೆಯರ ಶೃಂಗಾರ ಗೌಣ. ಭಾಸನಕಾಲದಲ್ಲಿ ಪ್ರಯೋಗದಲ್ಲಿದ್ದ ರಾಜತಂತ್ರ ಇಲ್ಲಿ ಬಹು ಮಟ್ಟಿಗೆ ಪ್ರತಿಬಿಂಬಿತವಾಗಿದೆ.

ನವರಸಗಳಲ್ಲಿ ಮುಖ್ಯವಾದ ಶೃಂಗಾರವು ಅಕಳಂಕವಾದ ಉದಾತ್ತವಾದ ರೀತಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವುದೆಂದರೆ **ಸ್ವಪ್ನವಾಸವದತ್ತ**ದಲ್ಲಿ. ಕೇವಲ ಜಘನಸ್ತನನಿಷ್ಠವಾದ ಕಾಮುಕಶೃಂಗಾರ ಭಾಸನಿಗೆ ಅತ್ಯಂತ ಹೇಯವಾದುದು. ಆರು ಅಂಕಗಳನ್ನೊಳಕೊಂಡ ಈ ನಾಟಕದಲ್ಲಿ ಪದ್ಮಾವತೀ ಪರಿಣಯವು ಮುಖ್ಯವಸ್ತುವಾಗಿ ಕಾಣುವುದು. ಆದರೆ ನಿಜವಾಗಿ ಉದಯನ-ವಾಸವದತ್ತೆಯರ ವಿಪ್ರಲಂಭವು ಮನಸ್ಸನ್ನು

ಹೆಚ್ಚಾಗಿ ಸೆಳೆಯುತ್ತದೆ. ಅದರ ಗಾಂಭೀರ‍್ಯವೂ ಲಾವಣ್ಯವೂ ವರ್ಣನೆಯನ್ನು ಮೀರುವುವು.

ವಾಸವದತ್ತೆಯನ್ನು ಮದುವೆಯಾದನಂತರ ವತ್ಸರಾಜನು ಅತ್ಯಂತ ಸುಖಲೋಲುಪನಾದುದರಿಂದ ರಾಜ್ಯವು ಅನ್ಯಾಕ್ರಾಂತ ವಾಗುವ ಸ್ಥಿತಿ ಬಂತು. ಇದನ್ನು ತಪ್ಪಿಸಬೇಕಾದರೆ ಮಗಧ ರಾಜನಾದ ದರ್ಶಕನೊಡನೆ ಸ್ನೇಹ ಬೆಳೆಸಿ ಸಹಾಯವನ್ನು ಪಡೆಯುವುದು ಅತ್ಯಾವಶ್ಯಕವೆಂದು ಮಂತ್ರಿಯಾದ ಯೌಗಂಧ ರಾಯಣನಿಗೆ ತೋರಿತು. ದರ್ಶಕನ ತಂಗಿಯಾದ ಪದ್ಮಾವತಿ ಯನ್ನು ವತ್ಸರಾಜನಿಗೆ ತಂದುಕೊಂಡು ಈ ಸ್ನೇಹವನ್ನು ಏರ್ಪ ಡಿಸಬೇಕೆಂದು ಅವನು ತೀರ್ಮಾನಮಾಡಿಕೊಂಡನು. ಆದರೆ ವಾಸವದತ್ತೆ ಬದುಕಿರುವಾಗಲೇ ವತ್ಸರಾಜನು ಎರಡನೆಯ ಮದುವೆಗೆ ಹೇಗೆ ಸಮ್ಮತಿಸುವನು ? ಅಲ್ಲದೆ ಹೆಣ್ಣಿನಮೇಲೆ ಹೆಣ್ಣು ಕೊಡುವುದಕ್ಕೆ ತಾನೆ ಯಾರು ಒಪ್ಪುತ್ತಾರೆ? ಈ ಸಮಸ್ಯೆಯನ್ನು ಪರಿಹಾರಮಾಡಲು ಯೌಗಂಧರಾಯಣನು ಮಹಾರಾಣಿಯೊಂದಿಗೆ ಮಂತ್ರಾಲೋಚನೆಮಾಡಿ ಒಂದು ತಂತ್ರವನ್ನು ಹೂಡುತ್ತಾನೆ. ಎಂದಿನಂತೆ ರಾಜನು ಬೇಟೆ ಗಾಗಿ ಲಾವಾಣಕ ಗ್ರಾಮಕ್ಕೆ ಪ್ರವಾಸ ಹೋದಾಗ ಅವನಿಲ್ಲ ದಿರುವ ಸಮಯದಲ್ಲಿ ಬಿಡಾರಕ್ಕೆ ಬೆಂಕಿ ಹಾಕುವುದು ; ಅದ ರಿಂದ ವಾಸವದತ್ತೆ, ಅವಳನ್ನು ರಕ್ಷಿಸಲು ಹೋದ ಮಂತ್ರಿ ಯೌಗಂಧರಾಯಣ ಇವರಿಬ್ಬರೂ ಭಸ್ಮವಾದರೆಂದು ವದಂತಿ ಹುಟ್ಟಿಸುವುದು; ತಾವಿಬ್ಬರು ಮಾತ್ರ ವೇಷ ಮರೆಯಿಸಿ ಕೊಂಡು ಹೋಗುವುದು; ವಾಸವದತ್ತೆ ಸತ್ತುಹೋದಳೆಂಬ ಸಮಾಚಾರ ತಿಳಿದಮೇಲೆ, ಮಂತ್ರಿಗಳು ರಾಜನನ್ನು ಸಮಾ ಧಾನಗೊಳಿಸಿ, ಪುನರ್ವಿವಾಹಕ್ಕೆ ಒಪ್ಪಿಸುವುದು ; ಇದೇ ಆ

ತಂತ್ರ. ಅದಕ್ಕನುಸಾರವಾಗಿ ಲಾವಾಣಕದಲ್ಲಿ ಬಿಡಾರಕ್ಕೆ ಬೆಂಕಿ ಬಿದ್ದು ರಾಣಿಯೂ ಮಂತ್ರಿಯೂ ಆಹುತಿಯಾದರೆಂದು ವದಂತಿ ಹಬ್ಬಿತು. ಯೌಗಂಧರಾಯಣನು ಬ್ರಾಹ್ಮಣನಂತೆ ನಟಿಸುತ್ತಾ ವಾಸವದತ್ತೆಯನ್ನು ಕರೆದೊಯ್ದು ಅವಳ ಹೆಸರನ್ನು ಆವಂತಿ ಎಂದು ಬದಲಾಯಿಸಿ ಸಾಮಾನ್ಯ ಸ್ತ್ರೀಯಂತೆ ವೇಷವನ್ನು ಮರೆಯಿಸಿ ಮುಂದೆ ರಾಣಿಯಾಗಬಹುದಾದ ಪದ್ಮಾವತಿಯ ಹತ್ತಿರ ರಕ್ಷಣೆಗಾಗಿ ಬಿಡುತ್ತಾನೆ. ಇತ್ತಲಾಗಿ ಪ್ರಿಯೆಯ ಮರಣದಿಂದ ದುಃಖಿತನಾದ ಉದಯನನನ್ನು ಮಂತ್ರಿಗಳೆಲ್ಲರೂ ಶ್ರಮದಿಂದ ಸಮಾಧಾನಗೊಳಿಸಿ ಪುನರ್ವಿವಾಹಕ್ಕೆ ಒಪ್ಪಿಸುತ್ತಾರೆ. ಅನಂತರ ಪದ್ಮಾವತೀ ಪರಿಣಯ, ವತ್ಸರಾಜವಿಜಯ ಮತ್ತು ವಾಸವದತ್ತಾಸಮಾಗಮ ಇವು ಅತ್ಯಂತ ಸ್ವಾರಸ್ಯವಾದ ರೀತಿಯಲ್ಲಿ ಪ್ರತಿಪಾದಿಸಲ್ಪಟ್ಟಿವೆ.

ಈ ನಾಟಕದಲ್ಲಿ ಯೌಗಂಧರಾಯಣನ ತಂತ್ರವಾಗಲಿ ಪದ್ಮಾವತೀಪರಿಣಯವಾಗಲಿ ಮುಖ್ಯ ವಿಷಯಗಳಲ್ಲ. ವಾಸವದತ್ತೆಯು ಮೃತಳಾದರೂ ತನಗೆ ಪುನಃ ಮದುವೆಯಾದರೂ ವತ್ಸರಾಜನಿಗೆ ವಾಸವದತ್ತೆಯ ಮೇಲಿದ್ದ ಪ್ರೇಮ ಕದಲದಿರುವುದು; ಪತಿಯ ಹಿತಕ್ಕಾಗಿ ವಾಸವದತ್ತೆ ಸ್ವಾರ್ಥವನ್ನು ತ್ಯಜಿಸಿ ಗಂಡನಿಗೆ ಎರಡನೆಯ ಮದುವೆ ಮಾಡಿಸುವುದು; ವಾಸವದತ್ತೆ ಪದ್ಮಾವತಿಯರಿಗೆ ಒಬ್ಬರಿಗೊಬ್ಬರಲ್ಲಿ ಹುಟ್ಟಿದ ಸ್ನೇಹ ಸವತಿಯರಾದಮೇಲೂ ಅಚ್ಚಳಿಯದೆ ಇರುವುದು—ಇಂಥಾ ಅಸದೃಶವಾದ ಪ್ರೇಮಸಖ್ಯಗಳನ್ನು ಚಿತ್ರಿಸುವುದೇ ಇಲ್ಲಿ ಕವಿಯ ಮುಖ್ಯ ಉದ್ದೇಶ.

**ಅವಿಮಾರಕ**—ಸೌವೀರದೇಶಾಧಿಪತಿಯು ಒಂದು ವರ್ಷ ಅವಧಿಯುಳ್ಳ ಋಷಿಶಾಪದಿಂದ ಚಂಡಾಲನಾಗಿ ಬಂಧುವಾದ

ಕುಂತಿಭೋಜರಾಜನ ಪಟ್ಟಣದಲ್ಲಿ ಪತ್ನೀಪುತ್ರರೊಡನೆ ಅಜ್ಞಾತ ವಾಸ ಮಾಡುತ್ತಿದ್ದನು. ವಿಷ್ಣುಸೇನನೆಂಬವನೇ ಅವನ ಪುತ್ರ. ವಿಷ್ಣುಸೇನನು ಟಗರಿನ ವೇಷದಲ್ಲಿ ಬಂದ ರಾಕ್ಷಸನೊಬ್ಬನನ್ನು ಕೊಂದು ಅವಿಮಾರಕನೆಂದು ಪ್ರಸಿದ್ಧನಾದನು. ಒಂದಾನೊಂದು ದಿನ ಅವಿಮಾರಕನು ತನ್ನ ಸೋದರಮಾವನಾದ ಕುಂತಿಭೋಜನ ಕುವರಿ ಕುರಂಗಿಯನ್ನು ಊರಿನ ಉದ್ಯಾನದ ಹತ್ತಿರ ಮದ್ದಾನೆಯ ತುಳಿತದಿಂದ ರಕ್ಷಿಸಿದನು. ಆ ಸಂದರ್ಭದಲ್ಲಿ ಅವಿಮಾರಕ ಕುರಂಗಿಯರು ಪರಸ್ಪರ ಪ್ರಣಯಾಸಕ್ತರಾದರು. ಈ ಪ್ರಣಯ ಪ್ರಕರಣವೇ ನಾಟಕದ ವಸ್ತು. ಕುರಂಗಿಯ ದಾದಿಯ ಸಹಾಯ ದಿಂದ ಅವಿಮಾರಕನು ಕುಮಾರಿಯ ಅಂತಃಪುರಕ್ಕೆ ಪ್ರವೇಶವನ್ನು ಪಡೆದು ಕೆಲಕಾಲ ಸುಖವಾಗಿದ್ದನು. ಕೊನೆಗೆ ಗುಟ್ಟು ರಟ್ಟಾ ಯಿತು; ಅವಿಮಾರಕನು ಹೇಗೋ ಅಂತಃಪುರದಿಂದ ತಪ್ಪಿಸಿ ಕೊಂಡು ಹೋದನು. ಆದರೆ ಮದನಜ್ವರಪೀಡಿತನಾಗಿ ಪ್ರಾಣ ತ್ಯಾಗಮಾಡಲು ನಿಶ್ಚಯಿಸಿ ಅಲ್ಲಲ್ಲಿ ಅಲೆಯುತ್ತಾ ಒಬ್ಬ ವಿದ್ಯಾಧರನನ್ನು ಸಂಧಿಸಿ ಅವನ ಪ್ರಸಾದದಿಂದ ಒಂದು ಮಾಯಾ ಉಂಗುರವನ್ನು ಪಡೆದು ಅದರ ಬಲದಿಂದ ಅದೃಶ್ಯ ನಾಗಿ ಪುನಃ ಕುರಂಗಿಯ ಅಂತಃಪುರವನ್ನು ಪ್ರವೇಶಿಸುತ್ತಾನೆ. ಈ ವೇಳೆಗೆ ಶಾಪದ ಅವಧಿಯೂ ಮುಗಿದು ಅವಿಮಾರಕನ ನಿಜರೂಪವು ಗೊತ್ತಾಗಿ ಸರ್ವಸಮ್ಮತವಾದ ಅವಿಮಾರಕ ಕುರಂಗೀವಿವಾಹವು ನೆರವೇರುವುದು. ಕಲಾದೃಷ್ಟಿಯಿಂದ ಈ ನಾಟಕವು ಅಷ್ಟು ಸಮರ್ಪಕವಾಗಿಲ್ಲ. ಇದು ಕವಿಯ ಮೊದ ಮೊದಲನೆಯ ಕೃತಿಯಾಗಿರಬಹುದು.

**ಚಾರುದತ್ತ**—ಚಾರುದತ್ತನೆಂಬ ಬಡ ಬ್ರಾಹ್ಮಣನ ಚರಿತ್ರೆ ಈ ನಾಟಕದ ವಿಷಯ. ಉಜ್ಜಯಿನೀ ಪಟ್ಟಣದಲ್ಲಿ ಒಬ್ಬ

ಶ್ರೇಷ್ಠ ವರ್ತಕನ ಮಗನಾಗಿ ಜನಿಸಿ ತನ್ನ ಮಿತಿಮೀರಿದ ಧೈರ್ಯ ಔದಾರ್ಯದಿಂದ ಐಶ್ವರ್ಯವೆಲ್ಲವನ್ನೂ ಕಳೆದುಕೊಂಡು ಚಾರುದತ್ತನು ಬಹಳ ಬಡತನದಲ್ಲಿದ್ದನು. ಆದರೂ ಅವನ ಗುಣಗಳನ್ನು ಕೇಳಿ ಆ ಊರಿನ ಪ್ರಸಿದ್ಧಳಾದ ವಸಂತ ಸೇನೆಯೆಂಬ ವೇಶ್ಯೆ ಇವನಲ್ಲಿ ತುಂಬ ಅನುರಕ್ತಳಾಗಿದ್ದಳು. ಒಂದು ದಿನ ರಾಜನ ಭಾವಮೈದುನನೆಂದು ಹೇಳಿ ಕೊಳ್ಳುವ ಶಕಾರನು ವಿಟನೊಬ್ಬನೊಡನೆ ಈ ವೇಶ್ಯೆಯನ್ನು ಅಟ್ಟಿಬರುತ್ತಿರಲು, ಅವಳು ಭಯಪಟ್ಟು ಗಾಢಾಂಧಕಾರದಲ್ಲಿ ಅರೆಗದವಾಗಿದ್ದ ಚಾರುದತ್ತನ ಮನೆಯನ್ನು ಪ್ರವೇಶಿಸಿ ಅವ ನಿಗೆ ಶರಣಾಗತಳಾದಳು. ಆ ನೀಚರು ಹೊರಟುಹೋದ ಮೇಲೆ ವಸಂತಸೇನೆಯು ತನ್ನ ಮೈಮೇಲಿದ್ದ ಆಭರಣಗಳನ್ನು ತೆಗೆದು ರಕ್ಷಣೆಗಾಗಿ ಚಾರುದತ್ತನ ವಶದಲ್ಲಿ ಬಿಟ್ಟು ಮನೆಗೆ ಹಿಂದಿರುಗಿದಳು. ರಿಕ್ತದಶೆಯಲ್ಲಿಯೂ ಕೂಡ ಚಾರುದತ್ತನು ತೋರಿಸುತ್ತಿದ್ದ ಸದ್ಗುಣಗಳನ್ನು ತನ್ನ ಸೇವಕರಿಂದ ಕೇಳಿಕೇಳಿ ಅವನನ್ನು ಹೆಚ್ಚು ಹೆಚ್ಚಾಗಿ ಮೋಹಿಸಿದಳು. ಈ ಮಧ್ಯೆ ಅವಳ ಚೇಟಿಯಾದ ಮದನಿಕೆ ಸಜ್ಜಲಕನೆಂಬುವನಲ್ಲಿ ಅನು ರಕ್ತಳಾಗಿದ್ದಳು. ಅವಳನ್ನು ಸೇವಾವೃತ್ತಿಯಿಂದ ತಪ್ಪಿಸುವುದ ಕ್ಕೆಂದು ಸಜ್ಜಲಕನು ಚಾರುದತ್ತನ ಮನೆಗೆ ಕನ್ನಹಾಕಿ ಕೆಲವು ಆಭರಣಗಳನ್ನು ಕದ್ದು ತಂದು ಕ್ರಯವಾಗಿ ಅರ್ಪಿಸಿದನು. ಮದನಿಕೆ ಅವನ್ನು ನೋಡಿ ಚಕಿತಳಾದಳು. ಏಕೆಂದರೆ ಅವು ವಸಂತಸೇನೆಯವೇ ಆಗಿದ್ದುವು. ಈ ಅಕಾರ್ಯಕ್ಕಾಗಿ ಮದನಿಕೆ ಪ್ರಿಯನನ್ನು ಛೀಮಾರಿಮಾಡಿದಳು. ಅವರ ಸಂಭಾಷಣೆ ಅಕ ಸ್ಮಾತ್ತಾಗಿ ಕಿವಿಗೆ ಬಿದ್ದು ವಸಂತಸೇನೆ ಆ ಆಭರಣಗಳನ್ನು ಸ್ವೀಕರಿಸಿ ಸನ್ಮಾನಮಾಡಿ ಮದನಿಕೆಯನ್ನು ಬಿಡುಗಡೆ ಮಾಡು

ತ್ತಾಳೆ. ಇತ್ತ ನ್ಯಾಸವಾಗಿಟ್ಟಿದ್ದ ಆಭರಣಗಳು ಕಳವಾದು ದನ್ನು ಕಂಡು ಚಾರುದತ್ತನು ಮರುಗುತ್ತಿರಲು, ಅವನಿಗಿಂತಲೂ ಉದಾರಿಯಾದ ಅವನ ಪತ್ನಿ ತನ್ನ ಕೊರಳಹಾರವನ್ನು ತೆಗೆದು ಆ ಒಡವೆಗಳಿಗೆ ಬದಲಾಗಿ ಕೊಡುವಂತೆ ಬಿನ್ನೈಸಿ ಅರ್ಪಿಸು ತ್ತಾಳೆ. ಚಾರುದತ್ತನು ಹಾರವನ್ನು ವಸಂತಸೇನೆಗೆ ಕಳುಹಿ ಸುತ್ತಾನೆ. ಈ ಸತ್ಯಸಂಧತೆಗೆ ಮೆಚ್ಚಿ ಅತ್ಯಂತ ಪರವಶಳಾಗಿ ತಾನೇ ಚಾರುದತ್ತನನ್ನು ನೋಡಲುದ್ಯುಕ್ತಳಾಗುತ್ತಾಳೆ. ಇಲ್ಲಿಗೆ ನಾಟಕವು ಅರ್ಧಾಂತಕವಾಗಿ ನಿಲ್ಲುತ್ತದೆ.

ನಾಂದೀಭರತವಾಕ್ಯರೂಪವಾದ ಶಾಸ್ತ್ರೀಯ ಲಕ್ಷಣಗಳಿ ಲ್ಲವೆಂಬ ಕಾರಣದಿಂದ ಮಾತ್ರ ಈ ನಾಟಕ ಅರ್ಧಾಂತಕವಾ ಗಿದೆಯೆಂದು ಹೇಳಬೇಕು. ವಸ್ತುತಃ ಸೂಕ್ಷ್ಮವಾಗಿ ನೋ ಡಿವರೆ ನಾಟಕವು ಈ ಸಂಧಿಯಲ್ಲಿ ನಿಂತಿರುವುದು ಅದಕ್ಕೆ ಒಂದು ಅನಿರ್ವಚನೀಯವಾದ ಕಳೆಯನ್ನು ಕೊಟ್ಟಿದೆ. ಚಾರು ದತ್ತ ವಸಂತಸೇನೆಯರ ಸಮಾಗಮ ಸ್ಪಷ್ಟವಾಗಿ ವ್ಯಂಜಿತವಾ ಗಿದೆ; ಅದನ್ನು ಬಾಯಿಬಿಟ್ಟು ಹೇಳಬೇಕಾಗಿಲ್ಲ. ಧ್ವನಿಸಾಂ ದ್ರವಾದ ಈ ಮುಕ್ತಾಯವು ಅತ್ಯಂತ ಗಮನಾರ್ಹವಾಗಿದೆ.

**ಪ್ರತಿಮಾ** ಮತ್ತು **ಅಭಿಷೇಕ**—ರಾಮಾಯಣದ ಅಯೋ ಧ್ಯಾ ಮತ್ತು ಅರಣ್ಯಕಾಂಡಗಳ ಕಥೆ ಪ್ರತಿಮಾ ನಾಟಕದ ವಸ್ತು. ಕಿಷ್ಕಿಂಧಾ, ಸುಂದರ ಮತ್ತು ಯುದ್ಧಕಾಂಡಗಳ ಕಥೆ ಅಭಿಷೇಕ ನಾಟಕಕ್ಕೆ ಸೇರಿದ್ದು. ಎರಡು ನಾಟಕಗಳೂ ರಾಮನ ಪಟ್ಟಾ ಭಿಷೇಕದಲ್ಲಿ ಪರ್ಯವಸಾನವಾಗುತ್ತವೆ. ಕವಿಯು ಅಲ್ಲಲ್ಲಿ ಮೂಲ ವನ್ನು ಬಿಟ್ಟುಹೋಗಿದ್ದಾನೆ. ಅಂತಹ ಕೆಲವು ಮುಖ್ಯ ಸಂದರ್ಭ ಗಳನ್ನು ಮುಂದೆ ವಿಮರ್ಶಿಸಲಾಗಿದೆ. ಪ್ರತಿಮಾ ನಾಟಕವು ರಸಮಯ. ಮಾನವನ ಹೃದಯಾಂತರಾಳದಲ್ಲಿನ ಯಾವ

ನಾಡಿಯೂ ಇಲ್ಲಿ ಮಿಡಿಯದೇ ಇಲ್ಲ. ಒಂದೊಂದು ವೇಳೆ ಇದಕ್ಕಿಂತ ಸ್ವಪ್ನವಾಸವದತ್ತ ನಿಜವಾಗಿಯೂ ಮೇಲೆನಿಸುವುದೇ ಎಂಬ ಶಂಕೆ ತೋರುವುದೆಂದರೆ ಅತಿಶಯೋಕ್ತಿಯಲ್ಲ.

**ಬಾಲಚರಿತ**ನಾಟಕದಲ್ಲಿ ಶ್ರೀಕೃಷ್ಣನ ಬಾಲಲೀಲೆಗಳನ್ನು ಹೇಳಿದೆ. ಹಾಗೆಯೇ ಮಹಾಭಾರತದ ಮುಖ್ಯಮುಖ್ಯ ಸಂದರ್ಭಗಳನ್ನಾರಿಸಿ ಆಗಲೇ ಹೇಳಿರುವ ಪಂಚರಾತ್ರವೇ ಮೊದಲಾದ ಆರು ರೂಪಕಗಳು ರಚಿತವಾಗಿವೆ. ಇವುಗಳ ಕಥೆಯೆಲ್ಲವನ್ನೂ ಇಲ್ಲಿ ಹೇಳುವುದು ಚರ್ವಿತಚರ್ವಣ. ಒಂದೊಂದು ಮಾತಿನಲ್ಲಿ ಹೇಳಬಹುದಾದರೆ—**ಪಂಚರಾತ್ರ**ದಲ್ಲಿ ದುರ್ಯೋಧನನು ಯಜ್ಞಮಾಡಿ ದ್ರೋಣರಿಗೆ ಗುರುದಕ್ಷಿಣೆಯನ್ನೊಪ್ಪಿಸುತ್ತಾನೆ. ಪಾಂಡವರಿಗೆ ಅರ್ಧರಾಜ್ಯ ಕೊಡಲೊಪ್ಪುವುದೇ ದಕ್ಷಿಣೆ. ಇದು ಕವಿಕಲ್ಪಿತ. ವಿರಾಟಪರ್ವದ ಗೋಗ್ರಹಣಸಂದರ್ಭವನ್ನು ಇಲ್ಲಿ ಹೊಂದಿಸಿದೆ. ಪಾಂಡವರು ವನವಾಸಮಾಡುವಾಗ ನಡೆದ ಭೀಮ-ಹಿಡಿಂಬೆಯರ ಒಂದು ಪ್ರಣಯ ಸಮಾಗಮ **ಮಧ್ಯಮವ್ಯಾಯೋಗ**ದ ಕಲ್ಪಿತವಸ್ತುವಾಗಿದೆ. ಭಾರತಯುದ್ಧಕ್ಕೆ ಮುಂಚೆ ನಡೆದ ಕೃಷ್ಣಸಂಧಾನ **ದೂತವಾಕ್ಯ**ದ ವಿಷಯ. ಅಭಿಮನ್ಯು ಹತನಾದುದಕ್ಕೆ ಕೋಪಗೊಂಡ ಕೃಷ್ಣನು ಘಟೋತ್ಕಚನ ಕೈಯಲ್ಲಿ ಧೃತರಾಷ್ಟ್ರನಿಗೆ ಕಳುಹಿಸಿದ ಸಂದೇಶ **ದೂತಘಟೋತ್ಕಚ**ದ ವಸ್ತು. **ಕರ್ಣಭಾರ**ವು ಕರ್ಣನ ದೌರ್ಭಾಗ್ಯಪರಂಪರೆಯನ್ನು ಪಿಂಡೀಕರಿಸುತ್ತದೆ. **ಊರುಭಂಗ**ವು ದುರ್ಯೋಧನನ ಕೊನೆಯ ಸಾಹಸ. ಇವುಗಳಲ್ಲಿ ಪಂಚರಾತ್ರ ವಿನಾ ಉಳಿದವು ಏಕಾಂಕನಾಟಕಗಳು. ಕರ್ಣಭಾರ ಊರುಭಂಗಗಳು ಉತ್ತಮದರ್ಜೆಗೆ ಸೇರಿದವು; ಕರುಣರಸಪ್ರಧಾನವಾದವು.

---

# ೩. ಭಾಸನ ವ್ಯಕ್ತಿತ್ವ

ಕಳೆಯಿಂದ ತುಂಬಿದ ಕಾವ್ಯ ಅಥವಾ ನಾಟಕವನ್ನು ರಚಿಸುವುದರಲ್ಲಿ ಕವಿಯ ವ್ಯಕ್ತಿತ್ವವು ತಳಹದಿಯಾಗಿರುತ್ತದೆ. ಅವನ ಮನೋಧರ್ಮ, ಅಭಿರುಚಿ, ಪ್ರಾಪಂಚಿಕಜ್ಞಾನ ಇವೆಲ್ಲವೂ ಕಾವ್ಯದ ಆದ್ಯಂತವಾಗಿ ತಾಂಡವವಾಡುತ್ತವೆ. ಅದರಲ್ಲಿಯೂ ಕವಿಯು ಅನೇಕಗ್ರಂಥಗಳನ್ನು ರಚಿಸಿರುವುದಾದರೆ ಅವನ ವ್ಯಕ್ತಿಗ್ರಹಣವು ಹೆಚ್ಚು ಸುಲಭವೂ ನಿಕರವೂ ಆಗುವುದು. ಈ ಸುಯೋಗ ಭಾಸನ ವಿಷಯದಲ್ಲಿ ಲಭಿಸಿರುವುದು ಭಾಗ್ಯ.

ಭಾಸನ ವ್ಯಕ್ತಿಸ್ವರೂಪವನ್ನು ಶುಷ್ಕರೀತಿಯಲ್ಲಿ ಊಹಿಸುವುದಾದರೆ, ಅವನು ಬ್ರಾಹ್ಮಣಕುಲದಲ್ಲಿ ಹುಟ್ಟಿದವನು; ವಿಷ್ಣುಭಕ್ತ ಎಂದು ಗೊತ್ತಾಗುವುದು. ಯಾವುದೋ ರಾಜನ ಆಸ್ಥಾನದಲ್ಲಿ ಮನ್ನಣೆಯನ್ನು ಪಡೆದು ಕಷ್ಟಕಾರ್ಪಣ್ಯವಿಲ್ಲದೆ ಸುಖಿಯಾಗಿದ್ದನೆಂದೂ ಹೇಳಬಹುದು. ಈಗ ಅವನ ಮನೋಧರ್ಮ ಮುಂತಾದ ಸೂಕ್ಷ್ಮಗುಣಗಳನ್ನು ತಿಳಿಯೋಣ.

ಭಾಸನು ಸಹೃದಯರಲ್ಲಿ ಅಗ್ರಗಣ್ಯ. ಸಂಸಾರದಲ್ಲಿ ನುರಿತು, ಸಮಾಜದಲ್ಲಿ ಬೆರತು, ಸುಖದುಃಖಗಳಿಗೀಡಾಗಿ, ಕಾವ್ಯ ನಾಟಕಗಳನ್ನು ವ್ಯಾಸಂಗಮಾಡಿ, ಸ್ವತಂತ್ರವಾಗಿ ರಚಿಸಿ, ಪಕ್ವವಾದ ಮನಸ್ಸು, ವಿಕಾಸಹೊಂದಿದ ಹೃದಯ, ಮತ್ತು ವಸ್ತುವನ್ನು ಬಣ್ಣಿಸುವಾಗ, ಬಣ್ಣಿಸಿದ ವಸ್ತುವನ್ನು ನೋಡುವಾಗ, ತಲ್ಲೀನವಾಗುವ ತನ್ಮಯವಾಗುವ ಯೋಗ್ಯತೆ ಯಾರಿಗೆ ಇವೆಯೋ ಅವರು ಸಹೃದಯ (ಸಮಾನಹೃದಯ)ರೆನಿಸುತ್ತಾರೆ. ಭಾಸನ ಸಹೃದಯತ್ವವು ಅವನ ನಾಟಕಗಳ ಉದ್ದಕ್ಕೂ ಸ್ಪಷ್ಟವಾಗಿ ಕಾಣುವುದು. ಮರಣೋನ್ಮುಖನಾದ ದುರ್ಯೋಧನನು

ತನ್ನ ಪತ್ನಿಯಾದ ಪೌರವಿ, ಮಾಲವಿಯರಿಗೆ ಸಮಾಧಾನ ಹೇಳುತ್ತಾನೆ—“ನಾನು ಯುದ್ಧದಲ್ಲಿ ಪರಾಙ್ಮುಖನಾಗದೆ ವೀರನಾಗಿ ಹೋರಾಡಿ ಮರಣ ಹೊಂದಿದೆನೆಂದು ಸಮಾಧಾನ ಹೊಂದಿ. ನಾನು ಹೇಡಿಯಾಗಿ ಸಾಯುತ್ತಿಲ್ಲ.” ಎಂದು ಕರುಣಾರ್ದ್ರವಾಗಿ ಅವನು ಮಾತನಾಡುತ್ತಿರಲು-“ಬಲ್ಲೆಬಲ್ಲೆ ಪಾಂಡವರಿಗೆ ಮೋಸಮಾಡಿದ್ದಕ್ಕೆ ತಕ್ಕದ್ದಾಯಿತು.” ಎಂಬ ಮುಯ್ಯಿನ ಭಾವನೆ ನಮ್ಮ ಮನಸ್ಸಿನಲ್ಲಿ ಮೂಡುವುದೇ ? ಹಾಗೆ ಮೂಡಿದರೆ ಆ ಉದಾತ್ತಸನ್ನಿವೇಶದ ಮತ್ತು ಆ ಘನಪಾತ್ರದ ಜೀವಾಳವು ತಿಳಿಯುವುದೇ ? ನಾವು ದುರ್ಯೋಧನನ ಸ್ಥಾನದಲ್ಲಿದ್ದರೆ ಎಷ್ಟು ದುಃಖಪಡುತ್ತಿದ್ದೆವೆಂಬ ಅನುಕಂಪವು ಹುಟ್ಟಬೇಕು. ಅಹೋ ವೈರಂ ಪಶ್ಚಾತ್ತಾಪಸ್ಸಂವೃತ್ತಃ ! —ವೈರವು ಪಶ್ಚಾತ್ತಾಪವಾಗಿ ಪರಿಣಮಿಸಿತೇ ಎಂಬ ಬಲರಾಮನ ಮಾತುಗಳ ಮೂಲಕ ಕವಿಯು ಅನುಕಂಪವನ್ನು ಸೂಚಿಸುತ್ತಾನೆ. ಈ ಪ್ರಕಾರವಾದ ಅನುಕಂಪಭಾವ, ದಯಾಪರತ್ವ ಅಥವಾ “ಸಾನುಕ್ರೋಶತ್ವ” ವನ್ನು ಭಾಸನು ಪ್ರಧಾನವಾಗಿ ಹೊಗಳಿದ್ದಾನೆ. ಅವನು ರಂಗಕ್ಕೆ ತಂದಿರುವ ಉದಾತ್ತನಾಯಕರೆಲ್ಲರೂ ಸಾನುಕ್ರೋಶರು. ವತ್ಸರಾಜನಾದ ಉದಯನನು ಎರಡನೆಯ ವರನಾದರೂ ಚಿಂತೆಯಿಲ್ಲ. ಪದ್ಮಾವತಿ ಅವನನ್ನು ಮದುವೆಯಾಗಲು ಸಿದ್ಧ. ಏತಕ್ಕೆ? ಅವನು ಸಾನುಕ್ರೋಶನೆಂದು. ವಾಸವದತ್ತೆ ಮೋಹಗೊಂಡುದೂ ಹಾಗೆಯೇ—ಅಯಮಪಿ ಜನಃ ಏವಮುನ್ಮಾದಿತಃ (ಸ್ವಪ್ನ—14). ತನ್ನ ರೂಪಲಾವಣ್ಯಗಳಿಂದಲೂ ಕಲಾನಿಪುಣತೆಯಿಂದಲೂ ಶ್ರೀಮಂತರನ್ನು ಸಂತತವೂ ಕಾತರಪಡಿಸುತ್ತಿದ್ದ ವಾರಸ್ತ್ರೀ ವಸಂತಸೇನೆ ದರಿದ್ರಚಾರುದತ್ತನನ್ನು ಮೋಹಿಸಿದಳು ;

ಕಾರಣ ಚಾರುದತ್ತನು ಸಾನುಕ್ರೋಶನೆಂದು. ಮಗಳಿಗೆ ಗಂಡು ಹುಡುಕಬೇಕಾದರೆ ವರನು ಎಂಥವನಾಗಿರಬೇಕು? ಮೊದಲಾಗಿ ಹುಡುಗ ಒಳ್ಳೆಯ ವಂಶಕ್ಕೆ ಸೇರಿರಬೇಕು. ಅನಂತರ ಅವನು ಸಾನುಕ್ರೋಶನಾಗಿರಬೇಕು. ಎಲ್ಲಾದರೂ ಉಂಟೆ? ಅನುಕ್ರೋಶವುಳ್ಳ ಮನುಷ್ಯ ಮೃದು, ಸಂಕೋಚಸ್ವಭಾವದವನು, ಸಾಧುಪ್ರಾಣಿ. ಅಂತಹವನನ್ನು ಕಂಡರೆ ಎಲ್ಲರೂ ತಲೆಯಮೇಲೇರುವುದಿಲ್ಲವೇ? ಇಲ್ಲ; ಸಾನುಕ್ರೋಶತ್ವವು ಮೃದುವಾದರೂ ಪರಿಣಾಮದಲ್ಲಿ ಬಲವಾದ ಗುಣ (ಪ್ರತಿಜ್ಞಾ ಅಂ. 2 ಶ್ಲೋ. 4). ಶ್ರೀರಾಮಚಂದ್ರನನ್ನು "ಸಾನುಕ್ರೋಶೋ ಜಿತೇಂದ್ರಿಯಃ" ಎಂಬದಾಗಿ ಆದಿಕವಿ ಹೊಗಳಿ ನಮಗೆ ಪರಿಚಯಮಾಡಿ ಕೊಟ್ಟಿದ್ದಾರೆ. ಭಾಸನ ಅಭಿಪ್ರಾಯದಲ್ಲಿ ಅನುಕ್ರೋಶತ್ವ ಅಥವಾ ದಯಾಪರತ್ವ ಅಥವಾ ಭೂತದಯಾಪಶ್ಚಾತ್ತಾಪವೆಂಬುದು ಒಂದು ದೊಡ್ಡ ಗುಣ. ಶೌರ್ಯ, ಸಾಹಸ ಮುಂತಾದ ಪುರುಷಗುಣಗಳಿಗಿಂತಲೂ ಈ ಮೆತ್ತನೆಯ ಸ್ವಭಾವವು ಮಹಾಪುರುಷರಿಗೆ ಭೂಷಣ ಎಂಬೀಭಾವವನ್ನು ಮೇಲಿಂಡಮೇಲೆ ಪ್ರಕಾಶಗೊಳಿಸಿರುವ ಕವಿಪುಂಗವ ಭಾಸನೂ ಕೂಡ ಅದೇ ಸ್ವಭಾವದವನು, ದಯಾಮಯ ಎಂದು ಭಾವಿಸಿದರೆ ತಪ್ಪಾಗಲಾರದು.

ಹಾಗೆಯೇ ಈ ನಾಟಕಚಕ್ರದಲ್ಲಿ ಮಂಡಿಸಿರುವ ಕಥಾವಸ್ತುವನ್ನೂ ಪಾತ್ರಗಳನ್ನೂ ಧ್ಯಾನಿಸಿದರೆ ಕವಿಯ ವಿಷಯವಾಗಿ ಇನ್ನೊಂದು ಅಂಶ ಹೊರಬೀಳುವುದು. ಲೋಕದಲ್ಲಿ ಸುಗುಣದುರ್ಗುಣ, ಸುಖದುಃಖ, ಸಂಪತ್ತುವಿಪತ್ತು ಮುಂತಾದ ದ್ವಂದ್ವಗಳು ಅಪರಿಹಾರ್ಯ; ಈ ಜೋಡಿಗಳಿಗೆ ಭಗವಂತ ವಿರಹದುಃಖವನ್ನೇತಕ್ಕೋ ಕರುಣಿಸಲಿಲ್ಲ! ಇವುಗಳಲ್ಲಿ

ದುಃಖವನ್ನೇ ಹೆಚ್ಚುಮಾಡಿಕೊಂಡು ಕೊರಗುವುದು ಕೆಲವರ ಜಾಯಮಾನ. ಎಷ್ಟೇ ಕಷ್ಟಬಂದರೂ ಒಂದಲ್ಲ ಒಂದು ದಿವಸ ಸುಖ ಬಂದೇಬರುತ್ತದೆ—ಜೀವನ್ ಭದ್ರಾಣಿ ಪಶ್ಯತಿ—ಏತಿ ಜೀವನ್ತಮಾನನ್ದೋ ನರಂ ವರ್ಷಶತಾದಪಿ—ಎಂಬ ನಂಬಿಕೆಯಿಂದ ಪ್ರಪಂಚದ ನಿಸ್ಸಾರತೆಯನ್ನು ಅಷ್ಟಾಗಿ ಎಣಿಸದೆ ಇರುವುದು ಇನ್ನುಕೆಲವರ ಜಾಯಮಾನ. ಈ ಧಾಟಿಯಲ್ಲಿಯೇ ಹೆಚ್ಚು ನುರಿತ ಸಾಧುಜನರು ಒಂದು ಸದ್ವರ್ತನೆ, ಪರೋಪಕಾರಬುದ್ಧಿ, ಜನತೆಯಲ್ಲಿ ವಿಶ್ವದಲ್ಲಿ ಒಳ್ಳೆಯ ಅಂಶಗಳನ್ನೇ ನೆನೆಯುತ್ತಾ ಕೆಟ್ಟುದನ್ನು ಮರೆಯುವ ಮನೋವೈಶಾಲ್ಯ ಇವುಗಳನ್ನು ಹೊಂದಿ, ನಶ್ವರವಾದರೂ ಈ ಜೀವನವನ್ನು ಸೌಂದರ್ಯವಿಶಿಷ್ಟವನ್ನಾಗಿ ಮಾಡಿಕೊಳ್ಳುತ್ತಾರೆ. ಭಾಸನ ಮನಃಪ್ರವೃತ್ತಿಯೂ ಈ ತೆರನಾದುದೆಂದು ಧಾರಾಳವಾಗಿ ಹೇಳಬಹುದು. ಜಯದೇವಕವಿಯ ಅಭಿಪ್ರಾಯದಲ್ಲಿ ಭಾಸನು ಕವಿತೆಯೆಂಬ ಸ್ತ್ರೀಯ—ಅಂದರೆ ಸರಸ್ವತಿಯ—ಹಾಸ, ಅಥವಾ ಮುಗುಳ್ನಗೆ.[1] ಈ ಪ್ರಶಂಸೆ ಅಕ್ಷರಶಃ ನಿಜ. ಸಂಸಾರದ ಸಾರಾಸಾರತೆಯನ್ನರಿತು, ಕಷ್ಟವೆಂದರೆ ಹೆದರದೆ, ಸುಖದಿಂದ ಮೆರೆಯದೆ ಇರುವ ಸಮದೃಷ್ಟಿಯ ಕುರುಹಾದ ಮಂದಹಾಸದಿಂದ ಕಂಗೊಳಿಸುತ್ತಿದ್ದ ಮಂಗಳಮಯಮೂರ್ತಿ ಭಾಸನದೆಂದು ಭಾವಿಸಬಹುದು.

---

[1] ಯಸ್ಯಾಶ್ಚೋರಶ್ಚಿಕುರನಿಕರಃ ಕರ್ಣಪೂರೋ ಮಯೂರೋ
ಭಾಸೋ ಹಾಸಃ ಕವಿಕುಲಗುರುಃ ಕಾಲಿದಾಸೋ ವಿಲಾಸಃ ।
ಹರ್ಷೋ ಹರ್ಷೋ ಹೃದಯವಸತಿಃ ಪಂಚಬಾಣಸ್ತು ಬಾಣಃ
ಕೇಷಾಂ ನೈಷಾ ಕಥಯ ಕವಿತಾಕಾಮಿನೀ ಕೌತುಕಾಯ ॥

(ಪ್ರಸನ್ನರಾಘವ ನಾಟಕದಲ್ಲಿ)

# ೪. ಕಥಾಸಂವಿಧಾನ

ಈ ಪ್ರಕಾರವಾದ ವ್ಯಕ್ತಿಗುಣದಿಂದ ಭಾಸನ ಕಲಾಕೌಶಲವು ಶ್ರೇಷ್ಠವಾಗಿ ಪರಿಣಮಿಸಿದೆ. ಕಥಾಸಂವಿಧಾನದಲ್ಲಾಗಲಿ ಪಾತ್ರರಚನೆಯಲ್ಲಾಗಲಿ ಈ ಕವಿಯ ಸಮಕ್ಕೆ ಬರುವವರು ಇಲ್ಲವೆಂದರೆ ಸಾಹಸೋಕ್ತಿಯಲ್ಲ. ಕಾಳಿದಾಸನಿಗಿಂತಲೂ ಚತುರನೆಂದರೆ ಲೋಕಕ್ಕೆ ಅಸಮಾಧಾನವಾಗಬಹುದು. ಕಾಳಿದಾಸನಂತು ಬಹಳಕಾಲ ಸಾರ್ವಭೌಮಪೀಠವನ್ನಲಂಕರಿಸಿದ್ದಾನೆ! ಭಾಸನ ನಾಟಕಗಳು ಸಿಕ್ಕಿದಮೇಲೆಯೂ ಆ ಪೀಠಕ್ಕೆ ಅವನ ಹಕ್ಕು ನಿರ್ವಿವಾದವಾದುದೇ ಎಂಬುದನ್ನು ನಿರ್ಧರಿಸಲು ಕಾಲಬಂದಿದೆ.

ಪ್ರಕೃತ, ಭಾಸಕವಿಯು ಕಥಾಸಂದರ್ಭಗಳನ್ನು ನ್ಯಾಯವಾಗಿ ಜೋಡಿಸುವುದರಲ್ಲಿ, ಮೂಲಕಥೆಯನ್ನು ಮಾರ್ಪಡಿಸುವುದರಲ್ಲಿ ವಿಶೇಷವಾದ ಔಚಿತ್ಯವನ್ನು ತೋರಿಸಿದ್ದಾನೆ. ಭಾಸನಾಟಕಚಕ್ರದಿಂದ ಉದಾಹರಣೆಗಳನ್ನು ಜ್ಞಾಪಿಸಬಹುದಾದರೆ—ಸ್ವಪ್ನವಾಸವದತ್ತದಲ್ಲಿ ಚಂಡಾಟದ ದೃಶ್ಯ, ವತ್ಸರಾಜವಿದೂಷಕರ ಸಂವಾದ, ಸ್ವಪ್ನಾಂಕ; ಪ್ರತಿಜ್ಞಾಯೌಗಂಧರಾಯಣ ಮತ್ತು ಅವಿಮಾರಕ ಇವುಗಳಲ್ಲಿ ಚಿತ್ರಿತವಾಗಿರುವ ಕನ್ಯಾಪಿತೃಗಳ ಆತಂಕ; ಚಾರುದತ್ತದಲ್ಲಿ ಬಡವನಾದರೂ ಚಾರುದತ್ತನು ತೋರಿಸುವ ಆತ್ಮಗೌರವ, ವಾರಾಂಗನೆಯಾದರೂ ವಸಂತಸೇನೆಯು ತೋರಿಸುವ ಅವ್ಯಾಜ ಪ್ರೇಮ ; ಬಾಲಚರಿತ ಪಂಚರಾತ್ರಗಳಲ್ಲಿ ಹಳ್ಳಿಯ ಚಿತ್ರ ; ಪ್ರತಿಮಾನಾಟಕದಲ್ಲಿ ಸೀತಾರಾಮರ ಸರಳತೆ, ಭರತನ ಸ್ವಾರ್ಥತ್ಯಾಗ ; ಕರ್ಣಭಾರದಲ್ಲಿ ಕರ್ಣನ ಘನತೆ, ಔದಾರ್ಯ; ಪಂಚರಾತ್ರ ಊರು

ಭಂಗ ದೂತವಾಕ್ಯಗಳಲ್ಲಿ ದೇದೀಪ್ಯಮಾನನಾದ ಕುರುವೀರ ದುರ್‍ಯೋಧನನ ಅಭಿಮಾನ ಮುಂತಾದುವು ಅಚ್ಚಳಿಯದೆ ನಮ್ಮ ಚಿತ್ತಫಲಕದಲ್ಲಿ ನಿಲ್ಲುವುವು.

ರಸವತ್ತಾದ ಸನ್ನಿವೇಶಗಳನ್ನು ಆರಿಸಿಕೊಂಡು ಕಥೆಯ ತಂತುವನ್ನು ಸಹಜ ರೀತಿಯಲ್ಲಿ ಬೆಳೆಸುವುದು, ಮನ ಒಪ್ಪುವಂತೆ ಪಾತ್ರರಚನೆ ಅಂದರೆ ಪಾತ್ರಗಳನ್ನು ಸರಿಯಾದ ಬಣ್ಣದಲ್ಲಿ ಪ್ರಕಾಶಪಡಿಸುವುದು, ಪಾತ್ರಗಳ ಬಾಯಲ್ಲಿ ಸಮಯಕ್ಕೆ ತಕ್ಕಂತೆ ಮಾತನಾಡಿಸುವುದು, ಮೇಲಾಗಿ ಲಲಿತವಾದ ಚಮತ್ಕಾರವಾದ ಭಾಷಾಶೈಲಿ—ಇವು ಕವಿಯ ಔಚಿತ್ಯಜ್ಞಾನದ ಕುರುಹುಗಳೆನ್ನಬಹುದು.

ಕರ್ಣಭಾರವನ್ನೇ ತೆಗೆದುಕೊಳ್ಳೋಣ. ಕರ್ಣನು ಶಲ್ಯರಾಜನನ್ನು ಸಾರಥಿಯನ್ನಾಗಿ ಮಾಡಿಕೊಂಡು ಅರ್ಜುನನನ್ನು ಎದುರಿಸುವ ಸನ್ನಿವೇಶ; ಅವನ ಜೀವನದ ಹೆಬ್ಬಯಕೆ ಅರ್ಜುನನನ್ನು ಕೊಲ್ಲಬೇಕೆನ್ನುವುದು; ಈಗಲೀಗ ಗೆಲ್ಲಬೇಕು ಇಲ್ಲವೇ ಸಾಯಬೇಕು. ಇಂತಹ ಸ್ಥಿತಿಯನ್ನು ಆಯ್ದುಕೊಂಡು, ಕೇವಲ ಹತ್ತು ಪುಟಗಳಲ್ಲಿ ಅಡಕವಾಗಿರುವ, ರಂಗಸ್ಥಳದಲ್ಲಿ ಇಪ್ಪತ್ತು ಅಥವಾ ಮೂವತ್ತು ನಿಮಿಷಮಾತ್ರದಲ್ಲಿ ಪರ್‍ಯವಸಾನವಾಗುವ, ಲಘುವಾದರೂ ಮಹತ್ತರವಾದ ರೂಪಕವನ್ನು ರಚಿಸಿದ್ದಾನೆ ಕವಿ. ಗ್ರೀಕರ ರುದ್ರನಾಟಕಗಳನ್ನು ಓದಿದರೆ ಅಥವಾ ನೋಡಿದರೆ ಪ್ರೇಕ್ಷಕರಿಗೆ ಯಾವ ರಸಭಾವ, ಯಾವ ಕಾವ್ಯಾನಂದ ಅನುಭವಕ್ಕೆ ಬರಬಹುದೋ ಅದೇ ರಸಭಾವ ಕಾವ್ಯಾನಂದ ಈ ಕರ್ಣಭಾರವನ್ನು ಓದಿದರೆ ಅಥವಾ ನೋಡಿದರೆ ಉಂಟಾಗುವುದೆಂದರೆ ಅತಿಶಯೋಕ್ತಿಯಲ್ಲ.

ಪ್ರತಿಮಾನಾಟಕದಲ್ಲಿ ಸೀತೆಯು ಆಟಕ್ಕಾಗಿ ನಾರುಮಡಿ

ಯನ್ನುಟ್ಟ ಸುಂದರ ಸಂದರ್ಭದಿಂದ (ಅಂ. ೧) ಪ್ರಾರಂಭಿಸಿ ಮನಸ್ಸನ್ನು ಕರಗಿಸುವಂತೆ ಸನ್ನಿವೇಶವು ಬೆಳೆದಿದೆ. ಪಾಶ್ಚಾತ್ಯ ಲಾಕ್ಷಣಿಕರು ವರ್ಣಿಸುವ "ಡ್ರಮಾಟಿಕ್ ಐರನಿಗೆ" ಇದೊಂದು ಉತ್ಕೃಷ್ಟ ನಿದರ್ಶನ. ಆಟಕ್ಕಾಗಿ ಉಟ್ಟ ನಾರು ಮಡಿಯನ್ನು ಸೀತಾದೇವಿ ಬದಲಾಯಿಸಲಾಗಲೇ ಇಲ್ಲ; ಹಾಗೆಯೇ ಕಾಡಿಗೆ ಹೊರಟು ಹೋಗಬೇಕಾಯಿತು!

ಶ್ರೀರಾಮನನ್ನು ಯುವರಾಜನ ಪಟ್ಟಕ್ಕೇರಿಸಬೇಕೆಂದು ನಿಶ್ಚಯ ವಾಗಿ ಸಕಲಸಾಮಗ್ರಿಗಳು ಸಿದ್ಧವಾಗಿವೆ. ಎಲ್ಲೆಲ್ಲಿಯೂಸಂಭ್ರಮ. ಅರಮನೆಯಲ್ಲಂತೂ ಕಂಚುಕಿ, ಪುರೋಹಿತ, ಪ್ರತೀಹಾರಿಗಳ ಓಡಾಟ. ಈ ಮಧ್ಯೆ ತನ್ನ ರಾಣಿವಾಸದಲ್ಲಿ ಮುಗ್ಧೆ ಸೀತಾದೇವಿ ಹೊರಗೇ ನಾಗುತ್ತದೆಂಬ ಯೋಚನೆ ಲೇಶವೂ ಇಲ್ಲವೋ ಎಂಬಂತೆ ತನ್ನ ಸಖಿಯ ರೊಂದಿಗೆ ವಿನೋದದಿಂದಿರುತ್ತಾಳೆ. ಆಗ ನಾರುಮಡಿಯನ್ನು ಹಿಡಿದು ಕೊಂಡು ಅವದಾತಿಕೆ ಪ್ರವೇಶಿಸುತ್ತಾಳೆ.

ಅವ— ಏನಾಶ್ಚರ್ಯ! ಅನರ್ಥ! ಹುಡುಗಾಟಕ್ಕಾಗಿ ಈ ನಾರುಮಡಿ ಯನ್ನು ತೆಗೆದುಕೊಂಡುಬಂದರೂ ನನಗೆ ಇಷ್ಟು ಕಳವಳವಾಗುತ್ತಿದೆ. ನಿಜವಾದ ಆಸೆಯಿಂದ ಇತರರ ಸ್ವತ್ತನ್ನು ಕದಿಯುವವರಿಗೆ ಹೇಗಾಗ ಬೇಕು!

(ಪರಿವಾರಸಹಿತ ಸೀತೆಯ ಪ್ರವೇಶ)

ಸೀತೆ—ಎಲೈ, ಮುಖದಕಳೆ ನೋಡಿದರೆ ಈ ಅವದಾತಿಕೆ ಏನೋ ಹೆದರಿರುವಂತೆ ತೋರುತ್ತದೆ.

ಚೇಟಿ—ಭಟ್ಟಿನಿ, ಸೇವಕರು ತಪ್ಪುಮಾಡುವುದು ಸ್ವಭಾವವೇ. ಏನೋ ತಪ್ಪುಮಾಡಿರಬೇಕು.

ಸೀತೆ—ಇಲ್ಲ, ಇಲ್ಲ. ನಗುತ್ತಿರುವಹಾಗೆ ಕಾಣುತ್ತಾಳೆ!

ಅವ—(ಹತ್ತಿರಬಂದು) ಭಟ್ಟಿನಿಗೆ ಜಯವಾಗಲಿ! ನಾನೇನು ತಪ್ಪುಮಾಡಿಲ್ಲ!

ಸೀತೆ—ನಿನ್ನನ್ನು ಯಾರು ಕೇಳಿದರು ? ಅವದಾತಿಕೆ, ಇದೇನು ನಿನ್ನ ಎಡಗೈಯಲ್ಲಿ ಹಿಡಿದಿರುವುದು ?

ಅವ—ಇದು ನಾರುಮಡಿ.

ಸೀತೆ—ಎಲ್ಲಿಂದ ತಂದೆ ?

ಅವ—ಕೇಳೋಣಾಗಲಿ. ನೇಪಥ್ಯಶಾಲೆಯ ಕಾವಲುಗಾತಿಯಾದ ರೇವೆಯನ್ನು ಕೇಳಿದೆ ಅಶೋಕವೃಕ್ಷದ ಚಿಗುರಿನ ಗೊಂಚಲನ್ನು ಕೊಡು ಎಂದು. ರಂಗಸ್ಥಳದಲ್ಲಿ ಉಪಯೋಗಿಸಿದ್ದು ಅದು. ಅವಳು ಕೊಡಲಿಲ್ಲ. ಆದುದರಿಂದ ಅವಳಿಗೆ ತಕ್ಕದ್ದು ಮಾಡಬೇಕೆಂದು ಇದನ್ನು ತೆಗದು ಕೊಂಡು ಬಂದೆ.

ಸೀತೆ—ತಪ್ಪು ನೀಮಾಡಿದ್ದು. ಹೋಗು, ಕೊಟ್ಟುಬಿಡು.

ಅವ—ಭಟ್ಟಿನಿ, ಹುಡುಗಾಟಕ್ಕಾಗಿ ಇದನ್ನು ನಾನು ತಂದೆನಲ್ಲವೆ ?

ಸೀತೆ—ಅಯ್ಯೋ ಹುಚ್ಚಿ! ಹೀಗೆಯೇ ತಪ್ಪು ಒಂದಕ್ಕೊಂದು ಹೆಚ್ಚುವುದು. ಹೋಗು, ಕೊಟ್ಟುಬಿಡು ಕೊಟ್ಟುಬಿಡು.

ಅವ—ಭಟ್ಟಿನಿಯ ಅಪ್ಪಣೆ. (ಮುಂದೆ ಹೋಗುವಳು)

ಸೀತೆ—ಬಾ ಇಲ್ಲಿ.

ಅವ—ಇಗೋ ಬಂದೆ.

ಸೀತೆ—ಈ ನಾರುಮಡಿ ನನಗೂ ಚೆನ್ನಾಗಿರುವುದೇ ?

ಅವ—ಭಟ್ಟಿನಿ ! ಒಳ್ಳೆಯ ರೂಪೊಂದಿದ್ದರೆ ಯಾವುದಾದರೂ ಚೆನ್ನಾಗಿರುತ್ತೆ. ಅಲಂಕರಿಸೋಣಾಗಲಿ.

ಸೀತೆ—ತೆಗೆದುಕೊಂಡುಬಾ. (ಆ ನಾರುಮಡಿಯನ್ನು ಧರಿಸಿ) ಎಲೈ, ನೋಡು, ಚೆನ್ನಾಗಿದೆಯೇ ?

ಅವ--ನಿಮಗೆ ಚೆನ್ನಾಗಿದೆಯೇ ಎಂದೇ? ಚಿನ್ನದಂತಾಯಿತು ನಾರು ಮಡಿ.

ಸೀತೆ—(ಚೇಟಿಯ ಕಡೆಗೆ ತಿರುಗಿ) ಹಂಜಿ, ನೀನೇಕೆ ಏನನ್ನೂ ಹೇಳುವುದಿಲ್ಲ ?

ಚೇಟಿ—ಭಟ್ಟಿನಿ, ಮಾತಿನಿಂದೇನು ಪ್ರಯೋಜನ? ನನ್ನ ಮೈಮೇಲೆ

ಕಾಣಿಸುವ ಈ ರೋಮಾಂಚವು ಹೇಳುತ್ತದೆ. (ರೋಮಾಂಚವನ್ನು ತೋರಿಸುತ್ತಾಳೆ.)

ಸೀತೆ—ಹಂಜೆ, ಕನ್ನಡಿಯನ್ನು ತೆಗೆದುಕೊಂಡು ಬಾ.

ಚೇಟಿ—ಭಟ್ಟಿನಿಯ ಅಪ್ಪಣೆ (ಹೊರಗೆ ಹೋಗಿ ಪುನಃ ಬಂದು) ಇಗೊ ಕನ್ನಡಿ.

ಸೀತೆ—(ಚೇಟಿಯ ಮುಖವನ್ನು ನೋಡಿ) ಕನ್ನಡಿ ಹಾಗಿರಲಿ. ಏನೋ ಹೇಳಬೇಕೆಂದಿರುವಂತೆ ಕಾಣುತ್ತೀ?

ಚೇಟಿ—ಏನೋ ಕಿವಿಗೆ ಬಿತ್ತು. ಹೀಗೆಂದು ಕೇಳಿದೆ. ಕಂಚುಕಿಯಾದ ಆರ್ಯಬಾಲಾಕಿ ಹೇಳುತ್ತಿದ್ದಾನೆ-ಅಭಿಷೇಕ, ಅಭಿಷೇಕ ಎಂಬದಾಗಿ.

(ಇನ್ನೊಬ್ಬಳು ಚೇಟಿ ಪ್ರವೇಶಿಸಿ)

ಚೇಟಿ—ಭಟ್ಟಿನಿ, ಒಳ್ಳೆಯ ವರ್ತಮಾನ, ಒಳ್ಳೆಯ ವರ್ತಮಾನ.

ಸೀತೆ—ಏನೇನು ಬಹುಮಾನವನ್ನು ಅಪೇಕ್ಷಿಸಿ ಹೀಗೆ ಹೇಳುತ್ತಿದ್ದಿ?

ಚೇಟಿ—ರಾಜಕುಮಾರರಿಗೆ ಪಟ್ಟಾಭಿಷೇಕವಂತೆ!

ಸೀತೆ—ಮಾವನವರು ಕ್ಷೇಮವಷ್ಟೆ?

ಚೇಟಿ—ಮಹಾರಾಜರೇ ಅಭಿಷೇಕವನ್ನು ನೆರವೇರಿಸುತ್ತಾರೆ.

ಸೀತೆ—ಹಾಗಾದರೆ ಎರಡನೆಯ ಪ್ರಿಯವಾರ್ತೆಯನ್ನು ಕೇಳಿದಂತಾಯಿತು. ಮಡಿಲು ಒಡ್ಡು ಇನ್ನೂ ದೊಡ್ಡದಾಗಿ.

ಚೇಟಿ—(ಹಾಗೆ ಮಾಡುತ್ತಾಳೆ)

(ಸೀತಾದೇವಿ ಆಭರಣಗಳನ್ನು ತೆಗೆದು ಅವಳಿಗೆ ಕೊಡುತ್ತಾಳೆ)

ಚೇಟಿ—ನಗಾರಿಯ ಶಬ್ದವಾದಂತಿದೆ.

ಸೀತೆ—ಹೌದು, ಅದೇ.

ಚೇಟಿ—(ಮತ್ತೆ ಆಲೈಸಿ) ಇದೇನು ನಗಾರಿ ಹೊಡೆಯುತ್ತಿದ್ದುದು ತಟ್ಟನೆ ನಿಂತುಹೋಯಿತು!

ಸೀತೆ—ಅಭಿಷೇಕದಲ್ಲಿ ಎನೋ ಪ್ರಸಂಗವಿರಬಹುದು. ಅಥವಾ ಅರಮನೆ ಎಂದಮೇಲೆ ಎನೇನೋ ಸಂಭವಿಸುತ್ತವೆ.

ಚೇಟಿ—ಭಟ್ಟಿನಿ. ನನಗೆ ತಿಳಿದುದು ಹೀಗೆ—ರಾಜಕುಮಾರನನ್ನು ಸಿಂಹಾಸನಕ್ಕೇರಿಸಿ ಮಹಾರಾಜರು ಕಾಡಿಗೆ ಹೋಗುವರೆಂದು.

ಸೀತೆ—ಹಾಗಾದರೆ, ಅದು ಅಭಿಷೇಕದ ನೀರಲ್ಲ. ದುಃಖಕ್ಕೆ[1] ನೀರು ಎಂದು ಹೇಳಬೇಕು.

(ಅನಂತರ ರಾಮನ ಪ್ರವೇಶ)

ರಾಮ—ಆಶ್ಚರ್ಯ !

ನಗಾರಿನವಪತ್ತುಗಳು ಶಬ್ದ ಮಾಡುತ್ತಿದ್ದುವು. ಹಿರಿಯರೆಲ್ಲರೂ ನೆರೆದಿದ್ದರು. ನಾನು ಭದ್ರಪೀಠವನ್ನು ಹತ್ತಿದೆ. ಹೆಗಲಮೇಲೆ ಕಲಶಗಳನ್ನು ಹಿಡಿದು ಅಭಿಷೇಕಮಾಡಲು ಸಿದ್ಧರಾಗಿದ್ದರು. ಆಗ ರಾಜನು ನನ್ನನ್ನು ಕರೆದು ಇರಲಿ ಹೋಗು ಎಂದು ಕಳುಹಿಸಿದನು. ನಾನೂ ಹೊರಟುಬಂದೆ. ಜನರು ಮಾತ್ರ ನನ್ನ ಧೈರ್ಯವನ್ನು ನೋಡಿ (ಅಂದರೆ ನಾನು ದುಃಖಿಸಲಿಲ್ಲವೆಂದು) ಆಶ್ಚರ್ಯಪಡುತ್ತಾರಂತೆ. ತಂದೆ ಹೇಳಿದ ಮಾತನ್ನು ಮಗ ಕೇಳಿದರೆ ಅದ ರಲ್ಲೇನು ಅದ್ಭುತ ?

ಮಗು, ಸ್ವಲ್ಪ ವಿಶ್ರಮಿಸಿಕೊ ಎಂದು ರಾಜನು ತಾನಾಗಿಯೇ ಹೇಳಿ ನನ್ನನ್ನು ಕಳುಹಿಸಿದುದರಿಂದ ಮನಸ್ಸಿಗೆ ದೊಡ್ಡ ಭಾರ ಇಳುಕಿದಂತಾ ಯಿತು.

ದೇವರದಯದಿಂದ ನಾನು ಅದೇ ರಾಮನಾದೆ. ಮಹಾರಾಜನು ಮಹಾರಾಜನೇ ಆದನು. ಮೈಥಿಲಿಯನ್ನೀಗ ನೋಡುವೆನು.

ಅವ—ಭಟ್ಟಿನಿ, ರಾಜಕುಮಾರನು ಬರುತ್ತಿದ್ದಾನೆ. ನಾರುಮಡಿ ಇನ್ನೂ ತೆಗೆದುಹಾಕಿಲ್ಲವಲ್ಲ !

ರಾಮ—ಮೈಥಿಲಿ, ಚೆನ್ನಾಗಿದೀಯಾ ?

ಸೀತೆ—ಹಂ. ಆರ್ಯಪುತ್ರ ! ಆರ್ಯಪುತ್ರನಿಗೆ ಜಯವಾಗಲಿ.

ರಾಮ—ಮೈಥಿಲಿ, ಕುಳಿತುಕೊ (ತಾನು ಕುಳಿತುಕೊಳ್ಳುತ್ತಾನೆ)

---

[1] ಮಹಾರಾಜನು ಕಾಡಿಗೆ ಹೋಗಬೇಕೆನ್ನುವುದು ದುಃಖಸಮಾ ಚಾರ. ರಾಮನಿಗೆ ಅದರಿಂದ ಉಕ್ಕಿಬರುವ ಕಣ್ಣೀರನ್ನು ತೊಳೆಯುವು ದಕ್ಕೆ ಆ ನೀರು ; ಪಟ್ಟಾಭಿಷೇಕಕ್ಕಲ್ಲ ಎಂದು ತಾತ್ಪರ್ಯ. ಸೀತೆಯ ಮನಸ್ಸಿ ನಲ್ಲಿ ಮಾವನವರ ಯೋಗಕ್ಷೇಮ ಮುಖ್ಯ.

ಸೀತೆ—ಆರ್ಯಪುತ್ರನ ಅಪ್ಪಣೆ (ಕುಳಿತುಕೊಳ್ಳುತ್ತಾಳೆ)

ಅವ—ಭಟ್ಟಿನಿ, ಅವೇ ರಾಜಕುಮಾರನ ವೇಷ. ಸುಳ್ಳುಸುಳ್ಳು ವೇಷ ಇರಬೇಕು.

ಸೀತೆ—ಅಂಥವರು ಸುಳ್ಳು ಹೇಳುವುದಿಲ್ಲ. ನಾನು ಹೇಳಿದ ಹಾಗೆ ಅರಮನೆ ಎಂದಮೇಲೆ ಏನೇನೋ ಸಂಭವಿಸುತ್ತವೆ.

ರಾಮ—ಮೈಥಿಲಿ, ಅದೇನು ಹೇಳುತ್ತಿರುವುದು ?

ಸೀತೆ—ಏನೂ ಇಲ್ಲ. ಈ ಹುಡುಗಿ ಹೇಳುತ್ತಾಳೆ—ಅಭಿಷೇಕ ಅಭಿಷೇಕ ಎಂದು.

ರಾಮ—ನಿನ್ನ ಕುತೂಹಲ ನನಗೆ ಅರ್ಥವಾಯಿತು. ಹೌದು. ಉಂಟು ಅಭಿಷೇಕ. ಕೇಳು, ಪುರೋಹಿತರು, ಮಂತ್ರಿಗಳು, ಪ್ರಜೆಗಳು ಇವರೆದುರಿಗೆ, ಕೋಸಲರಾಜ್ಯವನ್ನು ಒಂದಾಗಿ ಭಾವಿಸಿ, ಚಿಕ್ಕಂದಿನಿಂದಲೂ ಪರಿಚಿತವಾದ ತೊಡೆಯಮೇಲೆ ನನ್ನನ್ನೇರಿಸಿಕೊಂಡು, ಪ್ರೀತಿಯಿಂದ ನಮ್ಮ ತಾಯಿಯ ಹೆಸರನ್ನು ಹಿಡಿದು ನನ್ನನ್ನು ಕುರಿತು ಮಹಾರಾಜನು—ಮಗು, ರಾಮ, ರಾಜ್ಯವನ್ನು ತೆಗೆದುಕೊ ಎಂದು ಹೇಳಿದನು.

ಸೀತೆ—ಆಗ ಆರ್ಯಪುತ್ರನು ಹೇಳಿದುದೇನು ?

ರಾಮ—ಮೈಥಿಲಿ, ನಿನಗೆ ಹೇಗೆ ತೋರುತ್ತದೆ ?

ಸೀತೆ—ನನಗೆ ತೋರುತ್ತದೆ—ಆರ್ಯಪುತ್ರನು ಏನನ್ನೂ ಹೇಳದೆ ನಿಟ್ಟುಸಿರು ಬಿಟ್ಟು ಮಹಾರಾಜನ ಕಾಲುಗಳಿಗೆರಗಿದನೆಂದು.

ರಾಮ—ಚೆನ್ನಾಗಿ ಯೋಚಿಸಿದೆ. ಒಂದೇ ಮನಸ್ಸುಳ್ಳ ದಂಪತಿಗಳು ಹುಟ್ಟುವುದು ಅಪೂರ್ವ ! ಮಹಾರಾಜನ ಕಾಲುಗಳಿಗೆರಗಿದ್ದು ನಿಜ.

ಸೀತೆ—ಆಮೇಲೆ.

ರಾಮ—ಅನುನಯದ ಮಾತುಗಳನ್ನು ಕಿವಿಯಮೇಲೆ ಹಾಕಿಕೊಳ್ಳದೆ ಇರಲಾಗಿ ಮುಪ್ಪಿಗೆ ಬಂದ ತನ್ನ ಪ್ರಾಣಗಳಮೇಲೆ ಆಣೆ ಇಟ್ಟನು.

ಸೀತೆ— ಆಮೇಲೆ.

ರಾಮ—ಆಮೇಲೆ—

ಅಭಿಷೇಕದ ಕಲಶವನ್ನು ಲಕ್ಷ್ಮಣನೂ ಕಂಬನಿಯಿಡುತ್ತಾ ಛತ್ರಿಯನ್ನು ಸ್ವಂತವಾಗಿ ಮಹಾರಾಜನೂ ಹಿಡಿದಿರಲು, ತ್ವರಿತದಿಂದ ಬಂದ

ಮಂಥರೆಯು ರಾಜನ ಕಿವಿಯಲ್ಲಿ ಏನೋ ಉಸಿರಿದಳು; ಆ ಕ್ಷಣದಿಂದ ನಾನು ರಾಜನಲ್ಲ.

ಸೀತೆ—ನನಗೇನೋ ಸಂತೋಷ. ಮಹಾರಾಜನೇ ಮಹಾರಾಜ; ಆರ್ಯಪುತ್ರನು ಆರ್ಯಪುತ್ರನೇ.

ರಾಮ—ಮೈಥಿಲಿ, ಇವೇಕೆ ಒಡವೆಗಳನ್ನು ತೆಗೆದು ಹಾಕಿದ್ದಿ?

ಸೀತೆ—ಇನ್ನೂ ತೊಟ್ಟಿಲ್ಲ.

ರಾಮ—ಇಲ್ಲ. ಈಗತಾನೆ ಒಡವೆಗಳನ್ನು ತೆಗೆದಿರಬೇಕು. ಏಕೆಂದರೆ—

ಆತುರದಲ್ಲಿ ಓಲೆಗಳನ್ನು ಕಳಚಿದ್ದರಿಂದ ಕಿವಿಯ ಹಾಲೆಗಳಲ್ಲಿ ಅದರ ಗುರುತು ಇನ್ನೂ ಹೋಗಿಲ್ಲ. ಕೈಬಳೆಗಳನ್ನು ತೆಗೆದುಹಾಕಿರುವುದರಿಂದ ಅವುಗಳ ಸ್ಥಾನವು ಇನ್ನೂ ಬೆಳ್ಳಗೇ ಇವೆ. ಒಡವೆಗಳ ಭಾರದಿಂದ ಕುಗ್ಗಿದ್ದ ಅವಯವಗಳು ಇನ್ನೂ ನೇರವಾಗಿಲ್ಲ.

ಸೀತೆ—ಸುಳ್ಳನ್ನೂ ಕೂಡ ನಿಜವೋ ಎಂಬಂತೆ ಹೇಳುವುದಕ್ಕೆ ಆರ್ಯಪುತ್ರನು ಸಮರ್ಥನು.

ರಾಮ—ಹಾಗಾದರೆ ಚಿಂತೆಯಿಲ್ಲ. ಈಗ ಅಲಂಕಾರಮಾಡಿಕೊ. ನಾನು ಕನ್ನಡಿಯನ್ನು ಹಿಡಿಯುತ್ತೇನೆ. (ಹಾಗೆ ಮಾಡುತ್ತಾ ದಿಟ್ಟಿಸಿ ನೋಡಿ) ತಡೆ.

ಕನ್ನಡಿಯಲ್ಲಿ ನೋಡಿದರೆ ನಾರುಮಡಿಯಂತೆ ಕಾಣುವುದು. ಸೂರ್ಯನ ಕಿರಣಗಳೊ? ಓಹೊ, ನಕ್ಕದ್ದರಿಂದ ತಿಳಿಯಿತು. ಇದೇನು ವಿನೋದವೋ ಅಥವಾ ವ್ರತವನ್ನು ಆಚರಿಸಲು ಆಸೆಯೋ?

ಅವದಾತಿಕೆ, ಇದೇನು?

ಅವ—ಪ್ರಭು, ಚೆನ್ನಾಗಿರುತ್ತೆಯೋ ಇಲ್ಲವೋ ಎಂದು ಕುತೂಹಲದಿಂದ ಧರಿಸಿದ್ದಾರೆ.

ರಾಮ—ಮೈಥಿಲಿ, ಇದೇನು? ನಮ್ಮ ವಂಶದಲ್ಲಿ ಇದು ವೃದ್ಧರ ಅಲಂಕಾರ. ಅದನ್ನು ನೀನು ಈಗಲೇ ಧರಿಸಿರುವೆಯಲ್ಲ. ನಮಗೂ ಆಸೆ. ತೆಗೆದುಕೊಂಡುಬಾ.

ಸೀತೆ—ಬೇಡ ಬೇಡ, ಆರ್ಯಪುತ್ರನು ಹೀಗೆ ಅಮಂಗಳವನ್ನು ನುಡಿಯಬಾರದು.

ರಾಮ—ಏತಕ್ಕೆ ತಡೆಯುವೆ, ಮೈಥಿಲಿ?

ಸೀತೆ—ಈಗ ತಾನೆ ಅಭಿಷೇಕ ನಿಂತುಹೋದುದರಿಂದ ನಾರುಮಡಿಯನ್ನುಡುವುದು ಆರ್ಯಪುತ್ರನಿಗೆ ಅಮಂಗಳವೆಂದು ನನಗೆ ತೋರುವುದು.

ರಾಮ—ಹುಡುಗಾಟಿಕ್ಕೆಲ್ಲಾ ನೀನು ಅಷ್ಟು ದುಗುಡಪಡಬೇಡ. ನನ್ನ ಅರ್ಧಾಂಗಿಯಾದ ನೀನು ಆಗಲೇ ಉಟ್ಟಿರುವಾಗ ನಾನು ಏಕೆ ಉಡಬಾರದು?

ಅನಂತರ ಲಕ್ಷ್ಮಣನು ಪ್ರವೇಶಿಸಿ, ಅಭಿಷೇಕಮಹೋತ್ಸವ ನಿಂತುಹೋದುದರ ಜೊತೆಗೆ, ಹದಿನಾಲ್ಕು ವರ್ಷ ವನವಾಸವೂ ಪ್ರಾಪ್ತವಾಯಿತೆಂದು ದುಗುಡದಿಂದ ತಿಳಿಸುತ್ತಾನೆ. ಅನ್ಯಾಯವಾದ ಈ ಆಜ್ಞೆಯ ನಿಮಿತ್ತವಾಗಿ ಲಕ್ಷ್ಮಣನಿಗೆ ತಂದೆಯ ಮೇಲೆ ಆಗ್ರಹ. ಆದರೆ ಅದಕ್ಕಿಂತ ಹೆಚ್ಚಾಗಿ ಅಣ್ಣನಿಗೆ ಇಂಥಾ ಗತಿ ಬಂತಲ್ಲಾ ಎಂದು ತೀವ್ರವಾದ ದುಃಖ. ಏವಂಚ ಅರಮನೆಯಲ್ಲಿ ತಂದೆಯ ಬಾಹುಚ್ಛಾಯೆಯಲ್ಲಿ, ಸುಖದಿಂದ ಬಾಳುತ್ತಿದ್ದ ಹುಡುಗರಿಗೆ ದೀರ್ಘವಾದ ವನವಾಸ ಒದಗಿತು!

ಮತ್ತೆ ಮಹಾಭಾರತದಲ್ಲಿ ಆಖ್ಯಾನ ಉಪಾಖ್ಯಾನಗಳು ಅಸಂಖ್ಯಾತ. ಆದರೆ ಭಾಸನು ಎಷ್ಟು ಉಚಿತವಾದ ಸಂದರ್ಭಗಳನ್ನು ರಂಗಕ್ಕೆ ತಂದಿದ್ದಾನೆ! ದುರ್ಯೋಧನನ ನಿಜವಾದ ತೇಜಸ್ಸನ್ನು ವ್ಯಕ್ತಗೊಳಿಸಬೇಕೆಂಬುದು ಅವನ ತೀವ್ರವಾದ ಆಸೆ. ಏಕೆಂದರೆ ಭಾರತದ ಉದ್ದಕ್ಕೂ ಅವನು ದುರಾತ್ಮನೇ! ಯಾರು ಏನೇ ಹೇಳಲಿ, ಕವಿಯಾದರೂ ತನ್ನ ಪಾತ್ರಗಳ ವಿಚಾರದಲ್ಲಿ ನಿಷ್ಪಕ್ಷಪಾತಿಯಾಗಿರಬೇಕು. ಆದರೆ ಭಾರತ ಬರೆದ ಕವಿ ವ್ಯಾಸರೂ ಕೂಡ ಕೌರವನನ್ನು ಕಂಡರೆ ರಾಗದ್ವೇಷಕ್ಕೀಡಾದರು! ಅದಕ್ಕಾಗಿ ಭಾಸನು ಕೃಷ್ಣಸಂಧಾನ ಊರುಭಂಗ ಪ್ರಸಂಗಗಳನ್ನು ಆರಿಸಿ ತನ್ನ ಕೈಯಿಂದ ಪುಟಹಾಕಿ

ಪಾತ್ರವನ್ನು ತೇಜೋಮಯವನ್ನಾಗಿ ಮಾಡಿದ್ದಾನೆ. ಪಂಚ ರಾತ್ರದಲ್ಲಿ ಕಲ್ಪನೆಯಿಂದ ಅವನ ಕೈಲಿ ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡುವುದಾಗಿ ಕೊನೆಗೂ ಒಪ್ಪಿಸಿದ್ದಾನೆ! ದುರ್ಯೋಧನನು ಸತ್ಯಸಂಧನಾಗಬಾರದೇ ? ಅವನು ಪಾಂಡವರ ದ್ವೇಷಿ, ಮಾನವರ ದ್ವೇಷಿಯಲ್ಲ ಎಂದು ಕವಿಯ ಪಕ್ಷ.

ಭಾಸನ ನಾಟಕಗಳಲ್ಲಿ ಕಥೆಯು ಬೇಗಬೇಗನೆ ಮುಂದೆ ಸಾಗುತ್ತದೆ. ಮಿಕ್ಕವರ ಕೈಯಲ್ಲಿ ವರ್ಣನೆಗಳೂ ಪದ್ಯಗಳೂ ಸಾಮಾನ್ಯವಾಗಿ ವಸ್ತುಗತಿಯನ್ನು ತಡೆಗಟ್ಟುವುವು. ಆದರೆ ಈ ನಾಟಕಚಕ್ರದಲ್ಲಿ ಅವೂ ಕೂಡ ಕಥೆಯನ್ನು ಬೆಳೆಸುತ್ತವೆ. ಪ್ರೇಕ್ಷಕರ ಗಮನ ಕ್ಷಣವೂ ಅನ್ಯತ್ರ ಹೋಗಲಾರದು. ಪಾತ್ರಗಳ ಸಂಭಾಷಣೆಯೂ ಹಾಗೆಯೇ. ಸ್ವಭಾವವಾಗಿ ಸರಳವಾದ ಭಾಷಾಶೈಲಿ ಭಾಸನದು; ಹಾಗೂ ಅಭಿಪ್ರಾಯದಿಂದ ತುಂಬಿದ್ದು. ಅನುಚಿತವಾದ ಪೊಳ್ಳು ಹರಟೆ, ಸಮಾಸಜಟಿಲವಾದ ವರ್ಣನೆ, ನೀರಸವಾದ ಪ್ರಲಾಪ ಈ ದುರ್ಲಕ್ಷಣಗಳಿಗೆಡೆಗೊಡದೆ ಸಂಭಾಷಣೆಗಳು ಸರಸವಾಗಿವೆ, ಸಹಜವೂ ಸಮಂಜಸವೂ ಆಗಿವೆ. ಅವುಗಳಲ್ಲಿ ಪಾತ್ರಗಳ ಸ್ವಭಾವ ಹೊಳೆಯುವುದು; ಪ್ರೇಕ್ಷಕರ ಕೂತೂಹಲ ಹೆಚ್ಚುವುದು. ಸ್ವಪ್ನವಾಸವದತ್ತ, ಪ್ರತಿಮಾನಾಟಕಗಳ ಸಂಭಾಷಣೆಗಳು ಆದರ್ಶಪ್ರಾಯವಾಗಿವೆ.

ಮೇಲೆ ಸೂಚಿಸಿರುವ ಕಾವ್ಯಗುಣಗಳನ್ನು ಕವಿಯ ಉತ್ತಮೋತ್ತಮವಾದ ಸ್ವಪ್ನವಾಸವದತ್ತದ ದೃಶ್ಯಗಳಿಂದಲೇ ಉದಾಹರಿಸುವುದು ಸಾಧುವಾಗಿ ತೋರುತ್ತದೆ. ಅಲ್ಲಿಯ ಸಂವಿಧಾನ ಕೌಶಲ ಹೀಗಿರುವುದು. ವತ್ಸರಾಜನು ಸಂಗೀತವೇ ಮೊದಲಾದ ವಿನೋದಗಳಲ್ಲಿ ಮಗ್ನನಾದುದರಿಂದ ಕಾಲಕ್ರ

ಮೇಣ ಅವನ ರಾಜ್ಯವು ಅನ್ಯಾಕ್ರಾಂತವಾಗುವ ಸ್ಥಿತಿಗೆ ಬಂತು. ಯೌಗಂಧರಾಯಣನು ಈ ಅನರ್ಥವನ್ನು ನಿವಾರಣೆ ಮಾಡಲು ರಾಣಿಯ ಸಹಾಯದಿಂದ ಹೂಡಿದ ತಂತ್ರವನ್ನು ಮೇಲೆ ಸೂಚಿಸಿದೆ. ವಾಸವದತ್ತೆ ಲೋಕಪ್ರವಾದದ ಪ್ರಕಾರ ಸತ್ತು ಹೋಗಿದ್ದಾಳೆ. ವಸ್ತುತಃ, ಮುಂದೆ ಸವತಿಯಾಗುವ ಪದ್ಮಾವತಿಯ ರಕ್ಷಣೆಯಲ್ಲಿದ್ದಾಳೆ. ಎಲ್ಲರಿಂದಲೂ ಕಣ್ಮರೆಯಾಗಿದ್ದಾಗ ಅವಳ ಚಾರಿತ್ರಕ್ಕೆ ಪದ್ಮಾವತಿಗಿಂತಲೂ ಬೇರೆ ಸಾಕ್ಷಿ ಬೇಕೇ? ಈ ಸಂದರ್ಭದಲ್ಲಿ ಕವಿಯ ದೂರಾಲೋಚನೆಯು ಇನ್ನೂ ಮಹತ್ವವುಳ್ಳದ್ದು. ಸವತಿಸವತಿಯರಾಗುವವರು ಕೆಲಕಾಲ ಸಹವಾಸದಲ್ಲಿರೋಣದರಿಂದ ಪರಸ್ಪರಾನುರಾಗವು ಸಹಜರೀತಿಯಲ್ಲಿ ಬೆಳೆಯುವಂತಾಯಿತು (ಅಂ. ೨ ಓದಿ). ಸವತಿಯರು ಗೆಳತಿಯರಾಗಿರಬಾರದೇ? ಪದ್ಮಾವತಿಗಂತು ಆವಂತಿಯ ನಿಜರೂಪ ಗೊತ್ತಿಲ್ಲ. ಆವಂತೀವೇಷಧಾರಿಣಿಯಾದ ವಾಸವದತ್ತೆಗಾದರೋ ಪದ್ಮಾವತಿ ಮುಂದೆ ಸವತಿಯಾಗುವಳೆಂದು ಗೊತ್ತು. ಆದರೂ ಪದ್ಮಾವತಿಯ ಸಹಜ ಸದ್ಗುಣಗಳಿಂದಲೂ, 'ಸತ್ತುಹೋದ' ವಾಸವದತ್ತೆಯ ಮೇಲೆ ನಿಜವಾದ ಗೌರವಬುದ್ಧಿಯನ್ನು ಅವಳು ಪ್ರಕಾಶಪಡಿಸಿದುದರಿಂದಲೂ, ಮೇಲಾಗಿ ಪ್ರಾಣಕಾಂತನ ಹಿತವೇ ತನ್ನ ಹಿತವೆಂಬ ಆತ್ಮನಿಷ್ಠವಾದ ಸತ್ಸ್ವಭಾವದಿಂದಲೂ ವಾಸವದತ್ತೆ ಪದ್ಮಾವತಿಯನ್ನು ಮನಃಪೂರ್ವಕವಾಗಿ ಪ್ರೀತಿಸುವುದು ಸಾಧ್ಯವಾಯಿತು. ಅಲ್ಲದೆ ಪದ್ಮಾವತಿಯ ಜೊತೆಯಲ್ಲಿದ್ದುದರಿಂದ ವಾಸವದತ್ತೆಗೆ ವತ್ಸರಾಜನ ನಿಜವಾದ ಬಣ್ಣ ಗೊತ್ತಾಯಿತು; ಅವನ ಪ್ರೇಮ ಮಿತಿಯಿಲ್ಲದ್ದು ಮತ್ತು ಅಕುಂಠಿತವಾದ್ದು ಎಂದು ದೃಢಪಟ್ಟಿತು. ಆದುದರಿಂದ ಪರದೇಶಿಯಂತಿದ್ದರೂ ರಾಣಿಗೆ

ಪದ್ಮಾವತಿಯಲ್ಲಿ ಪ್ರೇಮ, ಪತಿಯಲ್ಲಿ ಗಾಢವಾದ ನಂಬಿಕೆ ಏರ್ಪಟ್ಟವು. ಇಬ್ಬರು ಹೆಂಡಿರೊಡನೆ ರಾಜ ಮುಂದೆ ಸುಖವಾಗಿರಲು ಸರಿಯಾದ ತಳಹದಿಯುಂಟಾಯಿತು.

ಆದರೆ ಈ ದೀರ್ಘತಪಸ್ಸಿನಲ್ಲಿ ವಾಸವದತ್ತೆಯ ಸಂಕಟವೆಷ್ಟಿರಬಹುದು! ತನ್ನ ಪತಿಗಾಗಿ ಸ್ವಾರ್ಥತ್ಯಾಗ ಮಾಡಲು ಮಂತ್ರಿಯ ಮುಂದೆ ಒಪ್ಪಿಗೆಯನ್ನಿತ್ತಳು. ಸೌಂದರ್ಯದಲ್ಲಿ ಸೌಶೀಲ್ಯದಲ್ಲಿ ಯಾರಿಗೆ ಕಡಿಮೆ? ಆದರೂ ಪತಿಗಾಗಿ ಸವತಿಯನ್ನು ಸ್ವಾಗತಿಸಲನುವಾದಳು. ಆದರೆ, ಪಾಪ! ವಾಸ್ತವವಾಗಿ ಪದ್ಮಾವತಿಯ ವಿವಾಹಮಹೋತ್ಸವ ಒದಗಿದಾಗ, ಸಾಲದುದಕ್ಕೆ ತಾನೇ ಸಂಬಂಧ ಮಾಲಿಕೆಯನ್ನು ಕಟ್ಟಬೇಕಾದುದು ಅನಿವಾರ್ಯವಾದಾಗ (ಅಂ. ೩) ಆಕೆಯ ಮನಸ್ಸು ಎಷ್ಟು ನೊಂದಿರಬೇಕು! ಈ ಸೂಕ್ಷ್ಮನಾಡಿಗಳನ್ನೆಲ್ಲ ಕವಿ ಚೆನ್ನಾಗಿ ಹಿಡಿದು ಅವು ಆಡುವುದನ್ನು ಪ್ರತಿ ದೃಶ್ಯದಲ್ಲಿಯೂ ತೋರಿಸಿದ್ದಾನೆ. ವತ್ಸರಾಜನು ವಾಸವದತ್ತೆಯನ್ನು ಸ್ಮರಿಸಿ ಕಣ್ಣೀರಿಡುವುದನ್ನು ಮರೆಯಲ್ಲಿ (ಅಂ. ೪) ಅವಳಿಗೆ ತೋರಿಸಿ ಹೃದಯಸಂತಾಪವನ್ನು ಸಹ್ಯವನ್ನಾಗಿ ಮಾಡುತ್ತಾನೆ. ಪದ್ಮಾವತಿಯಿಂದ ಅವಳಿಗೆ ಗೌರವವನ್ನು ಸಲ್ಲಿಸುತ್ತಾನೆ. ಪ್ರತ್ಯೇಕವಾಗಿ ಏಕಾಂತದಲ್ಲಿ ನಿದ್ರೆಯಲ್ಲಿದ್ದ ರಾಜನನ್ನು ಕಣ್ಣು ತುಂಬ ನೋಡಲೂ ಅವಕಾಶ ಕೊಡುತ್ತಾನೆ. ಅನಿರ್ವಚನೀಯವಾದ ಸೊಬಗುಳ್ಳ ಈ ದೃಶ್ಯಗಳು ಸಾಹಿತ್ಯಪ್ರಪಂಚದಲ್ಲಿ ಶಾಶ್ವತವಾಗಿ ನಿಲ್ಲುವುವು.

ಸ್ವಪ್ನಾಂಕವನ್ನು ಮಾತ್ರ ಕವಿಯು ಹಾಕಿರುವ ಫಕ್ಕಿಯಲ್ಲೇ ಸ್ಮರಿಸಬೇಕು. ಪದ್ಮಾವತಿ ತಲೆನೋವಿನಿಂದ ಕ್ಲೇಶಪಡುತ್ತಿದ್ದಾಳೆ. ವಾಸವದತ್ತೆ ಮಧುರವಾದ ಕಥೆಗಳನ್ನು ಹೇಳುತ್ತಾ ತಲೆನೋವು

ಹೋಗುವಂತೆ ಮಾಡುವಳು; ಆದುದರಿಂದ ಅವಳಿಗೆ ಹೇಳಿ ಕಳುಹಿಸಬೇಕು. ವತ್ಸರಾಜನಿಗಂತು ತಿಳಿಸಲೇಬೇಕು. ತಂಪಾದ ಗಾಳಿ ಮುಂತಾದ ಅನುಕೂಲಗಳಿಗಾಗಿ ಸಮುದ್ರಗೃಹದಲ್ಲಿ ಪದ್ಮಾವತಿ ಮಲಗುವಳೆಂದು ಏರ್ಪಾಡಾಗಿದೆ. ಅವಳು ಅಲ್ಲಿಗೆ ಇನ್ನೂ ಬಂದಿಲ್ಲ. ಸಮುದ್ರಗೃಹ ಶೂನ್ಯವಾಗಿದೆ. ರೋಗಿಗೆ ಆಪ್ಯಾಯನವಾಗಿರುವಂತೆ ಹಂಸತೂಲಿಕಾತಲ್ಪ ಹಾಸಿದೆ. ಈ ಸಮಯದಲ್ಲಿ ರಾಜ ಮತ್ತು ವಿದೂಷಕ ಇವರ ಪ್ರವೇಶ. ಈ ಸನ್ನಿವೇಶವು ವಾಸವದತ್ತೆಗೆ ವಿಷಮವಾದುದೇ ಸರಿ. ಒಂದೇ ಅರಮನೆಯಲ್ಲಿ ವಾಸಮಾಡುತ್ತಿದ್ದರೂ ಅತ್ಯಂತ ಜಾಗರೂಕತೆ ಯಿಂದ 'ಪರಪುರುಷದರ್ಶನ'ವನ್ನು ದೂರಮಾಡಿದ ಸಾಧ್ವಿಯ ವರ್ತನೆಯಿಂದ ವತ್ಸರಾಜನ ಕೈಗೆ ಸಿಕ್ಕದಿದ್ದವಳು, ಸರೀಕಳಾದ ಪದ್ಮಾವತಿಯು ಹೃದಯೇಶ್ವರನೊಂದಿಗೆ ಪ್ರತ್ಯಕ್ಷವಾಗಿ ವಿಹಾರ ಮಾಡುತ್ತಿರುವಾಗ ತನ್ನ ವೇಷವನ್ನು ಕಿತ್ತೊಗೆದು ಆರ್ಯಪುತ್ರ ನನ್ನು ಭಜಿಸಲು ದುಡುಕದ ಜಿತೇಂದ್ರಿಯಳು, ಈಗ ದೊಡ್ಡ ಸತ್ವಪರೀಕ್ಷೆಗೆ ಗುರಿಯಾಗುತ್ತಾಳೆ. ಗಮನಿಸಿ—

(ಸಮುದ್ರಗೃಹ. ವಿದೂಷಕನೊಡನೆ ರಾಜನ ಪ್ರವೇಶ. ಮತ್ತಾರೂ ಇಲ್ಲ. ಪದ್ಮಾವತಿಗೆಂದು ಹಾಸಿಗೆ ಸಿದ್ಧವಾಗಿದೆ)

ವಿದೂಷಕ—ಹಾಗಾದರೆ ಈ ಹಾಸಿಗೆಯ ಮೇಲೆ ಒಂದು ಮುಹೂರ್ತ ಕುಳಿತು ಪದ್ಮಾವತಿಯನ್ನು ನಿರೀಕ್ಷಿಸು.

ರಾಜ—ಅಗಲಿ. (ಕುಳಿತು) ವಯಸ್ಯ, ನಿದ್ರೆ ಬರುತ್ತದೆ. ಯಾವು ದಾದರೂ ಕಥೆ ಹೇಳು.

ವಿದೂ—ನಾನೇನೋ ಹೇಳುತ್ತೇನೆ. ನೀನು ಮಾತ್ರ ಹೂ ಅನ್ನು ತ್ತಿರಬೇಕು.

ರಾಜ—ಅಗತ್ಯವಾಗಿ.

ವಿದೂ—ಉಜ್ಜಯಿನಿ ಉಜ್ಜಯಿನಿ ಎಂಬ ಹೆಸರಿನ ಒಂದು ಪಟ್ಟಣ. ಅಲ್ಲಿ ಬಹು ರಮಣೀಯವಾದ ಸ್ನಾನಘಟ್ಟಗಳಿವೆಯಂತೆ.

ರಾಜ—ಏನು, ಉಜ್ಜಯಿನಿಯೇ ?

ವಿದೂ—ಏಕೆ, ಈ ಕಥೆ ಬೇಡದೇಹೋದರೆ ಇನ್ನೊಂದನ್ನು ಹೇಳುವೆನು.

ರಾಜ—ಈ ಕಥೆ ಬೇಕಿಲ್ಲ ಅಂತ ಅಲ್ಲವಯ್ಯಾ. ಆದರೆ ಆ ಅವಂತಿಯ ರಾಜಕುಮಾರಿಯನ್ನು ಜ್ಞಾಪಿಸಿಕೊಂಡು ದುಃಖ ಬಂತು. ತನ್ನ ತಂದೆತಾಯಿಗಳನ್ನು ಬಿಟ್ಟುಬರುವಾಗ ಉಕ್ಕಿಬರುತ್ತಿದ್ದ ದುಃಖವನ್ನು ತಡೆಯಲೋಸುಗ ಸ್ನೇಹಾತಿಶಯದಿಂದ ನನ್ನೆದೆಯಮೇಲೆ ತಲೆಯಿರಿಸಿ ಕಂಬನಿಗೊಂಡಳು !

ಅಲ್ಲದೆ, ಅನೇಕಸಾರಿ ನಾನು ಪಾಠಹೇಳುತ್ತಿದ್ದಾಗ ಪರವಶಳಾಗಿ ನನ್ನನ್ನೇ ದೃಷ್ಟಿಸಿ ನೋಡುತ್ತಾ ಕೈಲಿದ್ದ 'ಕೋಣ'[1]ವು ಜಾರಿಬಿದ್ದರೂ ಅರಿಯದೆ ಸುಮ್ಮನೇ ಆಕಾಶದಲ್ಲಿ ಬೆರಳು ಮಿಾಟುತ್ತಿದ್ದಳು !

ವಿದೂ—ಬೇಡ, ಇನ್ನೊಂದು ಕಥೆ ಹೇಳುತ್ತೇನೆ. ಬ್ರಹ್ಮದತ್ತ ಎಂದು ಒಂದು ಪಟ್ಟಣ. ಅಲ್ಲಿ ಕಾಂಪಿಲ್ಯನೆಂಬ ರಾಜನಿದ್ದನು.

ರಾಜ—ಏನು ಏನು ?

ವಿದೂ—(ಮತ್ತೆ ಹಾಗೆಯೇ ಹೇಳುತ್ತಾನೆ.)

ರಾಜ—ಮೂರ್ಖ ! ರಾಜ ಬ್ರಹ್ಮದತ್ತ, ಊರು ಕಾಂಪಿಲ್ಯ ಎಂದು ಹೇಳು.

ವಿದೂ—ಏನು ? ರಾಜ ಬ್ರಹ್ಮದತ್ತ, ಊರು ಕಾಂಪಿಲ್ಯ ಎಂದೇ ?

ರಾಜ—ಹೂ, ಹಾಗೆ.

ವಿದೂ—ಹಾಗಾದರೆ ಒಂದು ಗಳಿಗೆ ತಡೆ. ಗಟ್ಟಮಾಡಿಕೊಳ್ಳುತ್ತೇನೆ. ರಾಜ ಬ್ರಹ್ಮದತ್ತ, ಊರು ಕಾಂಪಿಲ್ಯ (ಎಂಬದಾಗಿ ಅನೇಕ ಸಾರಿ ಹೇಳುತ್ತಾನೆ). ಈಗ ಕೇಳು. ಓಹೋ ! ನಿದ್ರೆಬಂದಿದೆ. ಚಳಿ ಹೊತ್ತು. ಕಂಬಳಿಯನ್ನು ತರುತ್ತೇನೆ. (ಹೋಗುವನು).

---

[1] ಕೋಣ=ವಾದನದಂಡ

(ಅವಂತೀವೇಷಧಾರಿಣಿಯಾದ ವಾಸವದತ್ತೆಯ ಪ್ರವೇಶ.
ಚೇಟಿಯೂ ಜೊತೆಯಲ್ಲಿರುವಳು)

\+ \+ \+ \+

ಚೇಟಿ—ಇದೇ ಸಮುದ್ರಗೃಹ. ಆರ್ಯೆ ಪ್ರವೇಶಿಸೋಣವಾಗಲಿ. ನಾನು ತಲೆನೋವಿನ ಔಷಧಿಯನ್ನು ತೆಗೆದುಕೊಂಡು ಬೇಗನೆ ಬರುವೆನು. (ಹೋಗುವಳು).

ವಾಸವದತ್ತೆ—ನನ್ನನ್ನು ಕಂಡರೆ ದೇವರಿಗೆಷ್ಟು ನಿರ್ದಯ! ವಿರಹ ತಾಪದಿಂದ ತಪಿಸುತ್ತಿರುವ ಆರ್ಯಪುತ್ರನನ್ನು ಅಲ್ಪಸ್ವಲ್ಪ ಸಮಾಧಾನ ಪಡಿಸಲು ಅನುವಾಗಿದ್ದ ಈ ಪದ್ಮಾವತಿಯೂ ಅಸ್ವಸ್ಥಳಾಗಿಬಿಟ್ಟಳೇ? ಒಳಗೆ ಹೋಗೋಣ. (ಹೋಗಿ ನೋಡಿ) ಆಹಾ, ಪರಿಚಾರಕರು ಎಂಥ ಪ್ರಮಾದಮಾಡಿದ್ದಾರೆ! ಅಸ್ವಸ್ಥಳಾದ ಪದ್ಮಾವತಿಯ ಜೊತೆಗೆ ದೀಪ ವೊಂದನ್ನು 'ಮಾತ್ರ ಬಿಟ್ಟು ಹೋಗಿದ್ದಾರಲ್ಲ! ಪದ್ಮಾವತಿ ನಿದ್ರೆಮಾಡು ತ್ತಿದ್ದಾಳೆ. ಕೂತುಕೊಳ್ಳೋಣ. ಬೇರೆ ಕಡೆ ಕುಳಿತುಕೊಂಡರೆ ಪ್ರೀತಿ ಕಡಮೆಯೆಂದು ಕಾಣಬಹುದು. ಆದುದರಿಂದ ಹಾಸಿಗೆಯ ಮೇಲೆ ಕುಳಿತುಕೊಳ್ಳುವೆನು. (ಕುಳಿತುಕೊಂಡು) ಇದೇನು? ಇವಳ ಜೊತೆ ಯಲ್ಲಿ ಕುಳಿತಿದ್ದರೆ ಮನಸ್ಸಿಗೆ ಏನೋ ಸಂತೋಷವಾಗುವಂತಿದೆ! ದೇವರ ದಯದಿಂದ ತಡೆಯಿಲ್ಲದೆ ಸುಖವಾಗಿ ಉಸಿರಾಡುತ್ತಾಳೆ. ಬಹುಶಃ ರೋಗ ಹರಿದಿರಬಹುದು. ಅಥವಾ ಹಾಸಿಗೆಯ ಒಂದು ಪಾರ್ಶ್ವದಲ್ಲಿ ಮಲಗಿರುವುದನ್ನು ನೋಡಿದರೆ ನನ್ನನ್ನು ಆಲಿಂಗಿಸೆಂದು ಸೂಚಿಸುವಂತೆ ತೋರುತ್ತದೆ. ನಾನೂ ಮಲಗುವೆನು. (ಮಲಗುತ್ತಾಳೆ)

ರಾಜ—(ಕನವರಿಸುತ್ತಾನೆ) ಹಾ ವಾಸವದತ್ತೆ!

ವಾಸ—(ತಟ್ಟನೆದ್ದು) ಆಹಾ ಆರ್ಯಪುತ್ರ! ಪದ್ಮಾವತಿಯಲ್ಲ! ನನ್ನನ್ನು ನೋಡಿಬಿಟ್ಟನೋ ಏನೋ; ಆರ್ಯಯೌಗಂಧರಾಯಣನ ಭಾರಿ ಪ್ರತಿಜ್ಞೆಯು ನನ್ನನ್ನು ಕಂಡದ್ದರಿಂದ ನಿಷ್ಫಲವಾಯಿತಲ್ಲ!

ರಾಜ—ಹಾ ಅವಂತಿರಾಜಪುತ್ರಿ!

ವಾಸ—ದೇವರದಯದಿಂದ ಆರ್ಯಪುತ್ರನು ಕನವರಿಸುತ್ತಿದ್ದಾನೆ. ಇಲ್ಲಿ ಯಾರೂ ಇಲ್ಲ. ಒಂದು ಗಳಿಗೆ ನಿಂತು ಕಣ್ಣುದಣಿಯ ಮನ ದಣಿಯ ನೋಡುತ್ತೇನೆ.

ರಾಜ—ಹಾ ಪ್ರಿಯೆ ! ಪ್ರಿಯಶಿಷ್ಯೆ ! ಮಾತನಾಡು.

ವಾಸ—ಆಡುತ್ತಿದ್ದೇನೆ ಆರ್ಯಪುತ್ರ, ಮಾತನಾಡುತ್ತಿದ್ದೇನೆ.

ರಾಜ—ಕೋಪಗೊಂಡಿರುವೆಯಾ ?

ವಾಸ—ಇಲ್ಲ, ಇಲ್ಲ, ದುಃಖಪಡುತ್ತಿದ್ದೇನೆ.

ರಾಜ—ಕೋಪವಿಲ್ಲದಿದ್ದರೆ, ಆಭರಣಗಳನ್ನೇಕೆ ತೊಟ್ಟಿಲ್ಲ ?

ವಾಸ—ಇದಕ್ಕಿಂತ ಇನ್ನೂ ಆಭರಣವೇ ?

ರಾಜ—ವಿರಚಿಕೆಯನ್ನು ಜ್ಞಾಪಿಸಿಕೊಂಡೆಯಾ ?

ವಾಸ—(ಕೋಪದಿಂದ) ಆ ! ದೂರತೊಲಗು. ಇಲ್ಲೂ ಬಂದಳೇ ವಿರಚಿಕೆ ?

ರಾಜ—ಹಾಗಾದರೆ ವಿರಚಿಕೆಗಾಗಿ ನಿನ್ನ ಅನುಗ್ರಹವನ್ನು ಬೇಡುತ್ತೇನೆ. (ಎರಡು ಕೈಗಳನ್ನೂ ನೀಡುತ್ತಾನೆ)

ವಾಸ—ಓಹೋ, ತುಂಬ ಹೊತ್ತು ನಿಂತೆ. ಯಾರಾದರೂ ನೋಡಿಯಾರು. ಆದುದರಿಂದ ಹೊರಡುತ್ತೇನೆ. ಅಥವಾ ಹಾಸಿಗೆಯಿಂದ ಇಳಿಬಿದ್ದ ಆರ್ಯಪುತ್ರನ ಹಸ್ತವನ್ನು ಹಾಸಿಗೆಯ ಮೇಲಿಟ್ಟು ಹೋಗುತ್ತೇನೆ. (ಹಾಗೆಮಾಡಿ ಹೊರಟುಹೋಗುತ್ತಾಳೆ)

ರಾಜ—(ತಟ್ಟನೆದ್ದು) ವಾಸವದತ್ತೆ, ನಿಲ್ಲು ನಿಲ್ಲು. ಹಾ !

ಸಂಭ್ರಮದಿಂದ ಹೊರಗೆ ಹೋಗುತ್ತಾ ಬಾಗಿಲಿಗೆ ಢಿಕ್ಕಿಹೊಡೆದೆ. ಆದುದರಿಂದ ಇದು ನಿಜವಾಗಿ ನಡೆದದ್ದೋ ಅಥವಾ ನನ್ನ ಮನಸ್ಸಿನ ಕಲ್ಪನೆಯೋ ಎಂಬುದನ್ನು ಅಷ್ಟು ಸ್ಪಷ್ಟವಾಗಿ ಅರಿಯೆನಲ್ಲಾ !

ನಿಜ. ಅದು ವತ್ಸರಾಜನ ಭಾಗಕ್ಕೆ ಮನಸ್ಸಿನ ಕಲ್ಪನೆ. ವಾಸವದತ್ತೆಗೆ ಮಾತ್ರ ನಿಜವಾದ ದಿವ್ಯವಾದ ಆನಂದಮಯವಾದ ಅನುಭವ. ಪ್ರಿಯತಮೆಯನ್ನಗಲಿ ಬಹು ವಿಧವಾಗಿ ತವಕಪಡುತ್ತಿದ್ದಾನೆ ಉದಯನ. ಅವನ ಅನುರಾಗವು ಉತ್ಕಟವಾದುದರಿಂದ ಒಂದೊಂದು ವೇಳೆ ವಾಸವದತ್ತೆ ಸತ್ತುಹೋಗಿದ್ದಾಳೆಂಬುದೇ ಅವನಿಗೆ ಸ್ಫೂರ್ತಿಯಿರುವುದಿಲ್ಲ. ಇದು ಲೋಕಾನುಭವ. ವಾಸವದತ್ತೆ ಖಂಡಿತ ಎದ್ದು ಬರುವಳೆಂದೇ ಅವನ

ನಂಬಿಕೆ; ಇವತ್ತಲ್ಲ, ನಾಳೆ. ಏನೇ ಆಗಲಿ ನಾವು ಕಂಡಂತೆ, ಅವನು ಕನಸ್ಸಿನಲ್ಲಿ ವಾಸವದತ್ತೆಯನ್ನು ಸಾಕ್ಷಾತ್ಕರಿಸಿ ಒಂದು ಗಳಿಗೆಯಾದರೂ ಸಂತೋಷಪಟ್ಟನು. ವಾಸವದತ್ತೆಯ ಅದೃಷ್ಟವನ್ನು ನೋಡಿ. ತನ್ನನ್ನು ಕಂಡರೆ ಗಂಡನು ಎಷ್ಟು ಮೋಹಿಸಿ ಈಗ ಎಷ್ಟು ವಿರಹತಾಪಕ್ಕೆ ಈಡಾಗಿದ್ದಾನೆಂದು ಮೊದಮೊದಲು ಬೇರೆ ಕಡೆಯಿಂದ ತಿಳಿದಳು. ಅನಂತರ ಪದ್ಮಾವತಿಯನ್ನು ವತ್ಸರಾಜನು ತಾನಾಗಿಯೇ ವರಿಸಲಿಲ್ಲ. ಕಾರಣಾಂತರದಿಂದ ಅಲ್ಲಿಗೆ ಬಂದ ವತ್ಸರಾಜನಿಗೆ ದರ್ಶಕಮಹಾರಾಜನು ತಾನೇ ಪದ್ಮಾವತಿಯನ್ನು ಕೊಡುವುದಾಗಿ ಹೇಳಿದನೆಂದು ದಾದಿಯಿಂದ ಕೇಳಿ ಆರ್ಯಪುತ್ರನು ನಿರ್ದೋಷಿಯೆಂದರಿತು ಸ್ಥಿರಮನಸ್ಕಳಾದಳು. ವೀಣೆ ಕಲಿಯಬೇಕೆಂದು ಪದ್ಮಾವತಿ ಕೇಳಿಕೊಂಡಾಗ ಏನೂ ಹೇಳದೆ ವಾಸವದತ್ತೆಯ ಗುಣಗಳನ್ನು ಸ್ಮರಿಸಿಕೊಂಡು ಕೇವಲ ದಾಕ್ಷಿಣ್ಯದಿಂದ ಕಣ್ಣೀರು ಹಾಕಲಿಲ್ಲವೆಂದು ಪದ್ಮಾವತಿಯ ಬಾಯಿಂದಲೇ ಕೇಳಿದ್ದರಿಂದ ರಾಣಿವಾಸದ ರಾಗ ಭೋಗಗಳನ್ನು ತ್ಯಜಿಸಿ ಅನಾಮಧೇಯಳಾಗಿ ಅಲೆಯುವ ದೌರ್ಭಾಗ್ಯವೂ ಸ್ಮರಣೆಗೆ ಬಂತು. ಆಮೇಲೆ ಮಾಧವೀಲತಾ ಮಂಟಪದೊಳಗಿನಿಂದ ವತ್ಸರಾಜವಸಂತಕರ ವಿನೋದ ಸಲ್ಲಾಪವನ್ನು ಸಂಚು ಕೇಳುವಾಗ ವಾಸವದತ್ತೆಯನ್ನು ಕಂಡರೆ ತನಗೆ ಪಕ್ಷಪಾತವೆಂದು ವತ್ಸರಾಜನೇ ಘಂಟಾಘೋಷವಾಗಿ ಆಡಿದ್ದನ್ನು ಆಲೈಸಿ ಮನಸ್ಸಿನಲ್ಲಿಯೇ ಆನಂದಪಟ್ಟಳು. ಅನಂತರ ಸಮುದ್ರ ಗೃಹದಲ್ಲಿ ಏಕಾಂತವಾಗಿ ಪ್ರಿಯತಮನ ದರ್ಶನ. ಅವನ ಕನಸ್ಸಿನಲ್ಲೂ ಅವಳೇ. ಇನ್ನು ಮನಸ್ಸಿನಲ್ಲಿ ಇಲ್ಲವೇ? ವಾಸವದತ್ತೆಯು ಇದನ್ನು ನೋಡಿ ಮನದಲ್ಲಿ ತುಂಬ ಮರುಗಿದಳು. ತನ್ನ ಮೇಲೆ ವತ್ಸರಾಜನಿಗೆ ರೂಢಮೂಲವಾದ ಪ್ರೇಮ

ಸ್ವಲ್ಪವೂ ನ್ಯೂನವಾಗಿಲ್ಲವೆಂದು ನಿಸ್ಸಂಶಯವಾಯಿತಲ್ಲದೆ ಪ್ರೀತಿಯ ಗಂಡನು ಇಷ್ಟು ಸಂಕಟಕ್ಕೆ ಸಿಕ್ಕಿದನಲ್ಲಾ ಎಂದು ಹೃದಯವು ಕರಗಿತು. ಪತಿಯು ಉದ್ಧಾರವಾಗಲಿ ಎಂದು ಮನಃಪೂರ್ವಕವಾಗಿ ಸ್ವಾರ್ಥವನ್ನು ತ್ಯಜಿಸಲು ಸಮ್ಮತಿಸಿದ ಈ ಸತೀಮಣಿಯು ತನ್ನ ತ್ಯಾಗಕ್ಕನುರೂಪವಾದ ಕೃತಜ್ಞತೆಯನ್ನೂ ನಿಶ್ಚಲ ಪ್ರೀತಿಯನ್ನೂ ಗಂಡನಲ್ಲಿ ನೋಡಿ ಅಂತರಂಗದಲ್ಲಿ ತೃಪ್ತಿಹೊಂದಿದಳು. ಇಂತು ಪತಿಯ ಶ್ರೇಯಸ್ಸಿಗಾಗಿ ಸ್ವಾರ್ಥವನ್ನೀಡುಮಾಡಲು ಹಿಂಜರಿಯದೆ ಅನುರಾಗವನ್ನು ಸರ್ವಥಾ ಆನಂದಮಯವನ್ನಾಗಿ ಮಾಡಿಕೊಂಡ ಈ ಸತೀಮಣಿಯ ಪ್ರಣಯಸರಣಿಯು ಅತ್ಯಂತ ಶ್ಲಾಘ್ಯವಾಗಿದೆ.

ಸ್ವಪ್ನಾಂಕವು ಈ ನಾಟಕದಲ್ಲಿ ಅತಿ ಮುಖ್ಯವಾದ್ದು. ಸಂಸ್ಕೃತ ಸಾಹಿತ್ಯಕ್ಕೇ ಅಲಂಕಾರಪ್ರಾಯವಾದ್ದು. ಕವಿಯು ಅದನ್ನು ಸಮಂಜಸವಾಗಿ ನೆಯ್ದಿದ್ದಾನೆ. ಕನಸಿನ ಸಂಭಾಷಣೆಯಂತು ಬಹು ಸ್ವಾರಸ್ಯವಾಗಿದೆ. ವತ್ಸರಾಜ ಕನವರಿಸುತ್ತಿದ್ದಾನೆ; ವಾಸವದತ್ತೆ ಎಚ್ಚರವಾಗಿದ್ದು ಅದಕ್ಕೆ ಉತ್ತರ ಕೊಡುತ್ತಾಳೆ! ಉತ್ತರ ಪ್ರತ್ಯುತ್ತರಗಳು ಅತ್ಯಂತ ಸಹಜರೀತಿಯಲ್ಲಿವೆ. ಸತ್ಯಾಂಶವೇನೆಂದರೆ, ನಿಜವಾದ ವಾಸವದತ್ತೆಯಲ್ಲದೆ ಕನಸಿನಲ್ಲಿ ಒಬ್ಬಳು ವಾಸವದತ್ತೆಯನ್ನುದ್ದೇಶಿಸಿ ರಾಜನು ಪ್ರಶ್ನೆ ಮಾಡುತ್ತಾನೆ. "ಹಾ ಪ್ರಿಯಶಿಷ್ಯೇ! ದೇಹಿ ಮೇ ಪ್ರತಿವಚನಮ್ ।" ವಾಸವದತ್ತೆಯು ಉತ್ತರ ಕೊಡುತ್ತಾಳೆ. "ಆಲಪಾಮಿ ಭರ್ತಃ। ಆಲಪಾಮಿ" ಎಂದು. ಈ ಉತ್ತರವನ್ನು ರಾಜನು ಕನಸಿನಲ್ಲಿ ಕೇಳಿದನೆಂದು ಭಾವಿಸಬಾರದು. ಊಹಿಸಿದರೆ ಸ್ವಪ್ನದಲ್ಲಿ ರಾಜನ ಕಣ್ಣೆದುರಿಗಿದ್ದ ವಾಸವದತ್ತೆಯು ಕೂಡ ಇದೇ ಉತ್ತರವನ್ನು ಸಹಜವಾಗಿ ಕೊಟ್ಟಾಳು.

“ಏಕೆ, ಮಾತಾಡುವುದಿಲ್ಲವೇ ?” ಎಂದು ಗಂಡ ಕೇಳಿದರೆ “ಮಾತಾಡದೇ ಏನು” ಎಂದೂ, “ಕೋಪಮಾಡಿಕೊಂಡಿರುವೆಯಾ ?” ಎಂದು ಕೇಳಿದರೆ “ಕೋಪವೇತಕ್ಕೆ ? ಕೋಪವೂ ಇಲ್ಲ, ಗೀಪವೂ ಇಲ್ಲ” ಎಂದೂ ಯಾವ ಹೆಂಡತಿ ತಾನೆ ಉತ್ತರ ಹೇಳುವುದಿಲ್ಲ ? ಕೆಲವು ವೇಳೆ ಉತ್ತರ ನಿಜ; ಕೆಲವು ವೇಳೆ ವ್ಯಂಗ್ಯ; ಅಂತು ತತ್ವ ಪ್ರಣಯವೇ ಹೊರತು ವೈರವಲ್ಲ ! ಹಾಗೆಯೇ

‘ಕಿಂ ಕುಪಿತಾ ಅಸಿ ?’
‘ನ ಹಿ, ದುಃಖಿತಾ ಅಸ್ಮಿ’
‘ತರ್ಹಿ ಕಿಮರ್ಥಂ ವಿಮುಕ್ತಾಲಂಕಾರಾ ಅಸಿ ?’
‘ಇತಃ ಪರಂ ಕಿಮ್ ?’

ಈ ಉತ್ತರ ಪ್ರತ್ಯುತ್ತರಗಳು ಕನಸಿನಲ್ಲಿಯೂ ಸಹಜವಾಗಿ ನಡೆದಿವೆ. ಕನಸಿನ ವಾಸವದತ್ತೆಯ ಜೊತೆಗೆ ನಿಜವಾದ ವಾಸವದತ್ತೆಯನ್ನೇ ಅಲ್ಲಿಗೆ ಕರೆಯಿಸಿ ಕವಿಯು ನಮ್ಮನ್ನು ಮರುಳು ಮಾಡಿದ್ದಾನೆ ! ಕನಸಿನ ಸಂಭಾಷಣೆಯಿಂದ ವಾಸವದತ್ತೆಗೆ ತಾನು ಪರದೇಶಿಯಾದಳೆಂಬ ಮನಸ್ಸಿನ ದುಗುಡ ಕಡಮೆಯಾಗುವುದಲ್ಲದೆ, ಪ್ರಿಯನ ಮೇಲೆ ಆದರವು ನೂರ್ಮಡಿಯಾದುದರಲ್ಲಿ ಸಂದೇಹವಿಲ್ಲ. ಪಾಪ, ಮಂಚದಿಂದ ಇಳಿಬಿದ್ದ ಕೈಯನ್ನು ಮೇಲಿಟ್ಟು ಹೋಗಬೇಕೆಂಬ ಚಪಲ. ಇವರಿಬ್ಬರೂ ಹೀಗೆ ವ್ಯಾಮೋಹವೆಂಬ ಸಮುದ್ರದಲ್ಲಿ ಮುಳುಗಿ ಹೊಸ ಹೊಸದಾಗಿ ಉಕ್ಕಿಬರುವ ಪ್ರೇಮತರಂಗಗಳ ಲೀಲೆಯನ್ನು ತೋರಿಸಿ ಪ್ರೇಕ್ಷಕರನ್ನು ತಲ್ಲೀನರನ್ನಾಗಿ ಮಾಡುತ್ತಾರೆ. ಇಂತಹ ಕಥಾಸಂವಿಧಾನ ಮತ್ತು ರಸಪರಿಪೋಷ ಉದ್ದಾಮಕವಿಗಳಿಗಲ್ಲದೆ ಮತ್ತಾರಿಗೆ ಸಾಧ್ಯ ?

# ೫. ಪಾತ್ರರಚನೆ

ಪಾತ್ರರಚನೆಯಲ್ಲಿಯೂ ಕವಿಯ ಅಸದೃಶ ನೈಪುಣ್ಯವನ್ನು ಕೆಲವು ಮುಖ್ಯ ಉದಾಹರಣೆಗಳಿಂದ ಗ್ರಹಿಸಬಹುದು.

ಅವನ್ತೀರಾಜನಾದ ಮಹಾಸೇನನೆಂಬ ಬಿರುದುಳ್ಳ ಪ್ರದ್ಯೋತನಿಗೆ ಬೃಹತ್ಕಥೆ ಮುಂತಾದ ಮೂಲಗ್ರಂಥಗಳ ಪ್ರಕಾರ ಚಂಡ ಮಹಾಸೇನನೆಂದು ಅಡ್ಡಹೆಸರು; ಅವನ ಹೃದಯ ಕ್ರೂರವಾದ್ದು; ಶತ್ರುಗಳಿಗೆ ಕಾಲಾಂತಕ. ಮಹಾತಾಯಿ ಕೈಕೆಯನ್ನಂತೂ ಎಲ್ಲರೂ ಬಲ್ಲೆವು : ಇವತ್ತು ರಾಮಾಯಣಕಥೆಯನ್ನು ಕೇಳಿದರೂ ದೊಡ್ಡವರು ಚಿಕ್ಕವರಾದಿಯಾಗಿ ಎಲ್ಲರೂ ಅವಳ ಕಠಿನಹೃದಯಕ್ಕೆ ಹಿಡಿಶಾಪ ಹಾಕುತ್ತಾರೆ. ದುರ್ಯೋಧನನೆಂದು ಹೇಳಿಕೊಳ್ಳುವ ಕೌರವ ಕ್ರೌರ್ಯದ ಅಪರಾವತಾರ. ಜಗದ್ವಂದ್ಯಳಾದ ಸತೀಮಣಿ ಸೀತಾದೇವಿ ಪತಿಯನ್ನು ರೂಪದಲ್ಲಿ ಮಾತ್ರ ಗಂಡು ಚರ್ಯೆಯಲ್ಲಿ ಹೆಣ್ಣು ಎಂದು ಹಳಿಯಲು ಹಿಂಜರಿಯಲಿಲ್ಲ. ಪಂಚವಟಿಯಲ್ಲಿ ತನಗೆ ವಿನಾಶಕಾಲವೊದಗಿದಾಗ ಲಕ್ಷ್ಮಣನ ಮೇಲೆ ಬಾಯಿ ಹಿಡಿಸದ ಆರೋಪಣೆಗಳನ್ನು ಹೊರಸಿದಳು ಗರತಿ ಸೀತಾದೇವಿ. ಇದೇನೋ ಪ್ರಪಂಚದ ಸ್ವಭಾವವನ್ನು ಮೀರಿದುದಲ್ಲವಾದರೂ ನೆನೆಸಿಕೊಂಡರೆ ತಲೆತಗ್ಗಿಸುವಂತಾಗುತ್ತದೆ. ಆದರೆ ಇದೇ ಪಾತ್ರಗಳು, ಭಾಸನ ದಿವ್ಯಪ್ರತಿಭೆಯಿಂದ ಪುಟಕ್ಕೆ ಹಾಕಿದ ಚಿನ್ನದಂತೆ ಕಂಗೊಳಿಸುತ್ತವೆ. ಏಕೆಂದರೆ ಭಾಸನು ಕರುಣಾಳು; ಗುಣೈಕಪಕ್ಷಪಾತಿ. ಗುಣದೋಷಗಳ ಮಧ್ಯೆ ಗುಣವನ್ನೇ ಎಣಿಸುತ್ತಾನೆ. ದೋಷವನ್ನು ಮರೆಯುತ್ತಾನೆಂದಲ್ಲ; ಮರೆಸುತ್ತಾನೆ. ಆದುದರಿಂದ ಪಾತ್ರಗಳು ಸಜ್ಜನವರ್ಗಕ್ಕೆ ಸೇರುತ್ತವೆ. ಅವುಗಳ ಬಣ್ಣ ಕಣ್ಣು

ಕುಕ್ಕುವಂತಹುದಲ್ಲ. ಉದಾಹರಣೆಗಾಗಿ—ಸ್ವಾರ್ಥಪರಳಾದ ಘಾತಕಿ ಕೈಕೆ ಪ್ರತಿಮಾನಾಟಕದಲ್ಲಿ ಮುಖ್ಯಸೂತ್ರಧಾರಿಣಿ ಯಾಗುತ್ತಾಳೆ. ದಶರಥ ಮಹರ್ಷಿಶಾಪದ ಫಲವಾಗಿ ಪುತ್ರಶೋಕದಿಂದ ಸಾಯುವುದು ಅವನ ಹಣೆಯ ಬರಹ ಅನಿವಾರ್ಯ. ಆದಕ್ಕೆ ಮಕ್ಕಳು ಸಾಯಬೇಕು ಇಲ್ಲವೇ ತಂದೆಯಿಂದ ದೂರವಾಗಬೇಕು. ಭರತಶತ್ರುಘ್ನರು ಆಗಲೇ ದೂರವಾಗಿದ್ದರು. ಇನ್ನು ರಾಮಲಕ್ಷ್ಮಣರು; ಅವರು ಸಾಯುವುದಕ್ಕಿಂತ ವನವಾಸವಾದರೂ ಹೋಗಿ ತಂದೆಗೆ ಪುತ್ರಶೋಕವನ್ನುಂಟುಮಾಡಿ ಶಾಪವನ್ನು ಸಾರ್ಥಕಗೊಳಿಸುವುದು ಮೇಲಲ್ಲವೇ? (ಅಲ್ಲದೆ ರಾಮನು ಈ ರೀತಿ ಅಕಾಲಮೃತ್ಯುವಿಗೆ ವಶವಾದರೆ ಅವನ ಅವತಾರ ಹೇಗೆ ಸಫಲವಾಗಬೇಕು?) ಆದುದರಿಂದ ಲೋಕನಿಂದೆಯನ್ನೂ ತನಗೇ ಪ್ರಾಪ್ತವಾಗುವ ವೈಧವ್ಯವನ್ನೂ ಲೆಕ್ಕಿಸದೆ, ದಶರಥನು ಸತ್ಯಸಂಧನಾಗಲಿ, ರಾಮನು ಜೀವಿಸಿ ಲೋಕೋತ್ತರನಾಗಲಿ ಎಂಬ ಸದ್ಭಾವನೆಯಿಂದ ಕೈಕೆ ಅಪರಾಧಿನಿಯಾಗುವ ಸಾಹಸಮಾಡುತ್ತಾಳೆ. ತನ್ನ ಮದುವೆಯ ಕಾಲದಲ್ಲಿ ಮಾಡಿದ್ದ ವಾಗ್ದಾನ ಮತ್ತು ದೇವಾಸುರಯುದ್ಧದಲ್ಲಿ ಕೊಟ್ಟಿದ್ದ ಎರಡು ವರಗಳು ಇವೂ ಫಲಿಸುವುದಕ್ಕೆ ಕಾಲ ಒದಗಿದಂತಾಯಿತು. ಪರಿಣಾಮದಲ್ಲಿ ರಾಮನು ಶತ್ರುವಾದ ರಾವಣನನ್ನು ಕೊಂದು ಭೂಭಾರವನ್ನು ಇಳುಕಿ ಲೋಕಾನುಗ್ರಹ ಮಾಡಿದನು. ಈ ಮಂಗಳವು ಯಾರಿಂದ? ಕೈಕೆಯ ಕ್ರೌರ್ಯದಿಂದ!

ಭರತಕುಮಾರ ಯಾರಿಗೂ ಬೇಡದ ಪರದೇಶಿಯೆಂದೆನಿಸಿತೋ ಏನೋ! ರಾಮಾಯಣದಲ್ಲಿ ಅವನ ವಿಚಾರ ಕಂಠೋಕ್ತವಾಗಿ ಹೆಚ್ಚು ಹೇಳಲಿಲ್ಲ. ಹುಟ್ಟಿದಾರಭ್ಯ ಅವನಿಗೆ ತಾತನ ಮನೆಯ ಬೆಂಬಲ ಬಹಳ. ಮದುವೆಯ ಶಾಸ್ತ್ರವಾದ ಮೇಲೆ

ಹೊರಟುಹೋದ. ತಂದೆ ಸತ್ತಮೇಲೆ ಬರಬೇಕಾಯಿತು. ಈ ಮಧ್ಯೆ ಅವನ ಹೆಸರಿನಲ್ಲಿ ಕೈಕೆ ಅಷ್ಟು ಅನರ್ಥಮಾಡಿದ್ದಳು. ಆದ್ದರಿಂದ ಸಹಜವಾಗಿ ಜನರಿಗೆ ಅವನ ಮೇಲೆ ಅನಾದರ ಒಂದು ಕಡೆ, ಆಗ್ರಹ ಮತ್ತೊಂದು ಕಡೆ. ಪಾಪ, ಅವನದೇನು ತಪ್ಪು, ಏನೂ ಅರಿಯ. ಆದರೆ ರಾಮನಿಗಾದ ಅನರ್ಥದಲ್ಲಿ ಅದನ್ನು ಯಾರು ಲಕ್ಷಿಸುತ್ತಾರೆ? ಎಲ್ಲರೂ ಹಳಿಯಲಾರಂಭಿಸಿದರು. ಭಾಸಕವಿ ಪ್ರತಿಮಾನಾಟಕದಲ್ಲಿ ಭರತನ ಪಾತ್ರಕ್ಕೆ ಸಲ್ಲಬೇಕಾದ ಉತ್ಕರ್ಷವನ್ನು ಒದಗಿಸಿದ್ದಾನೆ. ಯೋಚಿಸೋಣ. ಅವನ ಸ್ವಾರ್ಥತ್ಯಾಗ ರಾಮನ ತ್ಯಾಗಕ್ಕೇನು ಕಡಮೆ? ಅಯೋಧ್ಯೆಗೂ ಕೂಡ ಬರದೆ ನೇರವಾಗಿ ಕಾಡಿಗೆ ಹೋಗಿ ರಾಮನನ್ನು ಧರ್ಮದೃಷ್ಟಿಯಿಂದ ಪಿತೃವಾಕ್ಯಪರಿಪಾಲನೆಯ ದೃಷ್ಟಿಯಿಂದ ಸೌಜನ್ಯ ದೃಷ್ಟಿಯಿಂದ ಜಯಿಸಿ—ಸ್ವಲ್ಪವೂ ಡಂಭ ಆಡಂಬರಗಳಿಲ್ಲದೆ ತನ್ನ ಪರಿಶುದ್ಧವಾದ ಅಂತರಂಗವನ್ನು ತೋರಿಸಿದ್ದಾನೆ.

ಭಾಸನು ತನ್ನ ಪಾತ್ರಗಳ ಅಂತರಾಳವನ್ನು ಬಹುದೂರ ಶೋಧಿಸುತ್ತಾನೆಂಬುದಕ್ಕೆ ಕರ್ಣನಪಾತ್ರ ಉದಾಹರಣೆಯಾಗಿದೆ. ಕರ್ಣಭಾರ ಸಣ್ಣದಾದರೂ ಕರುಣರಸಪರಿಪೋಷದಲ್ಲಿ ಉತ್ತಮವಾದುದೆಂದು ಮೇಲೆ ಹೇಳಿದೆ. ಕರ್ಣನು ದುರ್ದೈವಕ್ಕೆ ದತ್ತಪುತ್ರ. ಸೂರ್ಯಭಗವಂತನ ಅನುಗ್ರಹದಿಂದ ಜನಿಸಿದನು. ಆದರೂ ತಾಯಿಯಾದ ಕುಂತಿಯು ಅವನನ್ನು ಹೊಳೆಗೆ ಹಾಕಿದಳು. ಆಮೇಲೆ ಗಾಡಿಹೊಡೆಯುವವನ ಕೈಗೆಸಿಕ್ಕಿ ಸೂತಪುತ್ರ, ರಾಧೇಯ ಎಂಬ ಹೆಸರನ್ನು ಪಡೆದನು: ಲೋಕದೃಷ್ಟಿಯಲ್ಲಿ ಹೀನಜಾತಿಯವನಾದ. ಆಮೇಲೆ ಅವನ ಶಸ್ತ್ರಾಭ್ಯಾಸ. ಅದರಲ್ಲೂ ಅದೃಷ್ಟಹೀನ ಶಾಪಗ್ರಸ್ತನಾದ. ಆಮೇಲೆ ಸಹ

ವಾಸ. ಹಾಗೂ ನಿರ್ಭಾಗ್ಯ. ಪ್ರಪಂಚವೇ ಧಿಕ್ಕರಿಸುತ್ತಿದ್ದ ದುರ್ಯೋಧನನಿಗೆ ಜೊತೆಯಾದ. ಅಷ್ಟೈಶ್ವರ್ಯಸಂಪನ್ನನಾದರೂ ಒಳ್ಳೆಯ ಹೆಸರೆಂಬುದು ಅವನಿಗೆ ಬರಲಿಲ್ಲಿ. ಹುಟ್ಟುವಾಗಲೇ ಬಂದ ದಾನಶೂರತ್ವವೂ ದೌರ್ಭಾಗ್ಯವಾಗಿ ಪರಿಣಮಿಸಿತು. ತಾಯಿಯೇ ವರ ಕೇಳಿದಳು; ಕೊಟ್ಟ. ಇಂದ್ರ ಯಾಚಿಸಿದ್ದನ್ನು ಇಲ್ಲವೆನಲಿಲ್ಲ. ದುರ್ದೈವದ ಕೆಲಸವು ಅಲ್ಲಿಗೆ ಸಂಪೂರ್ಣವಾಯಿತು! ಕರ್ಣ ಸತ್ಕುಲಪ್ರಸೂತನಲ್ಲವೇ? ವೀರನಲ್ಲವೇ? ದಾನಿಯಲ್ಲವೇ? ಆದರೂ ದೈವವು ಪ್ರತಿಕೂಲವಾಗಿದ್ದರೆ ಎಷ್ಟು ಗುಣಗಳಿದ್ದರೆ ತಾನೆ ಏನು? ಕರ್ಣನ ಅಚಲವಾದ ಮಿತ್ರವಾತ್ಸಲ್ಯವನ್ನು ಹೇಳತೀರದು. ಆದರೆ ಅದೇ ಅವನಿಗೆ ಮೂಲವಾಯಿತು. ಈ ಕರ್ಣಭಾರದಲ್ಲಿ ಕರ್ಣನು ಯುದ್ಧಕ್ಕೆ ಹೋಗುವುದಕ್ಕೆ ಮುಂಚೆಯೇ ರೆಕ್ಕೆಪುಕ್ಕ ತರಿದ ಪಕ್ಷಿಯಂತಾಗಿದ್ದಾನೆ. ಕನಿಕರವನ್ನುಂಟುಮಾಡುವ ವೀರಾಗ್ರಣಿಯ ಈ ದುಃಸ್ಥಿತಿಯನ್ನು ಭಾಸನ ಹಾಗೆ ಯಾರೂ ಚಿತ್ರಿಸಿಲ್ಲ.

ಭಾಸನ ಪ್ರಕಾರ ಲಕ್ಷ್ಮಣನಿಗೂ ಸೀತಾಪಹಾರಕ್ಕೂ ಸಂಬಂಧವೇ ಇಲ್ಲ. ತೀರ್ಥಯಾತ್ರೆ ಮಾಡಿಕೊಂಡು ಬಂದ ಕುಲಪತಿಯನ್ನು ಸ್ವಾಗತಿಸಲು ರಾಮನ ಪ್ರತಿನಿಧಿಯಾಗಿ ಹೋಗಿರುತ್ತಾನೆ ಲಕ್ಷ್ಮಣ. ಸೀತಾರಾಮರು ಜೊತೆಯಲ್ಲಿದ್ದಾಗಲೇ ರಾವಣ ಸನ್ಯಾಸಿವೇಷದಲ್ಲಿ ಬಂದು 'ಕಾಂಚನಪಾರ್ಶ್ವ'ವೆಂಬ ಮಾಯಾಮೃಗದ ನೆಪದಿಂದ ರಾಮನನ್ನು ದೂರಸಾಗಿಸಿ ಒಂಟಿಯಾಗಿ ನಿಂತ ಸೀತಾದೇವಿಯನ್ನಪಹರಿಸುತ್ತಾನೆ. ಅಂತು ಲಕ್ಷ್ಮಣನ ಮೇಲೆ ಯಾವ ನಿಷ್ಠುರವೂ ಇಲ್ಲ. ಸೀತೆಯೂ ನಿರಪರಾಧಿನಿ. ಗ್ರಹಚಾರಬಲದಿಂದ ಮಾತ್ರ ರಾಮ ಮಾಯಾಮೃಗದ ತತ್ವವನ್ನು ಅರಿಯಲಾರದೆ ಹೋದ!

ಭಾಸನಿಗೆ ಸ್ತ್ರೀಪಾತ್ರಗಳನ್ನು ಕಂಡರೆ ತುಂಬ ಅಭಿಮಾನ, ಅತ್ಯಂತ ಗೌರವ. ಅವನ ಕೈಯಲ್ಲಿ ಯಾವ ಸ್ತ್ರೀಪಾತ್ರವೂ ವಿಕಾರ ಹೊಂದಿರುವುದಿಲ್ಲ. ಕುಂದುಳ್ಳ ಪಾತ್ರವೂ ಕೂಡ ತನ್ನದೇ ಒಂದು ರೂಪದಿಂದ ಬೆಳಗುತ್ತದೆ. ಯೋಗ್ಯ ಪಾತ್ರಗಳಂತೂ ಅತಿಶಯವಾಗಿ ಹೊಳೆಯುತ್ತವೆ. ವಾರಾಂಗನೆಯಾದ ವಸಂತಸೇನೆಯು ತನ್ನ ವೃತ್ತಿ ಅಯೋಗ್ಯವೆಂದು ತಿಳಿದು ಸಜ್ಜನರಾರನ್ನಾದರೂ ಪ್ರೀತಿಸಿ ಜೀವನವನ್ನು ಸಾರ್ಥಕಗೊಳಿಸಬೇಕೆಂದು ಆಸೆಪಡುತ್ತಾಳೆ. ರಾಜಕುಮಾರನನ್ನು ಆಶ್ರಯಿಸಿದರೆ ಅವನ ದಾಸಿಯಾಗಬೇಕು; ಗುಣಾಢ್ಯನಾದ ಸಾಮಾನ್ಯನನ್ನು ಪ್ರೀತಿಸಿದರೆ-ಬಡವನಾದರೂ ಚಿಂತೆಯಿಲ್ಲ–ಸುಖಪಡಬಹುದು. ಈ ಪರಿಶುದ್ಧಭಾವನೆ ವಸಂತಸೇನೆಯ ವಿಚಾರವಾಗಿ ನಮ್ಮ ಗೌರವವನ್ನು ಹೆಚ್ಚಿಸುವುದರಲ್ಲಿ ಅಡ್ಡಿಯಿಲ್ಲ. ಚಾರುದತ್ತನ ಪತ್ನಿ 'ವಿಭವಾನುವಶಳು'. ಐಶ್ವರ್ಯದ ಸುಖವನ್ನು ಸವಿದಿದ್ದರೂ ಪತಿಯ ಬಡತನದಲ್ಲಿ ಅವನಿಗೆ ಅನುಕೂಲಳಾಗಿಯೇ ಇದ್ದಳು; ಕರ್ಕಶಸ್ವಭಾವ ಬರಲಿಲ್ಲ. ಪತಿಯ ಹತ್ತಿರ ನ್ಯಾಸವಾಗಿಟ್ಟಿದ್ದ ವಸಂತಸೇನೆಯ ಆಭರಣಗಳು ಕಳವಾದಾಗ, ಅವನ ಚಿಂತೆಯನ್ನು ನೋಡಿ, ತನ್ನ ಕತ್ತಿನಲ್ಲಿದ್ದ ಮುತ್ತಿನ ಹಾರವನ್ನು ವಿನಿಮಯವಾಗಿ ಕೊಡುತ್ತಾಳೆ. ಉದಾರಿ ಗಂಡನಿಗೆ ತಕ್ಕ ಹೆಂಡತಿ. ರಾಕ್ಷಸಿ ಹಿಡಿಂಬೆ ಪತಿಯನ್ನು ಇನ್ನೊಂದುಸಾರಿ ನೋಡಬೇಕೆಂಬ ಆಸೆಯಿಂದ ಮಾನವ ಸಹಜವಾದ ಅನುರಾಗವನ್ನು ತೋರಿಸುವುದು ರಮಣೀಯವಾಗಿದೆ. ವಾಸವದತ್ತಾ ಪದ್ಮಾವತಿಯರ ಹಿರಿಮೆಯನ್ನು ಆಗಲೇ ನೆನೆದಿದ್ದೇವೆ.

ಇನ್ನೊಂದು ಉದಾತ್ತ ಸ್ತ್ರೀಪಾತ್ರ ವಾಸವದತ್ತೆಯ ತಾಯಿ ರಾಣಿ ಅಂಗಾರವತಿ. ಈ ಪಾತ್ರ ನಮ್ಮ ಸಮಾಜ

ಸಂಸ್ಕೃತಿಯನ್ನು ಎಂದೆಂದಿಗೂ ಬೆಳಗತಕ್ಕದ್ದಾಗಿದೆ. ಪ್ರತಿಜ್ಞಾ ಯೌಗಂಧರಾಯಣದ ಎರಡನೆಯ ಅಂಕದಲ್ಲಿ ನಾವು ಈ ರಾಣಿಯನ್ನು ಮೊದಲು ನೋಡುತ್ತೇವೆ. ಅಷ್ಟು ಹೊತ್ತಿಗೆ ಪ್ರೇಮ ಪ್ರಪಂಚದಲ್ಲಿ ಯಥೇಷ್ಟವಾಗಿ ವಿಹಾರಮಾಡಿ, ಕೆಲಕಾಲ ಮಕ್ಕಳಿಲ್ಲದೆ ಕೊರಗಿ, ಕೊನೆಗೆ ದೇವತಾಪ್ರಸಾದದಿಂದ ದಿವ್ಯ ಕನ್ಯಾರತ್ನವನ್ನು ಪಡೆದು ಆ ಹುಡುಗಿಗೆ ವಿವಾಹಮಂಗಳವನ್ನು ನೆರವೇರಿಸುವ ಚಿಂತೆಗೆ ಸಿಕ್ಕಿದ ನುರಿತ ಗೃಹಣಿ, ಕಷ್ಟಸುಖ ಕಂಡವಳು. ಮಗಳ ಮೇಲಿನ ವ್ಯಾಮೋಹದಿಂದ ಆದದ್ದಾಗಲಿ ಒಳ್ಳೆಯ ವರನನ್ನೇ ತಂದು ಮದುವೆಮಾಡಬೇಕೆಂದು ಪತಿಯನ್ನು ಬಿಡುವಿಲ್ಲದೆ ಒತ್ತಾಯಪಡಿಸುವಷ್ಟು ಅಕ್ಕರ ಆಸ್ಥೆಯುಳ್ಳವಳು. ವತ್ಸರಾಜ ಸೆರೆಸಿಕ್ಕಿಬಿಟ್ಟನೆಂದು ಕೇಳಿದ ಮೇಲೆ—ಈಗೇನವಸರ ಮದುವೆಗೆ, ನಮ್ಮ ಹುಡುಗಿ ಇನ್ನೂ ಚಿಕ್ಕವಳು ಎಂದು ಅಂತಃ ತೃಪ್ತಿಹೊಂದಿದ ಆದರೆ ಮೇಲೆ ಅಸಡ್ಡೆಯನ್ನು ತೋರಿಸುವ ಬಿನ್ನಾಣದ ಚದುರೆ. ಆದರೆ ಅವಳ ನಿರೀಕ್ಷಣೆಗೆ ತಕ್ಕಂತೆ ನಡೆಯಲು ದೈವ ದಾರಿಕೊಡಲಿಲ್ಲ. ಮಗಳು ಅಳಿಯ ಇಬ್ಬರೂ ಒಂದಾಗಿ ಕೌಶಾಂಬೀ ಪಟ್ಟಣಕ್ಕೆ ಓಡಿಹೋದರು. ಎಷ್ಟೋ ಕಷ್ಟಪಟ್ಟು ಪಡೆದ ಮುದ್ದಿನ ಒಬ್ಬಳೇ ಮಗಳು——ಅವಳ ಮದುವೆಯ ಕಥೆ ಹೀಗಾಯಿತೆಂದರೆ ತಾಯಿಯಾದವಳಿಗೆ ಅದಕ್ಕಿಂತ ಕಠಿನತರವಾದ ಆಶಾಭಂಗವಿಲ್ಲ; ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಳು. ಆಗ ಮಹಾಸೇನನು ರಾಣಿಯನ್ನು ಸಮಾಧಾನಗೊಳಿಸಿ ಓಡಿಹೋದ ದಂಪತಿಗಳ ಚಿತ್ರಗಳನ್ನಿಟ್ಟು ಅವಕ್ಕೆ ವಿವಾಹಮಹೋತ್ಸವ ನೆರವೇರಿಸಿದನಂತೆ! ಅಂತು ಮಗಳಿಗೆ ಅನುರೂಪನಾದ ವರ ಸಿಕ್ಕಿದನೆಂದು ಮಾತಾಪಿತೃಗಳು ಕಷ್ಟದಿಂದ ಸಮಾಧಾನ ತಂದುಕೊಂಡರು.

ಆದರೆ ಆ ದೈವ ಮತ್ತೊಂದು ಪೆಟ್ಟನ್ನು ಹಾಕಿತು. ವಾಸವ ದತ್ತೆ ಲಾವಾಣಕದ ಬೆಂಕಿಯ ಅನಾಹುತಕ್ಕೆ ಸಿಕ್ಕಿ ಮೃತಳಾದ ಳೆಂದು ವದಂತಿ ಅವರ ಕಿವಿಗೆ ಬಿತ್ತು; ಅದರ ಜೊತೆಗೆ ವತ್ಸ ರಾಜನು ಎಷ್ಟು ದುಃಖಪಡುತ್ತಿರುವನೆಂಬುದೂ ತಿಳಿಯಿತು. ರಾಣಿ ಅತ್ಯಂತ ವ್ಯಸನಾಕ್ರಾಂತಳಾದರೂ ವತ್ಸರಾಜನ ದುರ ದೃಷ್ಟಕ್ಕೆ ಮರುಕಗೊಂಡು ಈ ಪ್ರಕಾರವಾಗಿ ಸಂದೇಶ ವೊಂದನ್ನು ಅವನಿಗೆ ಕಳುಹಿಸುತ್ತಾಳೆ—

"ವಾಸವದತ್ತೆಯಂತೂ ಮರೆಯಾದಳು. ಮಹಾಸೇನಮಹಾರಾಜ ರಿಗೂ ನನಗೂ ಗೋಪಾಲಕ ಪಾಲಕರು (ಇವರಿಬ್ಬರೂ ಮಕ್ಕಳು) ಹೇಗೆ ಪ್ರೀತಿಪಾತ್ರರೋ ಹಾಗೆಯೇ ನೀನು. ಮೊದಲೇ ನಮ್ಮ ಅಳಿಯನೆಂದು ಅಭಿಪ್ರಾಯಪಟ್ಟಿದ್ದೆವು. ಈ ಕಾರಣದಿಂದ ನಿನ್ನನ್ನು ಉಜ್ಜಯಿನಿಗೂ ಕರೆಯಿಸಿದೆವು. ವೀಣೆಯ ನೆಪದಿಂದ ಅಗ್ನಿಸಾಕ್ಷಿಯೊಂದುವಿನಾ ಹುಡುಗಿ ಯನ್ನು ಧಾರೆಯೆರೆದುಕೊಟ್ಟೆವು. ನೀನು ಚಪಲತೆಯಿಂದ ವಿವಾಹ ಮಹೋತ್ಸವವನ್ನು ನಡೆಯಿಸಲವಕಾಶಕೊಡದೆ ಹೊರಟುಹೋದೆ. ಅನಂತರ ನಿನ್ನ ಮತ್ತು ವಾಸವದತ್ತೆಯ ಚಿತ್ರವನ್ನು ಹಲಗೆಯಮೇಲೆ ಬರೆದು ವಿವಾಹವನ್ನು ನೆರವೇರಿಸಿದೆವು. ಇಗೋ ಆ ಚಿತ್ರದ ಹಲಗೆ ಯನ್ನು ನಿನಗೆ ಕಳುಹಿಸಿದ್ದೇವೆ. ಅದನ್ನು ನೋಡಿ ಸಮಾಧಾನ ತಂದುಕೋ." (ಸ್ವಪ್ನ-೫೦-೫೧)

ತೊರೆದುಹೋದ ಅಳಿಯನ ಮೇಲೂ ಎಷ್ಟು ಕ್ಷಮಾಸಾಂ ದ್ರವಾದ ಅಭಿಮಾನ! ಸಂಸಾರದ ಕೋಟಲೆಗಳಿಗೆ ಸಿಕ್ಕಿ, ಅತ್ತೆಯ ಕೈಕೆಳಗೆ ನುರಿತು, ಅತ್ತಿಗೆ ನಾದಿನಿಯರ ಬೇಗೆಯಲ್ಲಿ ಬೆಂದು ಗಂಡನ ಎಕ್ಕಸಕ್ಕದ ಮುಸುಕಿನೊಳಗಿನ ಗುದ್ದುಗಳನ್ನು ತಿಂದು ಕೈನೊಂದು ಪರಿಪಕ್ವವಾದ ಚಿತ್ತ, ಎಣೆಯಿಲ್ಲದ ಸಹನೆ ಮುಂತಾದ ಕಲ್ಯಾಣಗುಣಗಳನ್ನು ಒಂದೇ ಸಮನೆ ಕವಿ ಈ

ನಾರೀಮಣಿಯಲ್ಲಿ ಪ್ರಕಾಶಪಡಿಸಿದ್ದಾನೆ. ಭಾಸನಿಗೆ ಸ್ತ್ರೀ ಪಾತ್ರಗಳನ್ನು ಕಂಡರೆ ಏನು ಔದಾರ್ಯ, ಎಷ್ಟು ಮಮತೆ!

ಮನುಷ್ಯನ ದಾರಿದ್ರ್ಯದ ವಿಷಯದಲ್ಲಿ ಭಾಸನು ಚಾರುದತ್ತನ ಮೂಲಕ ಆಡಿಸಿರುವ ಮಾತುಗಳನ್ನು ನೋಡಿದರೆ ಅವನ ಭೂತದಯೆಯೆಷ್ಟೆಂದು ಊಹಿಸಬಹುದು. ಬಡತನವೆನ್ನುವುದು ಮಾನಸ್ಥನಿಗೆ ಉಸಿರಾಡುವ ಸಾವು—

ದಾರಿದ್ರ್ಯಂ ಖಲು ನಾಮ ಮನಸ್ವಿನಃ ಪುರುಷಸ್ಯ ಸೋಚ್ಛ್ವಾಸಂ ಮರಣಮ್ । (ಚಾರು-೧೯೬)

ಅದರಲ್ಲಿಯೂ ಐಶ್ವರ್ಯವಿದ್ದವನು ಎಲ್ಲವನ್ನೂ ಕಳೆದುಕೊಂಡು ಬಡವನಾದರಂತೂ ಬಲುಕಷ್ಟ; ಅವನ ಶರೀರಮಾತ್ರ ನಿಂತಿರುತ್ತದೆಯೇ ಹೊರತು ನಿಜವಾಗಿಯೂ ಅವನು ಸತ್ತಂತೆಯೇ. ಕೇಳಿದವರಿಗೆ ಕೇಳಿದಷ್ಟು ತ್ಯಾಗಮಾಡಿ ದರಿದ್ರನಾದ ಚಾರುದತ್ತ ಎಲ್ಲರಿಗೂ ಪ್ರಿಯನೇ; ಎಲ್ಲರೂ ಅವನನ್ನು ಹೊಗಳುತ್ತಾರೆ. ಆದರೆ ಅವನ ಚಿಂತೆಯೇ ಬೇರೆ—ಐಶ್ವರ್ಯವೆಲ್ಲವೂ ಹೋಯಿತೆಂದು ಅವನಿಗೆ ಯೋಚನೆಯಿಲ್ಲ; ಭಾಗ್ಯಚಕ್ರ ಉರುಳುತ್ತಾ ಇವತ್ತು ಬಡತನವಾದರೆ ನಾಳೆ ಸಿರಿತನ ಬರುತ್ತದೆ. ಇದ್ದ ಸಂಪತ್ತು ಕ್ಷೀಣವಾಗಿ ತೇಜಸ್ಸು ಹೋದಮೇಲೆ ಸಜ್ಜನರ ಸ್ನೇಹ ಶಿಥಿಲವಾಗುವುದಲ್ಲಾ ಎಂಬ ಕಿಂಕೃತಿ ಅವನ ಆತ್ಮವನ್ನು ದಹಿಸುತ್ತದೆ. ಇದೊಂದು ಹೃದಯವನ್ನು ಇರಿಯುವ ಸನ್ನಿವೇಶ. ಧನ ಕಳೆದುಹೋದುದು ಅವಮಾನವಲ್ಲ; ಅದರಿಂದ ಇಷ್ಟಮಿತ್ರರು ದೂರದೂರ ಸರಿಯುವುದಿದೆಯಲ್ಲ ಅದು ಅವಮಾನ. ಹಣವಿದ್ದಾಗ ನಲವತ್ತನೆಯ ತಲೆಯ ದಾಯಾದ ಕೂಡ ಎಲ್ಲೂ ಇಲ್ಲದ ಪ್ರೀತಿಗೌರವಗಳನ್ನು ತೋರಿಸುತ್ತಾ ಹತ್ತಿರಬರುತ್ತಾನೆ. ಹಣಕಳೆದುಕೊಂಡಾಗ—

ದಾರಿದ್ರ್ಯಾತ್ ಪುರುಷಸ್ಯ ಬಾನ್ಧವಜನೋ ವಾಕ್ಯೇ ನ ಸನ್ತಿಷ್ಠತೇ
ಸತ್ವಂ ಹಾಸ್ಯಮುಪೈತಿ ಶೀಲಶಶಿನಃ ಕಾನ್ತಿಃ ಪರಿಮ್ಲಾಯತೇ ।
ನಿರ್ವೈರಾ ವಿಮುಖೀಭವನ್ತಿ ಸುಹೃದಃ ಸ್ಫೀತಾ ಭವನ್ತ್ಯಾಪದಃ
ಪಾಪಂ ಕರ್ಮ ಚ ಯತ್ ಪರೈರಪಿ ಕೃತಂ ತತ್ತಸ್ಯ ಸಮ್ಭಾವ್ಯತೇ ॥
(ಚಾರು-೧೯೮)

ಬಂಧುಗಳು ಅವನ ಮಾತನ್ನು ಲಕ್ಷ್ಯಮಾಡುವುದಿಲ್ಲ. ಬಾಳು ಹಾಸ್ಯಾಸ್ಪದವಾಗುತ್ತದೆ. ಗುಣಶೀಲಗಳು ಮಾಸಲಾಗುತ್ತವೆ. ಸ್ನೇಹಿತರು ಶತ್ರುಗಳಾಗದಿದ್ದರೂ 'ಅಲಕ್' ಆಗುತ್ತಾರೆ. ಆಪತ್ತುಗಳು ಒಂದಕ್ಕೊಂದು ಜೋಡಿಸಿಕೊಂಡು ಬರುತ್ತವೆ. ಅವರಿವರು ಮಾಡಿದ ತಪ್ಪಾದರೂ ಇವನೇ ಮಾಡಿರಬೇಕೆಂದು ಬೇಗ ಹೊರಿಸುತ್ತಾರೆ.

ಕಃ ಶ್ರದ್ಧಾಸ್ಯತಿ ಭೂತಾರ್ಥಂ ಸರ್ವೋ ಮಾಂ ತುಲಯಿಷ್ಯತಿ ।
ಶಙ್ಕನೀಯಾ ಹಿ ದೋಷೇಷು ನಿಷ್ಪ್ರಭಾವಾ ದರಿದ್ರತಾ ॥
(ಚಾರು-೨೩೨)

ವಸಂತಸೇನೆ ಘಾತುಕರ ಭಯದಿಂದ ಚಾರುದತ್ತನಹತ್ತಿರ ತನ್ನ ಆಭರಣಗಳನ್ನು ನ್ಯಾಸವಾಗಿಟ್ಟಿರುತ್ತಾಳೆ. ಅನಂತರ ಅವು ಕಳವಾದವು. ಕಳ್ಳರು ನುಗ್ಗಿದ್ದರು ; ಒಡವೆಗಳು ಕಳವಾದವೆಂದರೆ ನಂಬುವರೇ ? ಶ್ರೀಮಂತನಾಗಿದ್ದವನು, ದೊಡ್ಡಮನುಷ್ಯ, ಮೋಸಮಾಡಲಾರ ಎಂದು ಸ್ವಲ್ಪವಾದರೂ ವಿಚಾರಮಾಡುವರೇ ? ಅಂತಹ ಸಂದರ್ಭದಲ್ಲಿ ಎಲ್ಲರೂ ಬಾಯಿಹಾಕುತ್ತಾರೆ ; ತನಿಖೆಮಾಡುತ್ತಾರೆ. ಬಡತನದಿಂದ ಮೊದಲೇ ಮುಖಭಂಗವಾಗಿರುವಾಗ, ಏನೋ ಇರಬಹುದೋ ಏನೋ ಎಂದು ಸಂದೇಹಪಡುತ್ತಾರೆ !

ಇಂತಹ ಹೀನಸ್ಥಿತಿಯಲ್ಲಿಯೂ ಕೂಡ ಚಾರುದತ್ತನನ್ನು ಕವಿ ಬಿಟ್ಟುಕೊಡುವುದಿಲ್ಲ. ಸಂಪೂರ್ಣವಾಗಿ ಅವನ ಮಾನ ಸಂರಕ್ಷಣೆ ಮಾಡುತ್ತಾನೆ. ಕಳೆದುಹೋದ ವಸ್ತುವಿಗೆ ಬದಲಾಗಿ ಹೆಂಡತಿಯ ಮುತ್ತಿನ ಹಾರವನ್ನು ವಿದೂಷಕನ ಕೈಲಿ ವಸಂತ ಸೇನೆಗೆ ಕಳುಹಿಸಿಕೊಟ್ಟ ಚಾರುದತ್ತ. ಆ ಗಣಿಕೆ ಬೆರಗಾಗಿ—

ಸಾಧು ಚಾರುದತ್ತ! ಭಾಗಧೇಯಪರಿವೃತ್ತಾಯಾಂ ದಶಾಯಾಂ ಮಾನಾವಮಾನಂ ರಕ್ಷಿತಮ್ । (ಚಾರು-೩೪೫)

ಎಂದು ಅವನನ್ನು ಮೆಚ್ಚಿ ಪರವಶಳಾಗುತ್ತಾಳೆ. ಎಂತಹ ದೌರ್ಭಾಗ್ಯದಶೆಯಲ್ಲಿಯೂ ಕೂಡ ಮಾನಾವಮಾನವನ್ನು ಮನುಷ್ಯ ರಕ್ಷಿಸಿಕೊಳ್ಳಬಹುದು. ಅದು ಅಸಾಧ್ಯವಲ್ಲವೆಂಬ ಭಾವನೆಯಿಂದ ಕವಿ ದರಿದ್ರಚಾರುದತ್ತನನ್ನು ಉದಾತ್ತಪಾತ್ರ ವನ್ನಾಗಿ ರಚಿಸಿದ್ದಾನೆ. ಒಂದುವೇಳೆ ಈ ಪರಿಯಾದ ಬಡತನ ಭಾಸನ ಸ್ವಂತ ಅನುಭವವೇ ಎನಿಸುತ್ತದೆ. ಶಾಂತಂ ಪಾಪಂ!

ಸುಭಾಷಿತಗ್ರಂಥಗಳಲ್ಲಿ ಭಾಸಕೃತವೆಂದು ಹದಿನಾಲ್ಕು ಶ್ಲೋಕಗಳು ಕಂಡುಬರುತ್ತವೆ. ಅವುಗಳಲ್ಲಿ ಕಾಣುವ ಮನೋಧರ್ಮವೂ ಕೂಡ ಕವಿಯ ವಿಚಾರವಲ್ಲಿ ನಾವು ಗ್ರಹಿಸಿರುವಂತೆಯೇ ಇದೆ. ಹದಿನಾಲ್ಕರಲ್ಲಿ ಒಂದಾದರೂ ನಮ್ಮ ನಾಟಕ ಚಕ್ರದಲ್ಲಿ ಸಿಕ್ಕಿಲ್ಲವಲ್ಲ ಎಂದು ಕೆಲವರ ಶಂಕೆ. ಆದರೆ ಈ ಶ್ಲೋಕವನ್ನು ನೋಡಿ—

ದುಃಖಾರ್ತೇ ಮಯಿ ದುಃಖಿತಾ ಭವತಿ ಯಾ ಹೃಷ್ಟೇ ಪ್ರಹೃಷ್ಟಾ ತಥಾ
ದೀನೇ ದೈನ್ಯಮುಪೈತಿ ರೋಷಪರುಷೇ ಪಥ್ಯಂ ವಚೋ ಭಾಷತೇ ।
ಕಾಲಂ ವೇತ್ತಿ ಕಥಾಃ ಕರೋತಿ ನಿಪುಣಾ ಮತ್ಸಂಸ್ತವೇ ರಜ್ಯತಿ
ಭಾರ್ಯಾ ಮನ್ತ್ರಿವರಃ ಸಖಾ ಪರಿಜನಃ ಸೈಕಾ ಬಹುತ್ವಂ ಗತಾ ॥

ನನಗೆ ದುಃಖವೆಂದರೆ ಅವಳಿಗೂ ದುಃಖ; ನನ್ನ ಸಂತೋಷವೇ ಅವಳ ಸಂತೋಷ; ನಾನು ದೀನನಾದರೆ ಅವಳೂ ದೀನಳು; ಕೋಪದಿಂದ ನಾನು ಕಠಿನವಾಗಿ ಮಾತನಾಡಿದರೆ ಅವಳದು ಹಿತನುಡಿ; ಕಾಲದೇಶವನ್ನರಿತವಳು; ಕಥೆಹೇಳುವುದರಲ್ಲಿ ನಿಪುಣೆ; ನನನ್ನು ಹೊಗಳುತ್ತಿದ್ದರೆ ಕೇಳಲು ಅವಳಿಗೆ ಆನಂದ. ಒಬ್ಬಳೇ ಆದರೂ ಅವಳು ನನ್ನ ಭಾಗಕ್ಕೆ ಹೆಂಡತಿ, ಮಂತ್ರಿ, ಸಖಿ ಮತ್ತು ಸೇವಕಿಯಾಗಿದ್ದಳು. ಈ ಪದ್ಯವನ್ನು ಸ್ವಪ್ನವಾಸವದತ್ತದಲ್ಲಿ ವತ್ಸರಾಜನ ವಿರಹಾಲಾಪದ ಮಧ್ಯೆ ಸೇರಿಸಿದರೆ ಏನು ತಪ್ಪು?

---

## ೬. ಹಾಸ್ಯ

ಸಂಸ್ಕೃತ ನಾಟಕದಲ್ಲಿ ಹಾಸ್ಯರಸ ಮುಖ್ಯವಾಗಿ ವಿದೂಷಕನ ಪಾತ್ರದಿಂದ ಎಂಬುದು ತಿಳಿದ ವಿಷಯ. ಅವನ ಲಕ್ಷಣ ಇದು—

ಕುಸುಮವಸಂತಾದ್ಯಭಿಧಃ ಕರ್ಮವಪುರ್ವೇಷಭಾಷಾದ್ಯೈಃ ।
ಹಾಸ್ಯಕರಃ ಕಲಹರತಿಃ ವಿದೂಷಕಃ ಸ್ಯಾತ್ಸ್ವಕರ್ಮಜ್ಞಃ ॥

ಮೊದಲು ಅವನ ಹೆಸರೇ ವಿಚಿತ್ರ. ಕುರೂಪಿಯಾಗಿದ್ದರೂ ಕುಸುಮ, ವಸಂತ ಎಂದು ಅವನನ್ನು ಕರೆಯುವೆವು. ಆಕಾರವೂ ವಿಕಾರವೇ. ಅವನನ್ನು ಒಂದು ಸಾರಿ ಬಳಸಿಬಂದರೆ ಶರೀರಕ್ಕೆ ತಕ್ಕಷ್ಟು ವ್ಯಾಯಮವಾಗಿ ಹಸಿವಾಗುವುದು! ವಿಚಿತ್ರ

ವೇಷ—ರಂಗುರಂಗಿನ ಬಟ್ಟೆ ಸೊಟ್ಟಸೊಟ್ಟಗೆ ತೊಟ್ಟಿರುವುದು ಇತ್ಯಾದಿ. ಮತ್ತೆ ಮಾತಿನಮಲ್ಲ. ಕೆಲವು ವೇಳೆ ಪಂಡಿತಂ ಮನ್ಯ. ಹೊಟ್ಟೆಬಾಕ. ಇವಿಷ್ಟು ಸ್ವಂತ ಕಲ್ಯಾಣಗುಣಗಳು. ಇತರರೊಡನೆ ಸಂಬಂಧವೆಂದರೆ ಜಗಳ ಹತ್ತಿಸುವುದು; ತಾನು ತಮಾಷೆ ನೋಡುವುದು. ಅಂತೂ ಇಂತೂ ಸ್ವಾರ್ಥಪರ. ಇವುಗಳಲ್ಲಿ ಎಲ್ಲ ಲಕ್ಷಣಗಳೂ ಎಲ್ಲ ವಿದೂಷಕರಲ್ಲಿಯೂ ಇರುವುದಿಲ್ಲ. ಪ್ರೇಕ್ಷಕರನ್ನು ನಗಿಸುವುದು ಆ ಪಾತ್ರದ ಮುಖ್ಯ ಉದ್ದೇಶ. ಕವಿಗಳು ತಮ್ಮ ತಮ್ಮ ಪ್ರತಿಭೆಗನುಗುಣ ವಾಗಿ ಈ ಪಾತ್ರವನ್ನು ರಸವತ್ತಾಗಿ ರಚಿಸುತ್ತಾರೆ. ಭಾಸನ ವಿದೂಷಕನಲ್ಲಿ ಕಳೆ ತುಂಬಿದೆ.

ಭಾಸನ ಎಲ್ಲಾ ನಾಟಕಗಳಲ್ಲಿಯೂ ವಿದೂಷಕನ ಪಾತ್ರ ಬಂದಿಲ್ಲ. ಅವನಿರುವ ನಾಟಕಗಳಲ್ಲಿಯೂ ಯಾವ ಸ್ಥಾನ ಉಚಿತವೋ ಅದು ಮಾತ್ರ ಅವನಿಗೆ ಲಭಿಸಿದೆ. ಏಕಾಂಕ ನಾಟಕಗಳಲ್ಲಿ ವಿದೂಷಕನಿಗೆ ಸಮಯವಿಲ್ಲ. ಪಂಚರಾತ್ರ, ಪ್ರತಿಮಾ ಮತ್ತು ಅಭಿಷೇಕ ನಾಟಕಗಳಲ್ಲಿ ಅವನು ಅನುಚಿತ. ಬಾಲಚರಿತದಲ್ಲಿ ಬೇಕಿಲ್ಲ. ಮಧ್ಯಮ ವ್ಯಾಯೋಗದಲ್ಲಿ (ಭೀಮ, ಘಟೋತ್ಕಚ, ಹಿಡಿಂಬೆಯಂತಹ ಪಾತ್ರಗಳ ಮಧ್ಯೆ) ಅಧಿಕ ಪ್ರಸಂಗ. ಆದುದರಿಂದ ಅವಿಮಾರಕ, ಚಾರುದತ್ತ, ಪ್ರತಿಜ್ಞಾ ಯೌಗಂಧರಾಯಣ ಮತ್ತು ಸ್ವಪ್ನವಾಸವದತ್ತ ಈ ನಾಲ್ಕು ನಾಟಕಗಳಲ್ಲಿ ಮಾತ್ರ ಅವನ ಪ್ರವೇಶವಿದೆ.

ನಗುವುದಕ್ಕೆ ತಕ್ಕುದು (ಹಸಿತುಂ ಯೋಗ್ಯಂ) ತಾನೆ ಹಾಸ್ಯ. ಯಾವಯಾವುದು ತಕ್ಕುದು ಎಂಬುದು ದೊಡ್ಡ ಪ್ರಶ್ನೆ. ನಗು ವುದಕ್ಕೆ ನಾನಾ ಕಾರಣಗಳು. ಸ್ಥೂಲವಾಗಿ ಅವುಗಳಲ್ಲಿ ಎರಡು ಪರಂಪರೆಗಳನ್ನು ಗ್ರಹಿಸಬಹುದು. ಜನಸಾಮಾನ್ಯದಲ್ಲಿ ಕಾಣ

ಬರುವ ಲೋಪದೋಷಗಳನ್ನು ನೋಡಿ ನಗುವುದೊಂದು. ಯಾವುದಾದರೂ ಒಂದು ವಿಷಯವನ್ನು ಚಮತ್ಕಾರವಾಗಿ ಹೇಳಿದಾಗ ನಗುವುದು ಮತ್ತೊಂದು. ಮೊದಲನೆಯ ಸಂದರ್ಭದಲ್ಲಿ ಹೆಚ್ಚು ಬುದ್ಧಿಯ ಪ್ರಯೋಗವಿಲ್ಲ. ಎರಡನೆಯದರಲ್ಲಿ ನಗುವ ಮುನ್ನ ಮನಸ್ಸಿನಲ್ಲಿ ಒಂದು ತರಹ ಚಮತ್ಕಾರವುಂಟಾಗುತ್ತದೆ. ನಮ್ಮ ಜ್ಞಾನೇಂದ್ರಿಯ ಉದ್ಬುದ್ಧವಾಗಿ ತೃಪ್ತಿಹೊಂದುತ್ತದೆ. ಒಂದು "ಆಪಾತಮಧುರ"; ಇನ್ನೊಂದು "ಆಲೋಚನಾವೃತ".

ವಿದೂಷಕನ ಹಾಸ್ಯ ಹೆಚ್ಚಾಗಿ ಮೊದಲನೆಯ ಜಾತಿಗೆ ಸೇರಿದ್ದು. ಅದರಲ್ಲಿಯೂ ಅಷ್ಟು ಉದಾತ್ತಭಾವ ದುರ್ಲಭ. ಇದ್ದುದರಲ್ಲಿ ಭಾಸನ ವಿದೂಷಕ ಒಂದು ವೈಲಕ್ಷಣ್ಯದಿಂದ ಪ್ರೇಕ್ಷಕರನ್ನು ಹಾಸ್ಯದಲ್ಲಿ ಮುಳುಗಿಸುತ್ತಾನೆ. ಮುಖ್ಯವಾಗಿ ಅವನು ನಾಯಕನಿಗೆ ಪ್ರಣಯಮಂತ್ರಿ. ನಾಯಕಿಗೆ ಸಖಿ ಹೇಗೋ ಹಾಗೆ. ನಾಯಕ ನಾಯಕಿಯರಿಗೆ ಸಮಾಗಮವನ್ನುಂಟುಮಾಡುತ್ತಾನೆ; ಆ ಪ್ರಯತ್ನದಲ್ಲಿ ಬಂದ ಅಡ್ಡಿಗಳನ್ನೆಲ್ಲಾ ಚತುರತೆಯಿಂದ ಪರಿಹರಿಸುತ್ತಾನೆ. ಚಾರುದತ್ತ-ಅವಿಮಾರಕಗಳಲ್ಲಿ ಅವನಮೇಲೆ ಅಷ್ಟು ಜವಾಬ್ದಾರಿ ಬೀಳುವುದಿಲ್ಲ; ಅವನು ಕೇವಲ ನಾಯಕನ ಜೊತೆಗಾರ. ಅವಿಮಾರಕ ಕನ್ಯಾಂತಃಪುರಕ್ಕೆ ಹೋಗುವಾಗ ವಿದೂಷಕನನ್ನು ಹಿಂದೆಯೇ ಬಿಟ್ಟು ಹೋಗುತ್ತಾನೆ. "ಏಕಃ ಪರಗೃಹಂ ಗಚ್ಛೇತ್" ಎಂದು ಶಾಸ್ತ್ರವಚನ! ಚಾರುದತ್ತದಲ್ಲಿ ನಾಯಕನಿಗೆ ಮಾಡಿದ ಸಹಾಯ ವಿಪರೀತವಾಯಿತು. ನ್ಯಾಸವಾಗಿಟ್ಟಿದ್ದ ವಸಂತಸೇನೆಯ ಆಭರಣದ ಗಂಟನ್ನು ಕನವರಿಸುತ್ತಾ ಕಳ್ಳನ ಕೈಗೇ ಕೊಟ್ಟುಬಿಡುತ್ತಾನೆ! (ಚಾರು-೩೩೦). ಇದರ ಫಲವಾಗಿ ಬ್ರಾಹ್ಮಣಿ, ಚಾರು

ದತ್ತನ ಹೆಂಡತಿ, ಹೆಸರಿಗೆ ಮಾತ್ರ ಉಳಿದಿದ್ದ ಕೊರಳಹಾರವನ್ನು ಕೊಟ್ಟುಬಿಡಬೇಕಾಯಿತು. ವಸ್ತುತಃ ಇದು ಪ್ರಮಾದವಾದರೂ ವಿದೂಷಕ ಮಾಡಿದ್ದರಿಂದ ಪ್ರೇಕ್ಷಕರಿಗೆ ಹಾಸ್ಯವಾಗುತ್ತದೆ. ಅವಿಮಾರಕ-ಚಾರುದತ್ತಗಳ ವಿದೂಷಕರು—ಒಬ್ಬ ಸಂತುಷ್ಟ ಇನ್ನೊಬ್ಬ ಮೈತ್ರೇಯ—ಬುದ್ಧಿಯಲ್ಲಿ ಬೃಹಸ್ಪತಿಗಳು!

ಚೇಟಿ—ಆರ್ಯ ಮೈತ್ರೇಯ! ಸನ್ಧಿಂ ಛಿತ್ವಾ ಚೋರಃ ಪ್ರವಿಷ್ಟಃ ।

ವಿದೂ—(ಸಹಸೋತ್ಥಾಯ) ಕಿಂ ಭಣತಿ ಭವತೀ । ಚೋರಂ ಛಿತ್ವಾ ಸನ್ಧಿಃ ಪ್ರವಿಷ್ಟಃ ?

ಚೇಟಿ—ಹತಾಶ! ಸನ್ಧಿಂ ಛಿತ್ವಾ ಚೋರಃ ಪ್ರವಿಷ್ಟಃ + ।

(ಚಾರು—೨೩೧)

ಪಾಪ! ನಿದ್ರೆಯ ಜಡರಿನಲ್ಲಿ ಮಾತು ಸರಿಯಾಗಿ ಹೊರಡಲಿಲ್ಲ. ಆದರೆ ಸ್ವಪ್ನವಾಸವದತ್ತದಲ್ಲಿ (ಸ್ವಪ್ನ—೩೯-೪೦) ರಾಜನಿಗೆ ನಿದ್ರೆ ಬರುವಂತೆ ಕಥೆ ಹೇಳಲು ಹೊರಟು ರಾಜ ಬ್ರಹ್ಮದತ್ತ, ಊರು ಕಾಂಪಿಲ್ಯ ಎಂಬುದನ್ನು ತಲೆಕೆಳಗಾಗಿ ರಾಜ ಕಾಂಪಿಲ್ಯ ಊರು ಬ್ರಹ್ಮದತ್ತ ಎಂದು ನಗಿಸುತ್ತಾನೆ. ಇಲ್ಲಿ ಅವನದು ನಟನೆಯಂತೆ ಕಾಣುತ್ತದೆ. ಅವಿಮಾರಕದಲ್ಲಿ ಒಂದು ಸ್ವಾರಸ್ಯವಾದ ಸಂಭಾಷಣೆ ಈರೀತಿ ಇದೆ. ಅದೂ ನಟನೆಯೇ.

ವಿದೂ—ಚಂದ್ರಿಕೆ! ಏನು ಸಮಾಚಾರ?

ಚೇಟಿ—ಬ್ರಾಹ್ಮಣನೊಬ್ಬನನ್ನು ಹುಡುಕುತ್ತಿದ್ದೇನಯ್ಯ.

---

+ ಮೊದಲಿನ ವಾಕ್ಯದಲ್ಲಿ "ಚೋರಃ" ಎಂಬುದು ಕರ್ತೃ; "ಸನ್ಧಿಂ" ಎಂಬುದು ಕರ್ಮ. ಎರಡನೆಯ ವಾಕ್ಯದಲ್ಲಿ ಇದನ್ನು ವಿದೂಷಕ ತಲೆಕೆಳಕಾಗಿ ಒದರುತ್ತಾನೆ. ಅರ್ಥ ಆಭಾಸವಾಗುತ್ತದೆ. "ಕನ್ನ ಕೊರೆದು ಕಳ್ಳ ನುಗ್ಗಿದ" ಎನ್ನುವುದರ ಬದಲು "ಕಳ್ಳನ್ನ ಕೊರೆದು ಕನ್ನ ನುಗ್ಗಿತು" ಎಂದು ಹೇಳಿದ ಹಾಗಾಯಿತು!

ವಿ—ಬ್ರಾಹ್ಮಣನಿಂದೇನು ?

ಚೇ—ಇನ್ನೇನು ಊಟಕ್ಕೆ ಹೇಳುವುದಕ್ಕಾಗಿ.

ವಿ—ಎಲೈ, ನಾನೇನು ಶ್ರಮಣಕನೇ ?

ಚೇ—ಅದರೆ, ನೀನು ವೈದಿಕನಲ್ಲ.

ವಿ—ಅದು ಹೇಗೆ ವೈದಿಕನಲ್ಲ ? ಕೇಳು. ರಾಮಾಯಣವೆಂಬುದೊಂದು ನಾಟ್ಯಶಾಸ್ತ್ರ. ಅದರಲ್ಲಿ ಐದು ಶ್ಲೋಕಗಳನ್ನು ವರ್ಷ ಮುಗಿಯುವುದರೊಳಗಾಗಿ ಹೇಳಿದೆ.

ಚೇ—ಬಲ್ಲೆ, ಬಲ್ಲೆ. ಆರ್ಯನ ಮನೆತನಕ್ಕೆ ತಕ್ಕ ಮೇಧಾಶಕ್ತಿ ಅದು!

ವಿ—ಶ್ಲೋಕ ಒಂದೇ ಅಲ್ಲ ಅದರ ಅರ್ಥವನ್ನೂ ತಿಳಿದುಕೊಂಡೆ. ಇನ್ನೊಂದು ವಿಶೇಷ ; ಅಕ್ಷರಜ್ಞನೂ ಅರ್ಥಜ್ಞನೂ ಆದ ಬ್ರಾಹ್ಮಣ ಸಿಕ್ಕುವುದು ಕಷ್ಟ.

ಚೇ—(ಮುದ್ರೆ ಉಂಗುರವನ್ನು ತೋರಿಸಿ) ಹಾಗಾದರೆ ಈ ಅಕ್ಷರ ಯಾವುದು ಹೇಳು.

ವಿ—(ಸ್ವಗತ) ತಿಳಿಯದೆ ಇದ್ದುದು ಏನು ಹೇಳಲಿ ? (ಯೋಚಿಸಿ) ಇರಲಿ, ಹೀಗೆ ಹೇಳುತ್ತೇನೆ. (ಪ್ರಕಾಶ) ಎಲೈ, ಈ ಅಕ್ಷರ ನನ್ನ ಪುಸ್ತಕದಲ್ಲಿಲ್ಲ ! (ಅವಿಮಾರಕ-೧೧೯-೧೨೦)

ಈ 'ಹುಚ್ಚು ಹಾಸ್ಯ'ದಲ್ಲಿ ಚಾರುದತ್ತದ ಶಕಾರನು ವಿದೂಷಕನ ಅಣ್ಣತಮ್ಮ. ಅವನಾದರೋ ದುಶ್ಶಾಸನನು ಸೀತೆಯನ್ನು ಅಪಹರಿಸಿದಂತೆ ವಸಂತಸೇನೆಯನ್ನು ಕದ್ದೊಯ್ಯುತ್ತಾನಂತೆ! ವಾಸನೆಯನ್ನು ಕಿವಿಯಿಂದ ಕೇಳುತ್ತಾನಂತೆ ! ಕತ್ತಲೆ ಕವಿದ ಮೂಗಿನ ಹೊಳ್ಳೆಗಳಿಂದ ಕಣ್ಣು ಕಾಣಿಸುವುದಿಲ್ಲವಂತೆ ! ಮತ್ತು ಅವನ ಅಭಿಪ್ರಾಯದಲ್ಲಿ ಮಹೇಶ್ವರ, ಶಂಕರ ಮತ್ತು ಈಶ್ವರ ಇವರೇ ತ್ರಿಮೂರ್ತಿಗಳು !

ಈ ಪ್ರಕಾರವಾಗಿ ವಿದೂಷಕನ ಚರ್ಯೆ ಮತ್ತು ಹಾಸ್ಯ ಅಷ್ಟು ಮೇಲಲ್ಲವಾದರೂ ಅವನ ಮಾತಿನಲ್ಲಿ ಚಮತ್ಕಾರವಿಲ್ಲದೇ ಇಲ್ಲ.

ಚಾರುದತ್ತ ರಾತ್ರಿ ಅಕ್ಕಪಕ್ಕದಿಂದ ಕೇಳಿಬರುತ್ತಿರುವ ವೀಣಾನಾದವನ್ನು ಸವಿಯುತ್ತ ಮಲಗಿದ್ದಾನೆ. ಗೊಡ್ಡು ವಿದೂಷಕನಿಗೇನು ಬೇಕು ಅದು ? ಆದರೆ ಅವನು ಹೇಳುವ ರೀತಿ—

ವಿದೂ—ವಯಸ್ಯ, ಎಷ್ಟು ಹೊತ್ತಾಗಿದೆ. ಬೀದಿಯಲ್ಲಿ ಸದ್ದಿಲ್ಲ. ನಾಯಿಗಳು ಕೂಡ ನಿದ್ರಿಸುತ್ತಿವೆ. ನಮಗಿನ್ನೂ ನಿದ್ರೆ ಬಂದಿಲ್ಲವಲ್ಲ !

ಹಾಸ್ಯವಂತಿರಲಿ. ಚಾರುದತ್ತ ಐಶ್ವರ್ಯವನ್ನು ನೀಗಿ ದರಿದ್ರನಾದ; ಅವಿಮಾರಕ ಶಾಪದಿಂದ ಚಂಡಾಲನಾದ. ಆದರೂ ವಿದೂಷಕ ತನ್ನ ಮಿತ್ರನನ್ನು ಕೈಬಿಡಲಿಲ್ಲ. ಕಷ್ಟಕಾಲದಲ್ಲಿ ಒಳ್ಳೆಯ ಸಮಾಧಾನ ಹೇಳುತ್ತಾನೆ. ಅಲ್ಲದೆ, ಅವನ ಹೊಟ್ಟೆಬಾಕತನ ಕೂಡ ಹತ್ತೋಟಿಗೆ ಬರುತ್ತದೆ. ಈ ಪರಿಣಾಮವನ್ನು ಅವನೇ ಹೇಳುವಾಗ ನಗದಿರುವಿರಾ ?

ವಿದೂ—ನಾನು ಬದುಕಿದ್ದು ಏನು ಹೇಳಲಿ ? ಮಹರಾಯ ಚಾರುದತ್ತನ ಮನೆಯಲ್ಲಿ ಹಗಲೂ ರಾತ್ರಿ ಚೊಕ್ಕಭೋಜನ ; ನಾನಾಬಗೆಯ ಭಕ್ಷ್ಯಭೋಜ್ಯಗಳು ; ಇಂಗು ಬೇರೆ ಹಾಕಿರುತ್ತೆ. ತೇಗಿದರೆ ಘಮಘಮ. ಒಂದು ಸಾರಿ ಹುಬ್ಬು ಅಲುಗಿದರೆ ತಂದು ಬಡಿಸುವರು. ಮಧ್ಯೇಮಧ್ಯೆ ಪಾನೀಯ. ಚಿತ್ರ ಬರೆಯುವವನ ಉಪಕರಣಗಳಂತೆ ಸುತ್ತಲೂ ಬೇಕಾದಷ್ಟು ಬಟ್ಟಲುಗಳು. ಕಡಬುಗಳನ್ನು ಕಂಠಪೂರ್ತಿ ಸಲ್ಲಿಸಿ ಬೀದಿಯ ಗೂಳಿಯಂತೆ ಮೆಲುಕುಹಾಕುತ್ತಾ ಹಗಲೆಲ್ಲಾ ಕಳೆಯುತ್ತಿದ್ದೆ. ಈಗಲಾದರೋ, ನಮ್ಮ ಚಾರುದತ್ತನ ಬಡತನದಿಂದ ಪಾರಿವಾಳಗಳು ಜೀವಿಸುವಂತೆ ಅಲ್ಲಿ ಇಲ್ಲಿ ಅಲೆದಲೆದು ಏನಾದರೂ ತಿಂದು ಪುನಃ ಅವನ ಮನೆಗೇ ಹೋಗುತ್ತೇನೆ. ಇನ್ನೊಂದಾಶ್ಚರ್ಯ. ನನ್ನ ಹೊಟ್ಟೆ ಈ ಸ್ಥಿತಿಯನ್ನು ಚೆನ್ನಾಗಿ ಬಲ್ಲದು. ಸ್ವಲ್ಪಕ್ಕೇ ಸಂತೋಷಪಡುತ್ತದೆ. ಸಿಕ್ಕಿದರೆ ಭರ್ತಿಯನ್ನೂ ಮಾಡುವುದು. ಸಿಕ್ಕದಿರುವುದನ್ನು ಕೇಳುವುದಿಲ್ಲ ; ಸಿಕ್ಕಿದುದನ್ನು ಬಿಡುವುದಿಲ್ಲ ! (ಚಾರು ೧೯೫-೧೯೬)

ಸಪ್ನವಾಸವದತ್ತದಲ್ಲಿ ವಸಂತಕನು ಹೆಚ್ಚು ಪಾತ್ರವಹಿಸು ತ್ತಾನೆ. ನಾಯಕನಾಯಕಿಯರ ಸಮಾಗಮದಲ್ಲಿ ಅನುವಾಗು ತ್ತಾನೆ. ಇಬ್ಬರಲ್ಲಿಯೂ ಅವನಿಗೆ ವಿಶೇಷ ಬಳಕೆ. ಪ್ರತಿಜ್ಞಾ ಯೌಗಂಧರಾಯಣದಲ್ಲಿ ಅವನ ಪಾತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ದೊರೆತಿದೆ. ತನ್ನ ನರ್ಮತಂತ್ರದ ಎಲ್ಲೆಯನ್ನು ದಾಟಿ ರಾಜ್ಯ ತಂತ್ರದಲ್ಲಿಯೂ ವಿಶೇಷವಾದ ಪರಿಶ್ರಮವನ್ನೂ ಮೇಲಾಗಿ ಶ್ಲಾಘ್ಯವಾದ ಸ್ವಾಮಿನಿಷ್ಠೆಯನ್ನೂ ವಿದೂಷಕನು ತೋರಿಸಿ ದ್ದಾನೆ. ಯೌಗಂಧರಾಯಣನಂತಹ ಸಚಿವೋತ್ತಮನಿಗೆ ವಿಶ್ವಾ ಸವುಂಟಾಗುವಂತೆ ವರ್ತಿಸಿದ ನಿಯತ್ತುಗಾರ. ಒಂದೊಂದು ವೇಳೆ ಮಂತ್ರಿ ಮತ್ತು ಸೇನಾಪತಿ ಇವರು ಕೂಡ ಹತಾಶರಾಗು ತ್ತಿರಲು ಹುರಿದುಂಬಿ ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡುವ ಅವನ ದಕ್ಷತೆ ಸ್ತೋತ್ರಾರ್ಹವಾಗಿದೆ. (ಪ್ರತಿಜ್ಞಾ ೯೦-೯೩)

ವಿದೂಷಕನ ಪಾತ್ರವನ್ನುಪಯೋಗಿಸದೆ ಕೆಲವೆಡೆಗಳಲ್ಲಿ ಕವಿಯು ಹಾಸ್ಯರಸವನ್ನು ತುಂಬಿದ್ದಾನೆ. ಪ್ರತಿಮಾಗೃಹದ ಸುಧಾಕಾರನಿಗೂ ಭಟನಿಗೂ ಆಗುವ ಕಲಹ; ಪ್ರತಿಜ್ಞಾನಾಟ ಕದಲ್ಲಿ ಗಾತ್ರಸೇವಕನಿಗೂ ಭಟನಿಗೂ ಆಗುವ ವಾಗ್ವಾದ— ಇವು ನಗದವರನ್ನು ನಗಿಸುತ್ತದೆ. ಇವೆರಡು ಸಂದರ್ಭಗಳ ಲ್ಲಿಯೂ ಪ್ರಾಕೃತಜನರಿಬ್ಬರು ಪರಸ್ಪರ ಅರಿತುಕೊಳ್ಳದೆ ತಾನೇ ಸರಿ ಎಂಬ ಅಜ್ಞಾನದಿಂದ ಪ್ರತಿಭಟಿಸುವುದು ಹಾಸ್ಯ. ಹಾಗೆಯೇ ಮೇಲುಮೇಲಿನ ದರ್ಜೆಯ ಪಾತ್ರಗಳನ್ನು ಜ್ಞಾಪಿಸಿ ಕೊಳ್ಳುವುದಾದರೆ ಅವರ ಮಾತುಕಥೆ, ಭಾಗವಹಿಸುವ ಸನ್ನಿ ವೇಶಗಳಲ್ಲಿಯೂ ಹಾಸ್ಯರಸ ಅಡಗಿದೆ. ನಿದರ್ಶನವಾಗಿ ರಾವಣ-ಸನ್ಯಾಸಿ ಶ್ರಾದ್ಧಲಕ್ಷಣವನ್ನು ಹೇಳುತ್ತಾ "ಸರ್ವಂ ಶ್ರದ್ಧಯಾ ದತ್ತಂ ಶ್ರಾದ್ಧಮ್" ಎನ್ನುವುದು ಸಾಹಿತ್ಯಜ್ಞಾನವಿಲ್ಲದೆ ನಿಶ್ಶಂಕ

ವಾಗಿ ಪೌರೋಹಿತ್ಯ ಮಾಡಿಸುವವರನ್ನು ಜ್ಞಾಪಕಕ್ಕೆ ತರುತ್ತದೆ. ಭರದ್ವಾಜರ ಆಶ್ರಮದಲ್ಲಿ ರಾಮನಿಗೂ ಅವನ ಮಿತ್ರ ಮಂಡಲಿಗೂ ಸೈನ್ಯಕ್ಕೂ ಆತಿಥ್ಯ ನಡೆಯಿತಷ್ಟೆ. ಆ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಎಲ್ಲವೂ ಸಿದ್ಧವಾಯಿತೆಂದು ಶಿಷ್ಯರು ಭರದ್ವಾಜರ ಮುಂದೆ ವಿಜ್ಞಾಪಿಸುತ್ತಾರೆ. ವಿಭೀಷಣನ ಅನುಯಾಯಿಗಳ ವಿಚಾರದಲ್ಲಿ ಗುರುಗಳೇ ಅಪ್ಪಣೆ ಮಾಡಬೇಕು. ಏನುಮಾಡಬೇಕೆಂಬುದನ್ನು ಶಿಷ್ಯರು ಅರಿಯರು. ಏಕೆ? "ತೇ ಖಲು ಖಾದನ್ತಿ"—ಅವರು ತಿನ್ನುತ್ತಾರಂತೆ! ಪಂಚರಾತ್ರದಲ್ಲಿ ವೇಷಾಂತರದಲ್ಲಿರುವ ಭೀಮಾರ್ಜುನರಿಗೂ ಅಭಿಮನ್ಯುವಿಗೂ, ಮಧ್ಯಮವ್ಯಾಯೋಗದಲ್ಲಿ ಭೀಮಘಟೋತ್ಕಚರಿಗೂ ನಡೆಯುವ ಸಂಭಾಷಣೆಗಳು ಹಾಸ್ಯದ ಲಹರಿ. ಕುಮಾರರಿಬ್ಬರೂ ತುಂಬಿದ ಯೌವನವುಳ್ಳ ಅಸಹಾಯಶೂರರು; ತಮ್ಮ ಕೈಲಿ ಮಾತನಾಡುತ್ತಿರುವವರು ಯಾರೆಂದರಿಯದೆ ಧೋರಣೆಯಿಂದ ಮಾತನಾಡುವರು. ಮಕ್ಕಳ ಪ್ರತಾಪದಿಂದ ಸಂತುಷ್ಟಾಂತರಂಗರಾದ ಭೀಮಾರ್ಜುನರು ಅವರನ್ನು ರೇಗಿಸುವುದು ತುಂಬ ಮನೋಹರವಾಗಿದೆ.

ವಕ್ರೋಕ್ತಿ ವಿಡಂಬನಗಳಿಂದ ಹಲವೆಡೆ ಚಮತ್ಕಾರವೂ, ತನ್ಮೂಲಕ ಹಾಸ್ಯವೂ ಅಡಕವಾಗಿವೆ. ಪ್ರತಿಜ್ಞಾಯೌಗಂಧರಾಯಣದಲ್ಲಿ ಈ ಹಾಸ್ಯರಸ ಹೇರಳವಾಗಿದೆ. ವತ್ಸರಾಜನಿಗೆ ವಾಸವದತ್ತೆಯ ಸಾಕ್ಷಾತ್ಕಾರವಾದಮೇಲೆ ಏನಾಯಿತೆಂಬುದನ್ನು ವಸಂತಕ ಹೀಗೆ ವರ್ಣಿಸುತ್ತಾನೆ—ಸೆರೆಮನೆಯನ್ನು ಪ್ರಮದವನವೆಂದು ಭಾವಿಸಿ ಪ್ರಣಯಲೀಲೆಗಾರಂಭಿಸಿದ್ದಾನೆ ಮಹಾರಾಜ! ಕೊನೆಯ ಅಂಕದಲ್ಲಿ ಯೌಗಂಧರಾಯಣ-ಭರತರೋಹಕರ ಸಂವಾದದಲ್ಲಿ "ಕಟಕಿ" (Irony) ರೂಪವಾದ ವಿಡಂಬನ

ತುಂಬಿದೆ (ಪ್ರತಿಜ್ಞಾ ೧೦೪-೧೦೫). ಎಲ್ಲಕ್ಕೂ ಮೂಲಕಾರಣ ನಾದ ವತ್ಸರಾಜನು ತಪ್ಪಿಸಿಕೊಂಡುಹೋದಮೇಲೆ ಹಿಂದುಳಿದ ಮಂತ್ರಿಯನ್ನು ಬಲವಾದ ಕಾರಾಗೃಹದಲ್ಲಿಡಲು ಏರ್ಪಾಡು. "ಏನು ನಾಚಿಕೆಕೇಡು! ವತ್ಸರಾಜನೆಂಬ ಹೆಸರಿನ ಬೆಂಕಿ ಯನ್ನು ಬಂಧಿಸಿ ಯಾವಾಗ ಸರ್ವತ್ರ ಜಾಗರೂಕತೆಯಿಂದ ರಕ್ಷಣೆ ಆವಶ್ಯಕವಾಗಿತ್ತೋ ಆಗ ಅಮಾತ್ಯರು ನಿದ್ದೆಹೋದರು. ರತ್ನವನ್ನು ಹಾರಿಸಿದ್ದಾಯಿತು. ಅದರ ಪೆಟ್ಟಿಗೆಯನ್ನು ಈಗ ಭದ್ರಪಡಿಸುತ್ತಾರೆ!"

---

## ೭. ಭಾಸನ ಪ್ರಪಂಚ

ಭಾಸನು ಚಿತ್ರಿಸಿರುವ ಪ್ರಪಂಚವು ಸರ್ವತೋಮುಖವಾದುದು. ತುಂಬಿದ ಬಣ್ಣವುಳ್ಳದ್ದು. ಈ ಚಿತ್ರವನ್ನು ಮುಖ್ಯವಾಗಿ ಸಂಸಾರ, ಸಮಾಜ ಮತ್ತು ಜನಪದ ಎಂಬ ಮೂರು ದೃಷ್ಟಿಗಳಿಂದ ನೋಡಬಹುದು.

ಸಂಸಾರಕ್ಕೆ ಮದುವೆ ಮೂಲಭೂತವಾದ ಸಂಸ್ಕಾರವಷ್ಟೆ. ಪ್ರತಿಜ್ಞಾ ಮತ್ತು ಅವಿಮಾರಕಗಳಲ್ಲಿ ಕನ್ಯಾಪಿತೃಗಳ ಚಿಂತೆ

ವಿವರಿಸಲ್ಪಟ್ಟಿದೆ. ಪಂಕ್ತಿಪಂಕ್ತಿಯಲ್ಲಿಯೂ ಸ್ವಭಾವೋಕ್ತಿ ತುಂಬಿದೆಯೆನ್ನಬಹುದು. ಎಂಥವರವನ್ನು ಹುಡಕಬೇಕೆಂಬು ದನ್ನು ಹಿಂದೆಯೇ ಪ್ರಸ್ತಾಪಿಸಿದೆ.

ಇನ್ನು ಮದುವೆಯ ಸಂಭ್ರಮ; ಊಟಉಪಚಾರಗಳು; ಅಳಿಯನ ಜೊತೆಗೆ ಗೆಳೆಯನ ಸುಖ—ಇವೆಲ್ಲವೂ ಸಪ್ನವಾಸವ ದತ್ತದಲ್ಲಿ. ಸಂಬಂಧಮಾಲೆಯನ್ನು ಸಂಪನ್ನಳಾದ ಆವಂತಿ (ವಾಸವದತ್ತೆ)ಯೇ ಕಟ್ಟಬೇಕೆಂದು ದೊಡ್ಡ ಮಹಾರಾಣಿಯವರು ಹೇಳುತ್ತಾರೆ. ಮದುಮಕ್ಕಳಿಗೆ ಆರತಿ ಎತ್ತಬೇಕಾದರೆ ಹಿರಿಯ ಮುತ್ತೈದೆಯೇ ಬೇಕೆಂಬ ಅಕ್ಕರ ಎಲ್ಲರೂ ಕಂಡಿರುವುದಾಗಿದೆ.

ಸಂಸಾರದ ಕೋಟಲೆಗಳೆಂದರೆ ಪ್ರತಿಮಾನಾಟಕದಲ್ಲಿ. ತಂದೆಯಮಾತನ್ನು ಉಳಿಸಿದ ಸತ್ಯಸಂಧ ರಾಮ; ರಾಜ್ಯ ತನ್ನ ದೆಂದು ವಸಿಷ್ಠವಾಮದೇವಾದಿಗಳು ಬಳಿಸಂದು ರಾಜ್ಯವಾಳೆಂದು ಬೇಡಿದರೂ ಬೇಡವೆಂದು ರಾಮನನ್ನೇ ಆಶ್ರಯಿಸಲು ಕಾಡಿಗೆ ನಡೆದ ಧರ್ಮಪರಾಯಣ ಭರತ; ಲಕ್ಷ್ಮಣನಂತಹ ಭ್ರಾತೃ ವತ್ಸಲ ಮತ್ತೊಬ್ಬ ಇಲ್ಲ; ಸೀತೆಯಂತಹ ಪತಿಪರಾಯಣೆ ಜಗತ್ತಿಗೇ ಮಾದರಿ—ಈ ಪ್ರಕಾರವಾಗಿ ದಿವ್ಯಪಾತ್ರಗಳ ಉದಾತ್ತ ವರ್ತನೆ ರಾರಾಜಿಸುತ್ತಿದ್ದರೂ ಅವರ ಸಂಸಾರದ ಅಂತಶ್ಛಿದ್ರ ಗಳು ಮರೆಯಾಗುವಂತಿಲ್ಲ. ಚಿಕ್ಕ ಹೆಂಡತಿಯ ಬಲೆಗೆ ಬಿದ್ದ ದಶರಥನ ಪಾಡು ಬೇಕೇ? ಸಾಲದುದಕ್ಕೆ ಶಾಪಗ್ರಸ್ತವೂ ಆಯಿತು ಅವನ ಬಾಳು. ಸವತಿಯ ಕಾಟಕ್ಕೆ ಸಿಕ್ಕಿಬಿದ್ದ, ಗಂಡ ನಿಗೆ ಬೇಡವಾದ ಹೆಂಡಿರು, ಕೌಸಲ್ಯಾ ಸುಮಿತ್ರೆಯರ ಗೊಡ್ಡು ಜೀವನ ಪ್ರಾಚೀನಕರ್ಮದ ಫಲವಲ್ಲವೇ? ರಾಮ ಕಾಡಿಗೆ ಹೊರಟುಹೋದ. ಕೈಕೆ ಬೇಡವಾದಳು. ದುಃಖ ಉಕ್ಕಿ ಉಕ್ಕಿ ಬರುತ್ತಿದೆ. ದಶರಥ ಕೌಸಲ್ಯೆಯ ಅರಮನೆಯಲ್ಲಿ ಪ್ರಾಣಬಿಡಲು

ನಿಶ್ಚಯಿಸುತ್ತಾನೆ. ಆಗಲೇ ಕಣ್ಣು ಮಂಜಾಯಿತು. ಕೌಸಲ್ಯೆಯನ್ನು ಕುರಿತು

ಅಂಗಂ ಮೇ ಸ್ಪೃಶ ಕೌಸಲ್ಯೇ ನ ತ್ವಾಂ ಪಶ್ಯಾಮಿ ಚಕ್ಷುಷಾ ।
ರಾಮಂ ಪ್ರತಿ ಗತಾ ಬುದ್ಧಿರದ್ಯಾಪಿ ನ ನಿವರ್ತತೇ ॥

(ಪ್ರತಿಮಾ—೨೭೧)

ನನ್ನ ಮೈಯನ್ನು ಸ್ವಲ್ಪ ಸವರು, ಕೌಸಲ್ಯೆ. ಕಣ್ಣು ಕಾಣಿಸುತ್ತಿಲ್ಲ; ನಿನ್ನನ್ನು ನೋಡಲಾರದವನಾಗಿದ್ದೇನೆ. ರಾಮನ ಹಿಂದೆ ಹೋದ ಬುದ್ಧಿ ಇನ್ನೂ ವಾಪಸುಬಂದಿಲ್ಲ—ಎಂಬದಾಗಿ ಹಂಬಲಿಸುವ ಸಂಸಾರಿ ದಶರಥನ ವಿಷಯದಲ್ಲಿ ನಮ್ಮ ಕನಿಕರವು ಕಂಬನಿಯನ್ನು ತರುವುದು. ಪಾಪ! ದಶರಥನೇನು ಮೂಢನೇ? ತನ್ನೊಳಗಿನ ಮರ್ಮವನ್ನು ಅರಿಯನೇ ? ಮೂರನೆಯ ಹೆಂಡತಿ ಕೈಕೆಯನ್ನು ಮದುವೆಯಾದಾಗ ಅವಳ ಪುತ್ರನಿಗೆ ರಾಜ್ಯಕೊಡುವುದಾಗಿ ಕೈಕೊಯ್ದು ಬರೆದುಕೊಟ್ಟಂತೆ ಮಾತು ಕೊಟ್ಟದ್ದು ಮನದಲ್ಲಿಲ್ಲವೇ ? ಆದರೂ ಲೋಕಾಭಿರಾಮನಾದ ರಾಮನ ಕ್ರಮಪ್ರಾಪ್ತವಾದ ಹಕ್ಕನ್ನೂ ತದನುಗುಣವಾದ ಪ್ರಜಾಭಿಪ್ರಾಯವನ್ನೂ ನಿರಾಕರಿಸುವುದು ತಾನೆ ಹೇಗೆ? ಇಂಥ ಇಕ್ಕಳಕ್ಕೆ ಸಿಕ್ಕಿದ ದಶರಥನು ಒಳಗೇ ಕೊರಗಿ ಕೊನೆಗೆ ಹೀಗೆ ನಿಶ್ಚಯ ಮಾಡಿಕೊಂಡನು—ರಾಮನಿಗೆ ರಾಜ್ಯಾಭಿಷೇಕಮಾಡಿ ಪ್ರಜೆಗಳ ಇಷ್ಟಾರ್ಥವನ್ನು ನೆರವೇರಿಸುವುದು; ಅನಂತರ ರಾಜ್ಯೈಶ್ವರ್ಯವನ್ನು ತಮ್ಮಂದಿರೊಡನೆ ಯಾವಾಗಲೂ ಸಮನಾಗಿ ಅನುಭವಿಸೆಂದು ರಾಮನಿಗೆ ಅಪ್ಪಣೆಮಾಡಿ ತಾನು ತಪೋವನಕ್ಕೆ ಹೋಗುವುದು ಎಂಬದಾಗಿ. ಆದರೆ ಅವನ ಮನೋರಥವೆಲ್ಲವೂ ಕೈಕೆಯ ಕೈವಾಡದಿಂದ ನಿಮಿಷಮಾತ್ರದಲ್ಲಿ ಮುರಿದು ಬಿತ್ತು!
(ಪ್ರತಿಮಾ–ಅಂ. ೨ ಪದ್ಯ ೧೯)

ಈ ಹೀನಸಂಸಾರದಲ್ಲಿ ಇನ್ನೊಂದು ಹೃದಯವಿದ್ರಾವಕ ದೃಶ್ಯ. ದುರ್ಯೋಧನ ತೊಡೆ ಮುರಿದು ರಣರಂಗದಲ್ಲಿ ಬಿದ್ದಿದ್ದಾನೆ. ಅವಸಾನಕಾಲವೂ ಸಮೀಪಿಸುತ್ತಿದೆ. ತಾಯಿತಂದೆಗಳು, ಕೈಹಿಡಿದ ಹೆಂಡಿರು ಮತ್ತು ಕೇವಲ ಐದುವರ್ಷದ ಏಕಮಾತ್ರಪುತ್ರ ದುರ್ಜಯ ಇವರು ಅವನನ್ನು ಹುಡುಕಿಕೊಂಡು ಬರುತ್ತಾರೆ. ತನ್ನ ಬಾಹುಬಲದಿಂದಲೋ ತೇಜಸ್ಸಿನಿಂದಲೋ ಆಶ್ರಿತರಾದ ಇವರೆಲ್ಲರನ್ನೂ ಅಷ್ಟೈಶ್ವರ್ಯದಲ್ಲಿ ಮೆರೆಸಿದ ಧಾತ ಈಗ ಅವರನ್ನು ಕಾಡುಪಾಲು ಮಾಡಿಹೋಗುತ್ತಿದ್ದಾನೆ. ಮಗು ಅಪ್ಪನ ತೊಡೆಯ ಮೇಲೆ ಕೂತುಕೊಳ್ಳಲು ಹೋದಾಗ

ದುರ್ಯೋ—ರೂಢಿಯಾಗಿದ್ದುದನ್ನು ಬಿಟ್ಟು ಈಗ ಎಲ್ಲಾದರಲ್ಲಿ ಕೂತುಕೊ. ಮೊದಲಿನಿಂದ ಅನುಭವಿಸಿದ ಪೀಠವು ಇನ್ನುಮೇಲೆ ನಿನಗಿಲ್ಲವಯ್ಯಾ.

ದು—ಹಾಗಾದರೆ ಮಹಾರಾಜನು ಹೋಗುವುದು ಎಲ್ಲಿಗೆ ?

ದುರ್ಯೋ—ನೂರುಜನ ತಮ್ಮಂದಿರ ಹಿಂದೆ ಹೋಗುತ್ತೇನೆ.

ದು—ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗು.

ದುರ್ಯೋ—ಮಗು, ಹೋಗಿ ವೃಕೋದರನಿಗೆ ಹೇಳಪ್ಪ.

(ಊರು—೫೦೧-೨)

ಯುದ್ಧದಲ್ಲಿ ಪರಾಙ್ಮುಖನಾಗಲಿಲ್ಲವೆಂದು ಸಮಾಧಾನಮಾಡಿಕೊಳ್ಳಿರಿ ಎಂದು ನೆರೆದಿದ್ದ ಮನೆಯ ಜನಕ್ಕೆ ಸಾರಿ ಹೇಳುತ್ತಾನೆ. ವೀರಸ್ವರ್ಗವನ್ನು ಪಡೆಯುವನಾದುದರಿಂದ ಕ್ಷತ್ರಿಯ ರಮಣಿಯರಾದ ಪೌರವಿ ಮಾಲವಿಯರು ಶೋಕವನ್ನು ತಡೆದುಕೊಳ್ಳಬೇಕು. ಪುಣ್ಯವಿದ್ದರೆ ಮುಂದಿನ ಜನ್ಮದಲ್ಲಿಯೂ ನೀನೇ ನನ್ನ

ತಾಯಿಯಾಗಬೇಕೆಂದು ಗಾಂಧಾರೀದೇವಿಗೆ ಬಿನ್ನೈಸುತ್ತಾನೆ. ದುರ್ಜಯನಿಗೆ ಹೇಳುವ ಸಂದೇಶವನ್ನು ಕೇಳಿ—

ಕೇಳು ದುರ್ಜಯ. ನನ್ನಂತೆಯೇ ಪಾಂಡವರನ್ನು ಶುಶ್ರೂಷೆ ಮಾಡು. ಪೂಜ್ಯಳಾದ ಕುಂತೀದೇವಿಯ ಮಾತಿಗೆ ವಿಧೇಯನಾಗಿರು. ಅಭಿಮನ್ಯುವಿನ ತಾಯಿ (ಸುಭದ್ರೆ) ಮತ್ತು ದ್ರೌಪದಿ ಇವರಿಬ್ಬರನ್ನು ತಾಯಿಯಂತೆ ಪೂಜಿಸು. ನೋಡು ಮಗು

ದಿವ್ಯವಾದ ಸಂಪತ್ತನ್ನು ಅನುಭವಿಸಿದವನು ನಮ್ಮ ತಂದೆ. ಅಭಿಮಾನದಿಂದ ದೇದೀಪ್ಯಮಾನವಾದ ಹೃದಯ ಅವನದು. ಸಮಾನಸ್ಕಂಧನೊಡನೆ ರಣದಲ್ಲಿ ಹಿಮ್ಮೆಟ್ಟದೆ ಹೋರಾಡಿ ಮಡಿದ. ಈ ಕಾರಣದಿಂದ ಶೋಕವನ್ನು ತ್ಯಜಿಸಿ ಯುಧಿಷ್ಠಿರನ ಭುಜವನ್ನು ಮುಟ್ಟಿಕೊಂಡು ಪಾಂಡವರ ಜೊತೆ ನನ್ನ ಹೆಸರಿನ ಕೊನೆಯಲ್ಲಿ ಜಲತರ್ಪಣವನ್ನು ಕೊಡು. [ಊರು ೫೦೪-೫]

ಎಲ್ಲಿ ಆ ಕುರುಪುಂಗವನ ನೀಚತನ ? ವೈರವು ಪಶ್ಚಾತ್ತಾಪವಾಗಿ ಪರಿಣಮಿಸಿತು! ಮಹಾಭಾರತ ಯುದ್ಧ, ಪಾಂಡವರ ವಿಜಯ ಅಂತಿರಲಿ. ಲೋಕಸಾಮಾನ್ಯ ದೃಷ್ಟಿಯಿಂದ ನೋಡಿದರೂ ಎಷ್ಟು ಕಠೋರ ಸಂದರ್ಭ ! ಚಿಕ್ಕಸಂಸಾರ. ಕೇವಲ ಸಣ್ಣ ವಯಸ್ಸಿನ ಒಬ್ಬನೇ ಮಗ. ತಾಯಿತಂದೆಗಳು ಮುದುಕರು; ಆಗಲೇ ಕೈನೊಂದವರು. ಸಾಲದುದಕ್ಕೆ ಆಸ್ತಿಪಾಸ್ತಿಗಾಗಿ ಹದ್ದಿನ ಹಾಗೆ ಹೊಂಚುಹಾಕುತ್ತಿರುವ ದಾಯಾದಿಗಳು. ಕಡುತಬ್ಬಲಿಯಾಯಿತು ಸಂಸಾರ !

ಭಾಸನು ಚಿತ್ರಿಸಿರುವ ಸಮಾಜವು ಉನ್ನತಸ್ಥಿತಿಯಲ್ಲಿತ್ತೆಂದು ಹೇಳಬಹುದು. ಜನರ ಆಚಾರವ್ಯವಹಾರಗಳೆಲ್ಲವೂ ವೇದಶಾಸ್ತ್ರಗಳನ್ನವಲಂಬಿಸಿದ್ದುವು. ವರ್ಣಾಶ್ರಮಧರ್ಮಗಳು

ಜನರಿಗೆ ಇನ್ನೂ ಪ್ರಿಯವಾಗಿದ್ದಂತೆ ತೋರುತ್ತದೆ. ಯಜ್ಞಯಾಗಾದಿಗಳು ಹೇರಳವಾಗಿ ನಡೆಯುತ್ತಿದ್ದುವು. ವಿರಕ್ತರು ಶಾಂತಿಗಾಗಿ ತಪೋವನವನ್ನು ಸಾರುವುದು ರೂಢಿಯಲ್ಲಿತ್ತು. ಮತವೈಷಮ್ಯವು ಸಮಾಜದ ನೆಮ್ಮದಿಯನ್ನು ಹಾಳುಮಾಡಿರಲಿಲ್ಲ. ಉಜ್ಜಯಿನೀ ಪಟ್ಟಣದ ಮೇಲ್ಮೆ ಅಲ್ಲಲ್ಲಿ ಸೂಚಿತವಾಗಿದೆ. ಅಲ್ಲಿನ ಸ್ನಾನಘಟ್ಟಗಳು ಪ್ರಸಿದ್ಧ. ಅಲ್ಲದೆ ಊರಿನ ಜನರಿಗೆ ಅನುಕೂಲವಾದ ನೀರಿನ ವ್ಯವಸ್ಥೆ ನಾಗರಿಕ ಲಕ್ಷಣವೇ ಸರಿ. ಅಷ್ಟೇ ಅಲ್ಲ. ವಸಂತಸೇನೆಯಂತಹ ವೇಶ್ಯಾಂಗನೆಯರಿರುವ ಗಣಿಕಾವಾಟಗಳು; ಕಲಾಕೋವಿದರಾದ ವಿಟಜನರು; ಪ್ರೇಯಸಿಗಾಗಿ ಕಳ್ಳತನವನ್ನಾದರೂ ಕುಶಲವಿದ್ಯೆಯೆಂದು ಸಾಹಸಪಡುವ ಖ್ಯಾತಿವಂತರು; ಪರಿಮಳದ್ರವ್ಯಗಳಿಂದ ಘಮಘಮಾಯಿಸುವ ವಸ್ತ್ರಗಳನ್ನು ಹೊದೆಯುವ ಶೃಂಗಾರಪ್ರಿಯರು; ಚಾರುದತ್ತನಂಥ ಶೀಲವಂತರು, ತ್ಯಾಗಿಗಳು; ವೇಶ್ಯಾಜನರೂ ನಾಗರಿಕ ಜನರೂ ಕೂಡ ಸಾಯಂಕಾಲ ತಮ್ಮ ತಮ್ಮ ವಿಶೇಷವಾದ ಅಲಂಕಾರವನ್ನು ಪ್ರದರ್ಶಿಸುತ್ತಾ ಉಪ್ಪರಿಗೆಗಳ ಮೇಲೆ ನಲಿದಾಡುವರು; ಇದರ ಮೇಲೆ ನಾನಾ ಉತ್ಸವಗಳು, ವಿಧವಿಧವಾದ ಉದ್ಯಾನಗಳು—ಇವೆಲ್ಲವನ್ನೂ ನೋಡಿದರೆ ಜನಜೀವನವು ವಿಲಾಸಮಯವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಮಂತ್ರತಂತ್ರಗಳಲ್ಲಿ ಜನರಿಗೆ ವಿಶ್ವಾಸ. ವತ್ಸರಾಜ ಬೇಟೆಗೆ ಹೋಗುವ ಮುನ್ನ ರಕ್ಷೆ ಕಟ್ಟಿಕೊಂಡುಹೋಗಬೇಕೆಂದು ಮಹಾರಾಣಿಯ ಏರ್ಪಾಡು. ವಿದ್ಯಾಧರನು ಕೊಟ್ಟ ಮಾಯಾ ಉಂಗುರದ ಸಹಾಯದಿಂದ ಅವಿಮಾರಕನು ಅದೃಶ್ಯನಾಗುವ ಶಕ್ತಿಯನ್ನು ಪಡೆದು ಕನ್ಯಾಂತಃಪುರದಲ್ಲಿ ಕುರಂಗಿಯೊಡನೆ ಸ್ವೇಚ್ಛೆಯಾಗಿ ವಿಹರಿಸುವನು.

ಆರ್ಯಾವರ್ತದಲ್ಲಿ ಅನೇಕ ರಾಜ್ಯಗಳು ಪ್ರವರ್ಧಮಾನ ವಾಗಿದ್ದುವು. ಅವಂತಿ, ಅಂಗ, ವಂಗ, ಕಾಶಿ, ಮಿಥಿಲ, ಮಗಧ, ವತ್ಸ, ಸೌವೀರ, ಸೌರಾಷ್ಟ್ರ, ಮುಂತಾದ ರಾಜ್ಯ ಗಳು ಹೇಳಲ್ಪಟ್ಟಿವೆ. ರಾಜಕೀಯ ಪದ್ಧತಿಯು ಕೌಟಿಲ್ಯನ ಅರ್ಥಶಾಸ್ತ್ರವನ್ನು ಅನುಸರಿಸಿತ್ತೆಂದು ವ್ಯಕ್ತವಾಗಿದೆ. ರಾಜ್ಯ ತಂತ್ರದಲ್ಲಿ ಪ್ರಜೆಗಳಿಗೆ ಎಷ್ಟು ಭಾಗ ಮೀಸಲಾಗಿತ್ತೆಂದು ನಿರ್ಣಯಿಸಲು ಹೆಚ್ಚು ಆಧಾರ ಈ ನಾಟಕಗಳಲ್ಲಿ ಸಿಕ್ಕುವು ದಿಲ್ಲ. ರಾಜಾಯತ್ತ, ಸಚಿವಾಯತ್ತ ಮತ್ತು ಉಭಯಾ ಯತ್ತ ಸಿದ್ಧಿಗಳಿಗೆ ನಿದರ್ಶನಗಳಿವೆ. ಪ್ರಜಾಯ[illegible] ಅಷ್ಟಾಗಿ ಕಾಣಬರುವುದಿಲ್ಲ. ಪ್ರಜೆಗಳು ತಮ್ಮ ಯೋ[illegible]ಂದ[illegible]ಡು ಗಳಿಗೆ ಪೂರ್ಣವಾಗಿ ರಾಜನನ್ನೇ ನಂಬಿದ್ದರು. ಅವ[illegible] ಭವಿಸುವುದು ರಾಜ ಕೊಟ್ಟ ಅನ್ನ. ಕಷ್ಟಕಾಲದಲ್ಲಿ [illegible] ರಾಜನಿಗೆ ತನುಮನಧನಗಳನ್ನರ್ಪಿಸಲು ಸಿದ್ಧರಾಗಿರಬೇಕು. ಇಲ್ಲದಿದ್ದರೆ ನರಕ. ಯುದ್ಧದಲ್ಲಿ ಶೌರ್ಯದಿಂದ ಹೋರಾ ಡಿದವರಿಗೆ ಸನ್ಮಾನವಿಲ್ಲದೆ ಇರಲಿಲ್ಲ. ಅವರಿಗೆ ಪೂರ್ಣ ಕುಂಭ ಲಭಿಸುತ್ತಿತ್ತು. ಯುದ್ಧಪ್ರಸಂಗ ಒದಗಿದಾಗ ರಾಜರು ಮಂತ್ರಿ, ಸೇನಾಪತಿ, ಮಿತ್ರರಾಜರು ಇವರೊಡನೆ ಮಂತ್ರಾ ಲೋಚನೆಯನ್ನು ಮಾಡುತ್ತಿದ್ದುದು ನಿಜ. ಆದರೆ ರಾಜ್ಯದಲ್ಲಿ ಶಾಂತಿ ನೆಲೆಗೊಂಡಿದ್ದಾಗ ಆಡಳಿತದಲ್ಲಿ ಪ್ರಜಾಸಾಮಾನ್ಯಕ್ಕೆ ಯಾವ ಭಾಗವೂ ಇದ್ದಂತೆ ತೋರುವುದಿಲ್ಲ. ಪ್ರಜೆಗಳು, ಪುರೋ ಹಿತರು, ಸಾಮಂತರಾಜರು ಇವರೆಲ್ಲರ ಅಭಿಪ್ರಾಯ ಪಡೆದು ರಾಮನಿಗೆ ರಾಜ್ಯಾಭಿಷೇಕ ಮಾಡಬೇಕೆಂದು ದಶರಥ ನಿಶ್ಚಯಿಸು ತ್ತಾನೆ. ಅವನ ರಹಸ್ಯ ವಾಗ್ದಾನದ ಪ್ರಕಾರ ಭರತನಿಗೆ ಹಕ್ಕು; ಪ್ರಜೆಗಳಿಗಾದರೋ ರಾಮ ಬೇಕು. ಅವರ ಇಷ್ಟವನ್ನು ಮೀರಲು

ರಾಜನಿಗೆ ಇಷ್ಟವಿಲ್ಲ. ಆದುದರಿಂದ ಉಭಯ ಪಕ್ಷಕ್ಕೂ ಸಂತೋಷವಾಗುವಂತೆ ಮಾಡಲು ಅವನ ಆಕ್ಷಾಂಕ್ಷೆ. ಶತ್ರುಗಳಿಗೆ ಪರಸ್ಪರ ರಾಜಿಸಂಧಾನಗಳು, ಸಂದೇಶಪ್ರತಿಸಂದೇಶಗಳು ದೂತವಾಕ್ಯ, ದೂತಘಟೋತ್ಕಚಗಳಲ್ಲಿ ಪ್ರತಿಬಿಂಬಿತವಾಗಿವೆ. ಏಕಚ್ಛತ್ರಾಧಿಪತ್ಯವನ್ನು ಬಯಸುವುದರಲ್ಲಿ ಏಕಚ್ಛತ್ರಾಧಿಪತಿಯೆಂದು ಹೇಳಿಕೊಳ್ಳುವದರಲ್ಲಿ ಅಡ್ಡಿಯೇನೂ ಇರಲಿಲ್ಲ. ಇದಕ್ಕೆ ಭರತ ವಾಕ್ಯಗಳೇ ಸಾಕ್ಷಿ.

ಇಮಾಮಪಿ ಮಹೀಂ ಕೃತ್ಸ್ನಾಂ ರಾಜಸಿಂಹಃ ಪ್ರಶಾಸ್ತು ನಃ ।
ವಾಟಗ ರಾಜಗುಣೋಪೇತೋ ಭೂಮಿಮೇಕಃ ಪ್ರಶಾಸ್ತು ನಃ ।
ಗಾಗಿ ಸಾಗರಪರ್ಯಂತಾಂ ಹಿಮವದ್ವಿಂಧ್ಯಕುಂಡಲಾಮ್ ।
ಪಡು ಮೇಕಾತಪತ್ರಾಂಕಾಂ ರಾಜಸಿಂಹಃ ಪ್ರಶಾಸ್ತು ನಃ ॥ ಇತ್ಯಾದಿ

ಋುಷಸೇನನ ಆಜ್ಞೆಯೆನ್ನುವುದು ಪೊದೆಯಲ್ಲಿ ಬಿದ್ದ ಬೆಂಕಿಯಂತೆ ಮೇದಿನಿಯನ್ನೇ ಆವರಿಸಿ ದಹಿಸುವುದು !

ಇನ್ನು ಅಲ್ಲಲ್ಲಿ ಕಾಣುವ ಕೆಲವು ಅಮೋಘವಾದ ಲೋಕತತ್ವಗಳನ್ನು ನೆನೆಸಿ ಈ ಸಣ್ಣ ವಿಮರ್ಶೆಯನ್ನು ಮುಕ್ತಾಯಗೊಳಿಸಬಹುದು.

ಮನುಷ್ಯನ ಜೀವಮಾನದಲ್ಲಿ ಭಾಗ್ಯವು (ಸುಖದುಃಖಗಳು) ಚಕ್ರದಂತೆ ಉರುಳುತ್ತಿರುತ್ತದೆ. ಇವತ್ತು ಸುಖ ನಾಳೆ ದುಃಖ ಮತ್ತೆ ಸುಖ ಮತ್ತೆ ದುಃಖ—

ಚಕ್ರಾರಪಂಕ್ತಿರಿವ ಗಚ್ಛತಿ ಭಾಗ್ಯಪಂಕ್ತಿಃ (ಸ್ವಪ್ನ-೨).

ದಶರಥನಂತಹ ಮಹಾರಾಜ ಶಾಪಗ್ರಸ್ತನಾದುದು, ಶ್ರೀರಾಮಚಂದ್ರ ವನವಾಸಮಾಡಬೇಕಾದುದು—ಇವೆಲ್ಲವೂ ವಿಧಿವಿಲಾಸ ; ಪುರುಷಪ್ರಯತ್ನಕ್ಕೆ ಮೀರಿದ್ದೆಂದು ಭಾಸನ ಮತ. ಏಕೆಂದರೆ

ಕಃ ಕಂ ಶಕ್ತೋ ರಕ್ಷಿತುಂ ಮೃತ್ಯುಕಾಲೇ
ರಜ್ಜುಚ್ಛೇದೇ ಕೇ ಘಟಂ ಧಾರಯನ್ತಿ ॥
ಏವಂ ಲೋಕಸ್ತುಲ್ಯಧರ್ಮೋ ನರಾಣಾಂ
ಕಾಲೇ ಕಾಲೇ ಛಿದ್ಯತೇ ರುಹ್ಯತೇ ಚ ॥ (ಸ್ವಪ್ನ-ಅಂ ೬. ಪ ೨೦)

ಮೃತ್ಯು ಒದಗಿದರೆ ರಕ್ಷಿಸಬಲ್ಲರಾರು? ಹಗ್ಗ ಕಿತ್ತಾಗ ಬಿಂದಿಗೆ ಹಿಡಿದುಕೊಳ್ಳಲಾಪರಾರು? ಲೋಕಧರ್ಮವೇ ಹೀಗೆ. ಅದರ ದರ ಕಾಲದಲ್ಲಿ ಬೆಳೆಯುತ್ತದೆ. ಅದರದರ ಕಾಲದಲ್ಲಿ ಬೀಳುತ್ತದೆ. ಆದರೆ ಮನುಷ್ಯನ ಪ್ರಯತ್ನಕ್ಕೆ ಪ್ರಾಶಸ್ತ್ಯವಿಲ್ಲದೇ ಇಲ್ಲ. ಸದಾ ಯತ್ನಶೀಲನಾದ ಮಂತ್ರಿ ಯೌಗಂಧರಾಯಣನ ಅಭಿಪ್ರಾಯದಲ್ಲಿ—

ಕಾಷ್ಠಾದಗ್ನಿರ್ಜಾಯತೇ ಮಥ್ಯಮಾನಾತ್
ಭೂಮಿಸ್ತೋಯಂ ಖನ್ಯಮಾನಾ ದದಾತಿ ।
ಸೋತ್ಸಾಹಾನಾಂ ನಾಸ್ತ್ಯಸಾಧ್ಯಂ ನರಾಣಾಂ
ಮಾರ್ಗಾರಬ್ಧಾಃ ಸರ್ವಯತ್ನಾಃ ಫಲನ್ತಿ ॥ (ಪ್ರತಿಜ್ಞಾ-೭೨)

ಕಟ್ಟಿಗೆಯನ್ನು ಕಡೆದರೆ ಬೆಂಕಿ; ಭೂಮಿಯನ್ನು ಅಗೆದರೆ ನೀರು; ಉತ್ಸಾಹಿಜನರಿಗೆ ಯಾವುದೂ ಅಸಾಧ್ಯವಲ್ಲ. ತಕ್ಕ ರೀತಿಯಲ್ಲಿ ಮಾಡಿದ ಪ್ರಯತ್ನಗಳು ಫಲಿಸುವುದು ಖಂಡಿತ. ತತ್ವಶಾಸ್ತ್ರದ ಭಾಷೆಯನ್ನುಪಯೋಗಿಸದೆ, ಕೃಷ್ಣಪರಮಾತ್ಮನನ್ನು ಕುರಿಯದೆ ಭಾಸನು ಯೌಗಂಧರಾಯಣನ ಮೂಲಕ ಕರ್ಮಯೋಗವನ್ನು ಬೋಧಿಸಿದ್ದಾನೆ.

ಸಂಸಾರತಾಪತ್ರಯದಿಂದ ಪಾರಾದವರಿಗೆ ಅರಣ್ಯವಾಸ ಮೇಲು; ಇಷ್ಟಾರ್ಥ ಸಿದ್ಧಿಯಾಗಿ ಯಶಸ್ವಿಗಳಾದವರು (ಅಪಯಶಸ್ಸು ಬರುವ ಮುನ್ನ) ಯಶಸ್ಸಿನ ಮಧ್ಯದಲ್ಲಿಯೇ

ಸಾಯುವುದು ಚೆನ್ನು; ಧರ್ಮಾರ್ಜನೆ ಮಾಡಿದವರು ಮರಣ ಹೊಂದಿದರೆ ಏಕೆ ಪಶ್ಚಾತ್ತಾಪ?—

ಸುಖಂ ಖಲು ನಿಷ್ಕಲತ್ರಾಣಾಂ ಕಾಂತಾರಪ್ರವೇಶಃ । ರಮಣೀಯತರಃ ಖಲು ಪ್ರಾಪ್ತಮನೋರಥಾನಾಂ ವಿನಿಪಾತಃ । ಅಪಶ್ಚಾತ್ತಾಪಕರಃ ಖಲು ಸಂಚಿತಧರ್ಮಾಣಾಂ ಮೃತ್ಯುಃ ॥ (ಪ್ರತಿಜ್ಞಾ—೧೦೧)

ರಾಜ್ಯತಂತ್ರದಲ್ಲಿ ನಿರತನಾದ ಮಂತ್ರಿಗೆ ಸುಖವೆಲ್ಲಿಯದು? ಮುಂದೇನಾಗುವುದೋ ಎಂದು ಯಾವಾಗಲೂ ಕಾತರ. ಬೆಳಗಾದರೆ ಸಂಜೆಯಾದೀತೇ, ಸಂಜೆಯಾದರೆ ಬೆಳಗಾದೀತೇ ಎಂದು ಸದಾ ಆತಂಕ. ಆದುದರಿಂದ ಕಳೆದುಹೋದ ಗಂಡಾಂತರಗಳನ್ನು ಸ್ಮರಿಸಿಕೊಂಡು ತೃಪ್ತಿಹೊಂದಬೇಕು.

ಅಹಸ್ಸಮುತ್ತೀರ್ಯ ನಿಶಾ ಪ್ರತೀಕ್ಷ್ಯತೇ
ಶುಭೇ ಪ್ರಭಾತೇ ದಿವಸೋಽನುಚಿಂತ್ಯತೇ ।
ಅನಾಗತಾನ್ಯಶುಭಾನಿ ಪಶ್ಯತಾಂ
ಗತಂ ಗತಂ ಕಾಲಮವೇಕ್ಷ್ಯ ನಿರ್ವೃತಿಃ ॥ (ಪ್ರತಿಜ್ಞಾ—೮೯)

ಈ ವಿವೇಕವು ಲೋಕಕ್ಕೆಲ್ಲಾ ಅನ್ವಯಿಸುವುದು.

ಲೋಕದಲ್ಲಿ ಉಪಕಾರಮಾಡುವವರು ಹೇರಳವಾಗಿದ್ದಾರೆ. ಆದರೆ ಅವರನ್ನು ಕೃತಜ್ಞತೆಯಿಂದ ಸ್ಮರಿಸುವವರು ವಿರಳ (ಸ್ವಪ್ನ—೩೪). ಅಸತ್ಪುರುಷರ ಸೇವೆ ನಿಷ್ಫಲ (ಚಾರು—೧. ೧೯). ಈ ಪ್ರಕಾರವಾದ ನಿರಾಶೆ ಭಾಸನ ಮನಸ್ಸಿಗೆ ಬರದೇ ಇಲ್ಲ. ಪ್ರಪಂಚದಲ್ಲಿ ಯಾವುದು ತಾನೇ ಶಾಶ್ವತ? ಕಲಿತದ್ದು ಮರೆತುಹೋಗುವುದು; ಬೇರು ಬಿಟ್ಟ ಮರವೂ ಕೂಡ ಬೀಳುವುದು; ಕೆರೆಬಾವಿಗಳು ಬತ್ತಿಹೋಗುವುವು—ಆದರೆ ಯಾಗಮಾಡಿದುದು,

ತ್ಯಾಗಮಾಡಿದುದು ಶಾಶ್ವತವಾಗಿ ನಿಲ್ಲುವುವು. (ಕರ್ಣ—೨೨). ಮನು, ನಹುಷ, ಮಾಂಧಾತ, ನೃಗ, ಅಂಬರೀಷ ಮೊದಲಾದ ರಾಜಶ್ರೇಷ್ಠರು ಅವರು ಮಾಡಿದ ಮಹಾಯಾಗಗಳಿಂದ ನಮ್ಮ ಮನಸ್ಸಿನಲ್ಲಿ ನಿಂತಿದ್ದಾರೆ. ಆದುದರಿಂದ ಸರ್ವದಾ ಮನುಷ್ಯ ನಾದವನು ಒಳ್ಳೆಯ ಕೆಲಸಗಳನ್ನು ಮಾಡಬೇಕು; ಪುಣ್ಯವನ್ನು ಗಳಿಸಬೇಕು. ಲೋಕಸೇವೆಯಿಂದ ಜನ್ಮ ಸಾರ್ಥಕವಾಗುತ್ತದೆ ; ಹೆಸರು ಶಾಶ್ವತವಾಗುತ್ತದೆ.

" ಸರ್ವತ್ರ ಸಂಪದಸ್ಸನ್ತು
ನಶ್ಯನ್ತು ವಿಪದಸ್ಸದಾ ।
ರಾಜಾ ರಾಜಗುಣೋಪೇತೋ
ಭೂಮಿಮೇಕಃ ಪ್ರಶಾಸ್ತು ನಃ " ॥